ಚಿಂತನ ಬಯಲು

ತ್ರೈಮಾಸಿಕ
ISSN 2278-2192

ಸಂಪುಟ : 9, ಸಂಚಿಕೆ : 2 ಅಕ್ಟೋಬರ್ – ಡಿಸೆಂಬರ್ 2020
Volume : 9, Issue : 2 October - December 2020

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಎಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ್
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal
Volume 9, Issue 2, October-December 2020

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Phone : 9449772651
Email : chinthanabayalu@gmail.com

© : Reserved

Size : Dy 1/8

Paper Used : 70 GSM

Pages : 64

Price : Rs. 50

ಮುಖಪುಟ ಚಿತ್ರ : **ವಿಧಾನಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆ**

Cover Photo by : **Girisha Bhat**

Cover Design : **Kallur Nagesh**

Designed & Printed at :
Aakrithi Prints
Maximus Complex
Light House Hill Road
Mangaluru - 575 001
Tel. : 0824 2972002

ಸೂಚನೆ : ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. **ಯಶೋಧರ ಚರಿತೆ**
ಹುಟ್ಟು ಮರುಹುಟ್ಟುಗಳ ಆಧುನಿಕ ವ್ಯಾಖ್ಯಾನ
❖ ಡಾ. ಧನಂಜಯ ಕುಂಬ್ಳೆ / 5

2. **ಉಡುಪಿಯ ಮಾಸಪತ್ರಿಕೆ 'ವೀರಭೂಮಿ':**
ಪತ್ರಿಕೋದ್ಯಮದ ಒಂದು ಮರೆತ ಅಧ್ಯಾಯ
❖ ಡಾ. ಬಿ. ಜನಾರ್ದನ ಭಟ್ / 9

3. **ಸೆರೆಂಡಿಪಿಟಿ :**
ಸಂಜೀವಿನಿ ಶೋಧಕರ ಸೀಮೋಲ್ಲಂಘನದ ಕಥೆಗಳು
❖ ಡಾ. ಸುದರ್ಶನ ರಾವ್ / 22

4. **ಪರಿಸರ ಪತ್ರಿಕೋದ್ಯಮದಲ್ಲಿ 'ಹಸಿರುವಾಸಿ'**
ನಿಯತಕಾಲಿಕದ ಹೊಸ ಪ್ರಯೋಗ
❖ ಡಾ. ಹಂಪೇಶ್ ಕೆ.ಎಸ್.
❖ ಡಾ. ಸತೀಶ್ ಕುಮಾರ್ / 26

5. **ಹಾಸ್ಯ ಪರ್ಪಂಚ**
❖ ರೇಶ್ಮಾ ಭಟ್ / 42

6. **ಕನ್ನಡ ಕಾದಂಬರಿಗಳಲ್ಲಿ ಸಂಗೀತ**
❖ ಚೈತನ್ಯ ಮಜಲುಕೋಡಿ / 49

ಸಂಪಾದಕೀಯ

ಈ ಶತಮಾನವನ್ನು ಮುಕ್ತ ಸಾಹಿತ್ಯದ ಯುಗ ಅಥವಾ ಮುಕ್ತ ಅಭಿವ್ಯಕ್ತಿಯ ಯುಗ ಎಂದು ಕರೆಯಬಹುದು. ಯಾಕೆಂದರೆ, ಮಾಹಿತಿ ತಂತ್ರಜ್ಞಾನದೊಂದಿಗೆ ಸಾಮಾಜಿಕ ಜಾಲತಾಣಗಳು ಬಂದ ನಂತರ ಬರೆಯುವವರಿಗೆ ಅಭಿವ್ಯಕ್ತಿಯ ಅವಕಾಶ ದೊರೆತಂತಾಗಿದೆ. ಇದರೊಂದಿಗೆ ಇನ್ನೊಂದು ಬಹುಮುಖ್ಯ ಬದಲಾವಣೆಯನ್ನು ಕೂಡ ನಾವು ಗುರುತಿಸಬೇಕು. ಸಾಹಿತ್ಯದ ಕುರಿತ ಬರವಣಿಗೆಯು ಸಾಹಿತ್ಯ ಬೋಧಕರ ಏಕಸ್ವಾಮ್ಯದಿಂದ ತಪ್ಪಿ ಹೋಗಿ ಅನ್ಯಾನ್ಯ ಕ್ಷೇತ್ರಗಳಲ್ಲಿ ಕೆಲಸ ಮಾಡುವವರು ಇದರಲ್ಲಿ ತೊಡಗಿಸಿಕೊಳ್ಳುವಂತಾಗಿದೆ. ಇದು ನಿಜವಾಗಿ ಬಹುಮುಖ್ಯವಾದ ಧನಾತ್ಮಕ ಬೆಳವಣಿಗೆ. ನಮ್ಮ ಪತ್ರಿಕೆಯಲ್ಲಿ ಈವರೆಗೆ ಪ್ರಕಟವಾದ ಲೇಖನಗಳನ್ನು ನೋಡಿದರೂ ಇಲ್ಲಿ ಹೊಸಬರು ಹಾಗೂ ವಿವಿಧ ವೃತ್ತಿಗಳ ಅನುಭವವುಳ್ಳವರು ಸಾಹಿತ್ಯ ಮತ್ತು ಸಂಸ್ಕೃತಿಯ ಕುರಿತಾದ ಚಿಂತನೆಯನ್ನು ವಿಶೇಷ ಒಳನೋಟಗಳೊಂದಿಗೆ ಬೆಳೆಸಿರುವುದನ್ನು ಕಾಣುತ್ತೀರಿ. ಚಿಂತನ ಬಯಲು ಪತ್ರಿಕೆಯನ್ನು ಓದುವವರಲ್ಲೂ ಹೆಚ್ಚಿನವರು ಶೈಕ್ಷಣಿಕ ಅಥವಾ ಸಾಹಿತ್ಯ ಕ್ಷೇತ್ರದಿಂದ ಹೊರಗಿನವರೇ. ಇಂದು ಒಳ್ಳೆಯ ವಿಮರ್ಶೆ ಅಥವಾ ಕಥೆ ಕಾದಂಬರಿಗಳು ಬರುತ್ತಿರುವುದು ಎಲ್ಲಿಂದ ಮತ್ತು ಯಾಕೆ ಎನ್ನುವುದು ಕೂಡ ಅತ್ಯಂತ ಮುಖ್ಯವಾಗಿ ಚಿಂತನೆ ಮಾಡಬೇಕಾದ ವಿಚಾರವಾಗಿದೆ. ಈ ಸಂಚಿಕೆಯಲ್ಲಿರುವ ವೈವಿಧ್ಯಮಯ ಲೇಖನಗಳನ್ನು ಓದಿ ದಯವಿಟ್ಟು ಪ್ರತಿಕ್ರಿಯೆ ನೀಡಿರಿ.

ಸಂ.

ಯಶೋಧರ ಚರಿತೆ
ಹುಟ್ಟು ಮರುಹುಟ್ಟುಗಳ ಆಧುನಿಕ ವ್ಯಾಖ್ಯಾನ

ಡಾ. ಧನಂಜಯ ಕುಂಬ್ಳೆ
ಸಹಾಯಕ ಪ್ರಾಧ್ಯಾಪಕ, ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

ಮನುಷ್ಯನ ಮೂಲ ಪ್ರವೃತ್ತಿಯನ್ನು ಕುರಿತು ಅಥವಾ 'ಭವ ಪ್ರಕೃತಿ–ವಿಕೃತಿ'ಯನ್ನು ಅರ್ಥಾತ್ ಪ್ರಕೃತಿಯ ಸಹಜನಡೆ ಯಾ ವಿಚಿತ್ರನಡೆಯನ್ನು ಕುರಿತ ಸೂಕ್ಷ್ಮವಾದ ಸಂವೇದನೆಯನ್ನು ಒಳಗೊಂಡ ಕೃತಿ ಮಾತ್ರ ತನ್ನ ರಚನೆಯ ಕಾಲ, ದೇಶ, ಧರ್ಮಗಳ ಚೌಕಟ್ಟನ್ನು ಮೀರಿ ಕಾಲಾತೀತ ಸ್ಪಂದನವನ್ನು ಹೊಂದಬಲ್ಲುದು. ಈ ಸಾರ್ವಕಾಲಿಕತೆ ಅಷ್ಟು ಸುಲಭ ಸಾಧ್ಯವಲ್ಲ. ಆದ್ದರಿಂದಲೇ ರಚನೆಗೊಂಡ ಸಾವಿರಾರು ಕೃತಿಗಳ ನಡುವೆ ಕೆಲವೇ ಕೆಲವು ಕೃತಿಗಳು ಮಾತ್ರ ಎಲ್ಲಾ ಕಾಲದಲ್ಲೂ ಮತ್ತೆ ಮತ್ತೆ ಮರುಓದಿಗೆ ಒಳಗಾಗುತ್ತವೆ. ಅಂತಹ ಗುಣವುಳ್ಳ ಕೃತಿ ಯಶೋಧರ ಚರಿತೆ.

ಆಧುನಿಕರನ್ನೂ ಪ್ರಭಾವಿಸಿದ ಬಹುಕಾಲದಿಂದ ಸಹೃದಯರನ್ನು ಕಾಡುತ್ತಾ ಬಂದ ಕವಿ ಜನ್ನ. ಆಧುನಿಕ ವ್ಯಾಖ್ಯಾನ ಎಂದರೆ ಏನು? ನಿರಂತರ ಬದಲಾವಣೆಗೆ ಬೇಕಾದ ಮನಸ್ಸನ್ನು ಹೊಂದಿರುವ ಮನಸ್ಥಿತಿಯದು. ಕಾರ್ನಾಡರ ಯಯಾತಿಯ ಆರಂಭದಲ್ಲಿ ಬರುವಂತೆ 'ಪರಂಪರೆಯ ಹರಿವಲ್ಲಿ ವರ್ತಮಾನದ ಬಿಂಬ'ಗಳನ್ನು ನೋಡೋದು. ಈ ಮಾತುಗಳ ಹಿನ್ನೆಲೆಯನ್ನಿಟ್ಟುಕೊಂಡು ಯಶೋಧರ ಚರಿತೆಯ ಕುರಿತು ಕೆಲವು ಯೋಚನೆಗಳು ಇಲ್ಲಿವೆ.

ಇಡೀ ಜಗತ್ತು ಅತೀ ಹೆಚ್ಚು ಹೆದರಿದ್ದು ಯಾವುದಕ್ಕೆ ಎಂಬ ಪ್ರಶ್ನೆಯನ್ನು ಎತ್ತಿಕೊಂಡರೆ ಮೊದಲು ಕಾಮಕ್ಕೆ. ಮತ್ತೆ ಹಿಂಸೆಗೆ. ಯಾಕೆ? ಯಾಕೆಂದರೆ 'ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ'. ಆದ್ದರಿಂದಲೇ ಎಲ್ಲ ಧಾರ್ಮಿಕ, ಸಾಮಾಜಿಕ ಚಿಂತನೆಗಳು ಈ ಕಾಮದ ನಿಯಂತ್ರಣಕ್ಕೆ, ನೈತಿಕ ಚೌಕಟ್ಟಿನ ಬದುಕಿಗೆ ಅತೀ ಹೆಚ್ಚಿನ ಪ್ರಾಮುಖ್ಯವನ್ನು ನೀಡಿತು. ಹಿಂಸೆಗಿಂತಲೂ ಒಂದು ಗುಲಗುಂಜಿಯಷ್ಟು ಹೆಚ್ಚೇ ಕಾಮದ ನಿಯಂತ್ರಣಕ್ಕೆ ಅದರಲ್ಲೂ ಹೆಣ್ಣು ಗಂಡಿನ ನಡುವಣ ದೈಹಿಕ ಕಾಮಾಸಕ್ತಿಗೆ ಹೆದರಿದ ನಮ್ಮ ಸಮಾಜ ವಿವಾಹ, ದಾಂಪತ್ಯ, ಕುಟುಂಬ ವ್ಯವಸ್ಥೆಯನ್ನು ಆದರ್ಶವೆಂದು ಪರಿಗಣಿಸಿತು. ಹಾಗಿದ್ದಾಗ್ಯೂ ಈ ಚೌಕಟ್ಟನ್ನೂ ಮೀರಿ, ಸ್ವಚ್ಛಂದ, ವಿಕ್ಷಿಪ್ತ, ವಿಕೃತ ಕಾಮದ ಪ್ರಕರಣಗಳು ನಡೆಯುತ್ತಿದ್ದವು. ಅಂತಹ ಒಂದು ಪ್ರಸಂಗ ಯಶೋಧರ ಚರಿತೆಯಲ್ಲಿ ಬರುವ 'ಅಮೃತಮತಿ ಬದಗರ ಪ್ರಣಯ' ಪ್ರಸಂಗ.

ಜನ್ನ ಎತ್ತುವ ಇನ್ನೊಂದು ಪ್ರಶ್ನೆ ಹಿಂಸೆಯದ್ದು. ಅದರಲ್ಲೂ ಸಂಕಲ್ಪ ಹಿಂಸೆಯದ್ದು. ಕೆಲವರು ಕೇಳುವುದಿದೆ. ಸಂಕಲ್ಪ ಹಿಂಸೆಯೇ ತಪ್ಪು ಎನ್ನುವ ಅತಿಯನ್ನು ಸಾರಿದ ಜೈನರು ರಾಜ್ಯ ಆಳಲಿಲ್ಲವೇ? ಯುದ್ಧ ಮಾಡಲಿಲ್ಲವೇ? ಎಂದು. ಹಿಂಸೆಯಲ್ಲಿ ಎರಡು ವಿಧ. ಒಂದು ಸಹಜ ಹಿಂಸೆ. ಇನ್ನೊಂದು ಸಂಕಲ್ಪ ಹಿಂಸೆ. ಆಹಾರಕ್ಕಾಗಿ ಪ್ರಾಣಿಗಳನ್ನು ಬೇಟೆಯಾಡೋದು, ಮೀನು, ಕೋಳಿ ತಿನ್ನೋದು, ರಾಜ ಆಕ್ರಮಣ ಮಾಡೋದು, ಆಕಸ್ಮಿಕ ಅಪಘಾತದಿಂದ ಉಂಟಾಗುವ ಸಾವು ನೋವು ಇತ್ಯಾದಿಗಳು ಸಹಜ ಸಾವಿನ ಸಾಲಿಗೆ ಸೇರುವಂತವು.

ಯಾಕೆಂದರೆ ಇಲ್ಲಿ ಗುರಿ ಹಿಂಸೆಯದಲ್ಲ. ಮನಸ್ಥಿತಿಯೂ ಹಿಂಸೆ ಮಾಡಬೇಕೆಂಬ ಉದ್ದಿಶ್ಯದಿಂದ ರೂಪುಗೊಂಡದ್ದಲ್ಲ. ಯಾವಾಗ ಗುರಿ, ಮನಸ್ಥಿತಿ ಎರಡೂ ಹಿಂಸೆಯನ್ನೇ ಲಕ್ಷ್ಯವಾಗಿಸಿಕೊಳ್ಳುತ್ತದೋ ಆಗ ಅದು ಸಂಕಲ್ಪ ಹಿಂಸೆ ಎನಿಸಿಕೊಳ್ಳುತ್ತದೆ. ವರ್ತಮಾನದ ಮಾನವ ಬಾಂಬರ್‌ಗಳನ್ನು, ಭಯೋತ್ಪಾದನೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಯಶೋಧರ ಚರಿತೆ ಈ ಸಂಕಲ್ಪ ಹಿಂಸೆಯ ಪಾಪವನ್ನು ಕುರಿತು ಚಿಂತಿಸುತ್ತದೆ.

ಈಗಾಗಲೇ ಸೂಚಿಸಿದಂತೆ ಯಶೋಧರ ಚರಿತೆ ಕಾಮ ಮತ್ತು ಹಿಂಸೆ ಎಂಬ ಮುಖ್ಯವಾದ ಈ ಎರಡು ಕೇಂದ್ರಗಳನ್ನಿಟ್ಟುಕೊಂಡು ಕಟ್ಟಲ್ಪಟ್ಟಿದೆ. ಈ ಎರಡೂ ಪ್ರವೃತ್ತಿಗಳು ಮನುಷ್ಯನ ಬದುಕನ್ನು ಬೇಟೆಯಾಡುತ್ತಾ ಬರುವ ರೂಪಕವೊಂದು ಕಾವ್ಯದಲ್ಲಿ ಬರುತ್ತದೆ. ಯಶೋಧರನು ಅಮೃತಮತಿ–ಬದಗರ ಕಾಮದಾಟವನ್ನು ನೋಡಿದ ಬಳಿಕ ತಾಯಿ ಚಂದ್ರಮತಿಯ ಬೇಡಿಕೆಯಂತೆ ಹಿಟ್ಟಿನ ಹುಂಜವನ್ನು ಬಲಿ ಕೊಡುವಾಗ ಅದರಿಂದ ಹಾರಿದ ಬೆಂತರದ ಕೂಗು ಕೇಳಿಸುತ್ತದೆ. ಆಗ ಯಶೋಧರನು

ಅಮೃತಮತಿಯೆಂಬ ಪಾತಕಿ
ಯ ಮಾಯೆ ಬನವಾಯ್ತು, ಚಂದ್ರಮತಿ ಮಾತೆಯ ಮಾ
ತೆಮಗೆ ಬಲೆಯಾಯ್ತು, ಹಿಂಸನ
ಮಮೋಘ ಶರಮಾಯ್ತು ಕೆಡೆದುದಾತ್ಮಕುರಂಗಂ

ಎನ್ನುತ್ತಾನೆ. ಅಮೃತಮತಿಯೇ ಇಡೀ ಬನ, ಈ ಕ್ರಿಯೆಗೆ ತೊಡಗಿಸಿದ ಚಂದ್ರಮತಿ ತಾಯಿಯ ಮಾತು ಬಲೆ, ತಪ್ಪದೇ ಗುರಿ ಮುಟ್ಟಿದ ಅಮೋಘ ಶರ ತನ್ನ ಮುಂದಿನ ಜನ್ಮಾಂತರಗಳಿಗೆ ಕಾರಣವಾದ ಸಂಕಲ್ಪ ಹಿಂಸೆ. ಇದು ಆತ್ಮಕ್ಕೇ ಚುಚ್ಚಿದೆ. ಮುಂದಿನ ಜನ್ಮಾಂತರವನ್ನು ಅನುಭವಿಸಬೇಕಾಗಿರುವ ಆತ್ಮ ಬಾಣಕ್ಕೆ ಗುರಿಯಾಗಿರುವ ಜಿಂಕೆಗೆ ಎಣೆಯಾಗಿದೆ. ಇಡೀ ಕಾವ್ಯಕ್ಕೇ ರೂಪಕಾತ್ಮಕವಾಗಿರುವ ಪದ್ಯವಿದು. ಇಡೀ ಪದ್ಯದಲ್ಲಿ ಬೇಟೆಯ ಪ್ರತಿಮೆಯನ್ನು ನಾವು ಗಮನಿಸಬಹುದು.

ಅಮೃತಮತಿ ಮತ್ತು ಬದಗನ ಕಾಮ ಪ್ರಕರಣದ ಮೂಲಕ ವಿಕ್ಷಿಪ್ತ ಕಾಮದ ನಡೆಯ ಗುರುತುಗಳನ್ನು ಶೋಧಿಸುವುದು ಜನ್ನನ ಉದ್ದೇಶವೇ? ಹಾಗಿರಲಾರದು. ಯಾಕೆಂದರೆ ಈ ರೀತಿಯ ಕಥನಗಳು ಹಿಂದೆ ಬಂದಿದ್ದವು. ಕತಾಸರಿತ್ಸಾಗರದ ರುಂಡಪುರುಷ ಮತ್ತು ಜಾರೆಯ ಕಥೆಯಲ್ಲಿ ಹೆಂಗಸೊಬ್ಬಳು ಅಂಗವಿಕಲ ಪ್ರಿಯಕರನನ್ನು ಸೇರುವುದಕ್ಕಾಗಿ ತನ್ನ ಗಂಡನನ್ನೇ ಕೊಲೆ ಮಾಡುವ ಪ್ರಸಂಗ ಬರುತ್ತದೆ. ಹೇಮಚಂದ್ರನಲ್ಲಿ ಹೆಳವ ಮಾವುತನೊಬ್ಬನನ್ನು ರಾಣಿಯೊಬ್ಬಳು ಕಾಮಿಸಿ ಅವನಿಂದ ಚಾಟಿ ಏಟು ತಿಂದ ಕತೆಯೂ ಇದೆ. ಇವಲ್ಲದೇ ಜನಪದ ಕಥಾನಕಗಳಲ್ಲಿ ಇಂತಹ ಹಲವು ನೈತಿಕ ಚೌಕಟ್ಟನ್ನು ಮೀರಿದ ಕಾಮನಡೆಗಳ ಪ್ರಸಂಗಗಳು ಸಿಗುತ್ತವೆ. 'ಮಲ್ಲಿಗೀ ಹೂವಿನಂಥ ಮದ್ವಿ ಗಂಡನ ಬಿಟ್ಟು ಹುಲ್ಲು ಕೊಯ್ಯುವನ ಹುಡುಕ್ಯಾಳ' ಎಂಬ ಜನಪದ ಪದ್ಯದ ಸಾಲೂ ಇದನ್ನೇ ಹೇಳುತ್ತದೆ. ಆದರೆ ಅಲ್ಲೆಲ್ಲಾ ತಪ್ಪಿತಸ್ಥರಿಗೆ ಕೂಡಲೇ ಶಿಕ್ಷೆಯಾಗುವುದನ್ನು ನೋಡುತ್ತೇವೆ. ಯಶೋಧರ ಚರಿತೆಯಲ್ಲಿ ಇದು ಕೇವಲ ಸತಿದ್ರೋಹದ ಬಗೆಗಿನ ನಿದರ್ಶನ ಕತೆಯಾಗದೇ ಅಹಿಂಸಾ ಭೋಧನೆಯ ಉದ್ದೇಶದ ಕಡೆಗೆ ಹೊರಳಿಕೊಂಡಿರುವುದು ಗಮನಾರ್ಹವಾದುದು.

ಮೋಸ ವಂಚನೆ. ಅದರಿಂದುಂಟಾದ ವೇದನೆ, ಜಿಗುಪ್ಸೆ. ಅದು ಹಿಂಸೆಯ ಪ್ರಚೋದನೆಯನ್ನುಂಟು ಮಾಡೋದು. ಆ ಹಿಂಸಾ ಮನೋವೃತ್ತಿಯನ್ನು ಕರಗಿಸಿಕೊಳ್ಳಲು ಯಶೋಧರ ಮತ್ತು ಆತನ ತಾಯಿ ಚಂದ್ರಮತಿ ನಾನಾ ಜನ್ಮಗಳನ್ನು ಪಡೆಯುವುದು ಇದು ಕಾವ್ಯದ ತಿರುಳು.

ಭಾರತೀಯ ಆರ್ಷ ಪರಂಪರೆಯ ಆತ್ಮತತ್ವವು ಜೀವಾತ್ಮದ ಹುಟ್ಟು> ಕರ್ಮಬಂಧ> ಮರುಹುಟ್ಟುಗಳ ವಿವರಣೆಯನ್ನು ನೀಡುತ್ತದೆ. 'ಪುನರಪಿ ಜನನಂ ಪುನರಪಿ ಮರಣಂ ಪುನರಪಿ ಜನನಿ ಜಠರೇ ಶಯನಂ' ಎಂಬ ಮಾತು ಜನನ ಮರಣಗಳ ಪ್ರವಾಹದಲ್ಲಿ ಏಳೋದು ಮುಳುಗೋದು ತಪ್ಪಿದ್ದಲ್ಲ ಎಂದು ಸಾರುತ್ತದೆ. ಈ ಹುಟ್ಟು ಮರುಹುಟ್ಟುಗಳ ಮೂಲಕ ಆತ್ಮ ಧವಳಗೊಳ್ಳುವ ಪ್ರಕ್ರಿಯೆ ನಡೆಯುತ್ತದೆ. ಅಮೃತಮತಿಯನ್ನು ಕೊಂದು ಬಿಡಬೇಕೆಂಬ ಹಿಂಸಾ ಸಂಕಲ್ಪ, ಅದರ ಪರಿಹಾರಕ್ಕಾಗಿ ತಾಯಿ ಸೂಚಿಸಿದ ಹಿಂಸಾ ಪರಿಹಾರ ಜತೆಗೂಡಿ ಯಶೋಧರನ ಮನಸ್ಥಿತಿ ತಲ್ಲಣಗೊಂಡಿತು. ಹಿಟ್ಟಿನ ಹುಂಜದ ಬೆಂತರ ಕೂಗಿತೋ ಅಲ್ಲ ಅದು ಯಶೋಧರನಿಗಾದ ಭ್ರಮೆಯೋ ಅಂತೂ ಆತನ ಸುಪ್ತ ಮನಸ್ಸಿನಲ್ಲಿ ಈ ಕರ್ಮ ಬಂಧನದಿಂದ ಹಿಂಸಾ ಭಾವ ಉಳಿದು ಬಿಟ್ಟಿತು. ಅದನ್ನು ತೊಳೆದುಕೊಳ್ಳುವುದಕ್ಕೆ ಬೇರೆ ಬೇರೆ ಜನ್ಮಗಳು. ಪ್ಯಾರಾ ಸೈಕಾಲಜಿಯಲ್ಲಿ ಹೀಗೆ ಸುಪ್ತ ಮನಸ್ಸಿನಲ್ಲಿ ಕುಳಿತ ಭಾವವನ್ನು ಹೊರ ತೆಗೆಯುವ ನಾನಾ ರೀತಿಗಳಿವೆ. ಹಿಪ್ನೋಟಿಸಂ.. ಮೊದಲಾದ ವಿಧಾನಗಳ ಮೂಲಕ ಈ ವಿರೇಚನದ ಕ್ರಿಯೆ ನಡೆಯುತ್ತದೆ. ಇನ್ನೂ ಆಳವಾಗಿ ಬೇರೂರಿದ್ದರೆ ಅದು ಮರುಹುಟ್ಟಿನಲ್ಲಿ (ರೀಬರ್ತ್) ಕಾಣಿಸಿಕೊಳ್ಳುತ್ತದೆ.

ಸಂಕಲ್ಪ ಹಿಂಸೆಯ ಭಾರವನ್ನು ಹೊತ್ತುಕೊಂಡು ರಾಜ್ಯ ತ್ಯಜಿಸಲು ಮುಂದಾದ ಯಶೋಧರ ಮತ್ತು ಅವನ ತಾಯಿ ಚಂದ್ರಮತಿಗೆ ಅಮೃತಮತಿ ವಿಷವಿಕ್ಕಿ ಕೊಲ್ಲುತ್ತಾಳೆ. ಹಾಗೆ ಸತ್ತ ಯಶೋಧರ ಚಂದ್ರಮತಿಯರು ಮುಂದೆ ನವಿಲು–ನಾಯಿ, ಮೀನು–ಮೊಸಳೆ, ಆಡು–ಹೋತ, ಕೋಣ–ಹೋತ, ಕಡೆಗೆ ಹೊಲಗೇರಿಯಲ್ಲಿ ಕೋಳಿಪಿಳ್ಳೆಗಳಾಗಿ ಜನಿಸುವರು. ಒಂದು ಸಲ ಆಕಂಪನ ಮುನಿಗಳ ಉಪದೇಶವನ್ನು ಕೇಳಿದ ಕೋಳಿಗಳು ಹಿಂದಿನ ನೆನಪಾಗಿ, ವ್ರತವನ್ನು ಧರಿಸಿ ಸಂತಸಂಬಟ್ಟು ಕೆಲೆದಾಗ, ವನವಿಹಾರಕ್ಕೆ ಬಂದಿದ್ದ ಯಶೋಮತಿ ಬಾಣ ಪ್ರಯೋಗಿಸಿ ಅವುಗಳನ್ನು ಕೊಂದ. ಅವರು ಮತ್ತೆ ಯಶೋಮತಿಯ ಪತ್ನಿಯಾದ ಕುಸುಮಾವಳಿಯ ಹೊಟ್ಟೆಯಲ್ಲಿ ಹುಟ್ಟಿದರು. ಆ ಅವಳಿ ಮಕ್ಕಳೇ ಅಭಯರುಚಿ ಮತ್ತು ಅಭಯಮತಿ. ಅವರು ಸುದತ್ತಾಚಾರ್ಯರ ಶಿಷ್ಯರಾಗಿ ಮಾರಿದತ್ತನಿಗೆ ತಮ್ಮ ವೃತ್ತಾಂತವನ್ನೆಲ್ಲಾ ಹೇಳಿದರು. ಮಾರಿದತ್ತ ವಿಸ್ಮಿತನಾದ. ಚಂಡಮಾರಿ ಪ್ರತ್ಯಕ್ಷಳಾಗಿ ತನಗೆ ಸಾತ್ವಿಕ ಪೂಜೆಯೇ ಸಾಕು. ಪ್ರಾಣಿ ಬಲಿ ಬೇಡ ಎನ್ನುತ್ತಾಳೆ. ಅಭಯಮತಿ ಮತ್ತು ಅಭಯರುಚಿಯರು ತಪಸ್ಸು ಮಾಡಿ ಈಶಾನಕಲ್ಪದಲ್ಲಿ ದೇವತೆಗಳಾದರು. ಇದು ಕಥೆ.

ಈ 'ಮೂಡುವ ಮುಳುಗುವ ದಂದುಗ'ದ ಕಥೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಅಲ್ಲೂ ಹಿಂಸೆ ಮತ್ತು ಕಾಮದ ಕೇಂದ್ರ ಇರುವುದು ಸ್ಪಷ್ಟವಾಗುತ್ತದೆ. ನವಿಲು ಅಷ್ಟಾವಂಕನ ಕಣ್ಣುಕುಕ್ಕುವುದು, ನವಿಲನ್ನು ನಾಯಿ ತಿನ್ನುವುದು. ಹಿಂದಿನ ಜನ್ಮದ ವೈರದಿಂದ ಮುಳ್ಳುಹಂದಿ ಹಾವನ್ನು ತಿನ್ನುವುದು, ಮೊಸಳೆಗೆ ಬೆಸ್ತರು ಚಿತ್ರಹಿಂಸೆ ನೀಡಿ ಕೊಲ್ಲುವುದು ಇಲ್ಲೆಲ್ಲಾ ಹಿಂಸಾ ಪ್ರವೃತ್ತಿಯನ್ನು ಕಾಣಬಹುದು. ಆಡಿನ ಹೊಟ್ಟೆಯಲ್ಲಿ ಹೋತವಾಗಿ ಹುಟ್ಟಿ ಕಾಮದಿಂದ ಸೊಕ್ಕಿ ಬೆದೆಗೆ ಬಂದಿದ್ದ ತಾಯನ್ನೇ ಕೂಡುವ ಚಿತ್ರಣವೂ ಜನ್ಮಾಂತರದಲ್ಲಿ ಕಾಣಿಸಿಕೊಂಡು ಕಾಮದ ಕುರಿತು ಅಸಹ್ಯ ಹುಟ್ಟುತ್ತದೆ.

ಸಣ್ಣ ಸಂಕಲ್ಪ ಹಿಂಸೆಯಿಂದಲೇ ಪಾರಾಗುವುದಕ್ಕೆ ಇಷ್ಟೊಂದು ಜನ್ಮಗಳನ್ನು ದಾಟ ಬೇಕಾದರೆ ಇನ್ನು ಅಮೃತಮತಿಯಂತಹ ಅತಿಕಾಮಿ ಹಿಂಸಾತತ್ಪರೆಗೆ ಅದ್ಯಾವ ನರಕವೋ. ಅವಳು ಕುಷ್ಠರೋಗ ಹಿಡಿದು ಧೂಮಪ್ರಭೆಯೆಂಬ ಐದನೆಯ ನರಕದಲ್ಲಿ ಮುಳುಗಿ ಹೋಗಿದ್ದಾಳೆ. ಆದರೆ ಅಭಯರುಚಿಯ ಉಪದೇಶವನ್ನು ಕೇಳಿದ ಹಿಂಸಕನಾಗಿದ್ದ ಮಾರಿದತ್ತ

'ಕಲಿಯಂ ಮೂದಲಿಸಿದಂತೆ ದೇವರೇ ಆದಂ'. ಮನುಷ್ಯನ ಮಾನಸಿಕ ಅಂಶಗಳು ತನ್ನದೇ ರೀತಿಯಲ್ಲಿ, ಲಯದಲ್ಲಿ ಕ್ಷಯವಾಗಬೇಕು. ಅದಕ್ಕೆ ಹುಟ್ಟು ಮರುಹುಟ್ಟುಗಳಲ್ಲಿ ಅದು ನಿರಂತರವಾಗಿ ಸಂಭವಿಸುತ್ತಾ ಸಾಗುತ್ತದೆ ಎಂಬ ಧಾರ್ಮಿಕ ನೆಲೆಯನ್ನು ಕಾವ್ಯ ಹೇಳುತ್ತದೆ.

ಆತ್ಮತತ್ವ, ಧಾರ್ಮಿಕ ಚೌಕಟ್ಟನ್ನೂ ಮೀರಿ ಕಾಮ ಸಂಯಮ ಮತ್ತು ಅಹಿಂಸೆ ಮೌಲ್ಯದ ಮಹತ್ವವನ್ನು ಜನ್ನ ತನ್ನ ಕಾವ್ಯದ ಮೂಲಕ ಆಧುನಿಕರಿಗೆ ನೀಡಿದ್ದಾನೆ. ವರ್ತಮಾನದ ಸಮಾಜದಲ್ಲಿ ನಡೆಯುತ್ತಿರುವ ಕಾಮಾತುರತೆ, ನಿಷ್ಕಾಹೀನ, ಹಿಂಸಾಮಯ ಪ್ರವೃತ್ತಿಗಳನ್ನು ಎದುರಿಸುವ ದಾರಿಗಳನ್ನು ಈ ಕೃತಿ ನೀಡುತ್ತದೆ. ಭಯೋತ್ಪಾದನೆ, ಕೋಮುಗಲಭೆ, ಅತ್ಯಾಚಾರ ಮೊದಲಾದ ಸಮಾಜಘಾತುಕ ಮನೋಸ್ಥಿತಿಗೆ ಸಂಯಮವಿಲ್ಲದ ಕಾಮ ಮತ್ತು ಹಿಂಸಾಪ್ರೀತಿಯ ಮನಸ್ಥಿತಿಯೇ ಕಾರಣ ಎನ್ನುವ ನೆಲೆಯನ್ನು ತೋರುತ್ತಾನೆ. 'ಮೇಗಂ ಬಗೆವೊಡೆ ವಧೆ ಹಿತಮಾಗದು ಮರ್ತ್ಯಂಗೆ' ಇದು ಸರ್ವಕಾಲಕ್ಕೂ ಸಲ್ಲುವ ಮಾತು.

✠✠✠

ಹಿಂದೆ ಹೆಸರಿಗೆಂದು
ಹೊಡೆದಾಡಿದವರಿಲ್ಲಿದ್ದರಂತೆ
ಇಂದು ಅವರ ಹೆಸರೇ
ನೆನಪಾಗಲೊಲ್ಲದಂತೆ

ಉಡುಪಿಯ ಮಾಸಪತ್ರಿಕೆ 'ವೀರಭೂಮಿ': ಪತ್ರಿಕೋದ್ಯಮದ ಒಂದು ಮರೆತ ಅಧ್ಯಾಯ

ಡಾ. ಬಿ. ಜನಾರ್ದನ ಭಟ್
ಅಕ್ಷರ, ದೇವಸ್ಥಾನದ ರಸ್ತೆ, ಅಂಚೆ: ಬೆಳ್ಮಣ್ಣು. 576111

ಉಡುಪಿಯ ಎಸ್.(ಸಾಂತ್ಯಾರು) ವೆಂಕಟರಾಜ(1913–1987) ಕನ್ನಡ ನಾಡು ನುಡಿಗಾಗಿ ದುಡಿದ ಒಬ್ಬ ಬಹುಮುಖ್ಯ ಸಾಹಿತಿ ಮತ್ತು ಪತ್ರಕರ್ತ. ವೆಂಕಟರಾಜರು ತಮ್ಮನ್ನು ಮುಖ್ಯವಾಗಿ ಒಬ್ಬ ಕವಿ ಎಂದು ಕರೆದುಕೊಂಡಿದ್ದರೂ ಕಾದಂಬರಿ, ಸಣ್ಣಕತೆ, ನಾಟಕ, ವಿಮರ್ಶೆ, ವೈಚಾರಿಕ ಲೇಖನ ಹಾಗೂ ವಿಡಂಬನಾತ್ಮಕ ಚೌಪದಿ ಮುಂತಾಗಿ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಮೇಲ್ಮಟ್ಟದ ಕೃತಿಗಳನ್ನು ರಚಿಸಿ ನವೋದಯದ ಮಂಗಳೂರು ಕೇಂದ್ರದ–ಉಡುಪಿ ಉಪಕೇಂದ್ರದ–ಒಬ್ಬ ಮೇರು ಸಾಹಿತಿಯಾಗಿ ನಿಂತವರು.

ಏಳು ಪ್ರಕಟಿತ ಮತ್ತು ಎರಡು ಅಪ್ರಕಟಿತ ಕವನ ಸಂಕಲನಗಳು; ಮೂರು ಕಾದಂಬರಿಗಳು; ಎಂಟು ಪ್ರಕಟಿತ ಮತ್ತು ಎರಡು ಅಪ್ರಕಟಿತ ನಾಟಕಗಳು; ನಾಲ್ಕು ಪ್ರಕಟಿತ ಕಥಾ ಸಂಕಲನಗಳು, ಮತ್ತು 23 ಬಿಡಿ ಕತೆಗಳು; 19 ಅನುವಾದಿತ ಬಿಡಿ ಕತೆಗಳು; 16 ಲಘು ಬರಹಗಳು; ಎರಡು ಅಂಕಣ ಬರಹಗಳ ಮಾಲಿಕೆ; ಸಾಕಷ್ಟು ಸಂಖ್ಯೆಯ ಸಾಹಿತ್ಯ ಮತ್ತು ಸಂಸ್ಕೃತಿ ವಿಮರ್ಶೆಯ ಲೇಖನಗಳು; ಅವರ 'ವೀರಭೂಮಿ' ಪತ್ರಿಕೆಯ ಸಂಪಾದಕೀಯ ಬರಹಗಳು; ಹಲವು ವೈಜ್ಞಾನಿಕ ಮತ್ತು ಪ್ರಪಂಚಜ್ಞಾನದ ಲೇಖನಗಳವು – ಇವು ವೆಂಕಟರಾಜರ ಸಾಹಿತ್ಯ ಸೃಷ್ಟಿಯ ಆಳ ಹರಹುಗಳನ್ನು ಸೂಚಿಸುತ್ತವೆ.

ವೆಂಕಟರಾಜರು ಪೆರ್ಡೂರು ಸಮೀಪದ ಸಾಂತ್ಯಾರು ಎಂಬಲ್ಲಿನ ಆನುವಂಶಿಕ ಪಟೇಲರೂ, ಜಮೀನುದಾರರೂ ಆಗಿದ್ದ ಆಗರ್ಭ ಶ್ರೀಮಂತ ಬ್ರಾಹ್ಮಣ ಕುಟುಂಬದವರು. ಉಡುಪಿಯ ಗಾಂಧಿ ಎಂದು ಪ್ರಸಿದ್ಧರಾಗಿದ್ದ ಸಾಂತ್ಯಾರು ಅನಂತ ಪದ್ಮನಾಭ ಭಟ್ಟರ ಪುತ್ರ. ಭಟ್ಟರು ಮೂರು ಗ್ರಾಮಗಳ(ಬೆಳ್ಳರ್ಪಾಡಿ, ಬೈರಂಪಳ್ಳಿ ಮತ್ತು ಸಾಂತ್ಯಾರು) ಪಟೇಲರಾಗಿದ್ದರು. ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ನೀಡಿದ ಕಾರಣ ಅವರ ಪಟೇಲಿಕೆ ರದ್ದಾಗಿತ್ತು. ಈ ಕೆಲಸ 1948ರಲ್ಲಿ ವೆಂಕಟರಾಜರಿಗೆ ಸಿಕ್ಕಿತು. ಆನುವಂಶಿಕ ಪಟೇಲಿಕೆಯನ್ನು ಸರ್ಕಾರ ರದ್ದು ಮಾಡುವವರೆಗೆ (1961) ಎಸ್. ವೆಂಕಟರಾಜರು ಆ ಕೆಲಸವನ್ನು ನಿರ್ವಹಿಸುತ್ತ ಸಾಂತ್ಯಾರಿನಲ್ಲಿ ನೆಲೆಸಿದ್ದರು. ಆಗ ಅವರು ಪಟೇಲರಾಗಿ ಗ್ರಾಮಾಭಿವೃದ್ಧಿಯಲ್ಲಿ ನೇರ ಪಾತ್ರ ವಹಿಸಿದ್ದರು. ಪಟೇಲಿಕೆ ರದ್ದಾದ ಮೇಲೆ ವೆಂಕಟರಾಜರು ಉಡುಪಿಯಲ್ಲಿಯೇ ಮನೆಯನ್ನು ಖರೀದಿಸಿ ನೆಲೆಸಿದರು. ಉಡುಪಿಯಲ್ಲಿ ಹೆಂಡತಿ ಮಕ್ಕಳನ್ನು ಇರಿಸಿ, ಅವರ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟು ತಾವು ಉಡುಪಿಯಲ್ಲಿಯೂ ಸಾಂತ್ಯಾರಿನಲ್ಲಿಯೂ ವಾಸಿಸುತ್ತಾ, ಕೃಷಿಯಲ್ಲಿಯೂ, ಸಾಹಿತ್ಯ ಕೃಷಿಯಲ್ಲಿಯೂ ತೊಡಗಿಸಿಕೊಂಡಿದ್ದರು.

ವೆಂಕಟರಾಜರು 1963ರ ಆಗಸ್ಟ್ 15ರಂದು ಉಡುಪಿಯಲ್ಲಿ ವೀರಭೂಮಿ ಎಂಬ ಮಾಸಿಕ ಪತ್ರಿಕೆಯನ್ನು (ಕಸ್ತೂರಿ ಮಾಸಪತ್ರಿಕೆಯ ಗಾತ್ರದಲ್ಲಿ) ಆರಂಭಿಸಿದರು. ಅದು ಸಾಹಿತ್ಯ, ಸಂಸ್ಕೃತಿಗಳಿಗೆ ಉತ್ತೇಜನ ನೀಡುವ ಪತ್ರಿಕೆಯಾಗಿತ್ತು, ಜ್ಞಾನ ಪ್ರಚಾರದ ಡೈಜೆಸ್ಟ್ ಆಗಿತ್ತು.

1970 ಆಗಸ್ಟ್ ತಿಂಗಳ ಹೊತ್ತಿಗೆ ಅದನ್ನು ನಿಲ್ಲಿಸಬೇಕಾಯಿತು. ಅದು ನಿಂತುಹೋಗಲು ಕಾರಣ ಕೇಳಿದಾಗ ವೆಂಕಟರಾಜರು ನಿರ್ಲಿಪ್ತ ಮನಸ್ಸಿನಿಂದ ಹೇಳಿದ್ದರು: "ಎಲ್ಲ ಪತ್ರಿಕೆಗಳು ಯಾಕೆ ನಿಲ್ಲುತ್ತವೋ ಅದೇ ಕಾರಣ." (ಗುಂಡ್ಮಿ ಚಂದ್ರಶೇಖರ ಐತಾಳರು ದಾಖಲಿಸಿದಂತೆ).

ಆ ಪತ್ರಿಕೆ ತನ್ನ ಓದುಗರಲ್ಲಿ ಸಾಹಿತ್ಯ, ಸಂಸ್ಕೃತಿ, ರಾಜಕೀಯ ಕ್ಷೇತ್ರಗಳ ಬಗ್ಗೆ ಒಂದು ಆರೋಗ್ಯಕರ ಚಿಂತನೆಯನ್ನು ರೂಪಿಸಿಕೊಳ್ಳುವುದಕ್ಕೆ ಪ್ರೇರಣೆ ಒದಗಿಸುತ್ತಿತ್ತು ಎನ್ನುವುದನ್ನು ಅದರ ಓದುಗರಾಗಿದ್ದ ಹಿರಿಯರು ತಮ್ಮ ನೆನಪುಗಳನ್ನು ಈ ಲೇಖಕನಲ್ಲಿ ಹೇಳಿಕೊಂಡಿದ್ದಾರೆ. ವೆಂಕಟರಾಜರು ಈ ಪತ್ರಿಕೆಗಾಗಿ ಬರೆದ ಸಂಪಾದಕೀಯಗಳು ಈ ಕಾಲದ ರಾಜಕೀಯ ಮತ್ತು ದೇಶ ವಿದೇಶಗಳ ಆಗುಹೋಗುಗಳ ಸೂಕ್ಷ್ಮ ಅವಲೋಕನ ಮತ್ತು ನಿಷ್ಪಕ್ಷಪಾತದ ವಿಶ್ಲೇಷಣೆಯಿಂದ ಆ ಕಾಲದ ಒಂದು ಮುಖ್ಯ ದಾಖಲೆಯೆಂದು ಪರಿಗಣಿಸಬಹುದಾದಷ್ಟು ಮುಖ್ಯವಾಗಿವೆ.

'ವೀರಭೂಮಿ' ಆರಂಭಿಸಲು ಪ್ರೇರಣೆ

ವೆಂಕಟರಾಜರು 'ವೀರಭೂಮಿ' ಪತ್ರಿಕೆಯನ್ನು ಆರಂಭಿಸಿದಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವರ ತಾರುಣ್ಯದಲ್ಲಿ ಜಿಲ್ಲೆಯಲ್ಲಿದ್ದ 'ಅಂತರಂಗ' ಮತ್ತು 'ರಾಷ್ಟ್ರಬಂಧು' ಮಾದರಿಯ ಪತ್ರಿಕೆಯೊಂದರ ಕೊರತೆ ಇತ್ತು. ಅವೆರಡೂ ಅವರಿಗೆ ಬಹುಶಃ ಆದರ್ಶವಾಗಿದ್ದ ಪತ್ರಿಕೆಗಳು. ಜತೆಗೆ ತಮ್ಮೌಡುಪಿಯ ಗೆಳೆಯ ಪಾ.ವೆಂ. ಆಚಾರ್ಯರು ಹುಬ್ಬಳ್ಳಿಯಿಂದ ಸಂಪಾದಿಸುತ್ತಿದ್ದ 'ಕಸ್ತೂರಿ' ಮಾಸಪತ್ರಿಕೆಯ ಸ್ವರೂಪವೂ ಅವರ ಮನಸ್ಸಿನಲ್ಲಿದ್ದಿರಬೇಕು. ಈ ಪತ್ರಿಕೆಗಳ ಉತ್ತಮಾಂಶಗಳನ್ನು ತನ್ನ ಪತ್ರಿಕೆಯಲ್ಲಿ ಒಳಗೊಳ್ಳಲು, ಮತ್ತು ಇನ್ನೂ ಹೆಚ್ಚಿನ ರಾಜಕೀಯ ವಿಶ್ಲೇಷಣೆ ನೀಡಲು ವೆಂಕಟರಾಜರು ಪ್ರಯತ್ನಿಸಿದರು.

ವೆಂಕಟರಾಜರು ಉಡುಪಿಯ 'ಅಂತರಂಗ', 'ಧುರೀಣ' 'ರಾಯಭಾರಿ' ಮತ್ತು 'ನವಯುಗ' ಪತ್ರಿಕೆಗಳ ಪ್ರಕಾಶಕ–ಸಂಪಾದಕರುಗಳಿಗೆ ನಿಕಟವರ್ತಿಯಾಗಿದ್ದವರು; ಅವರ ವೈಯುಕ್ತಿಕ ಮತ್ತು ಪತ್ರಿಕೋದ್ಯೋಗದ ಕಷ್ಟ ಸುಖಗಳನ್ನು ಸಮೀಪದಿಂದ ಬಲ್ಲವರು.

ವೆಂಕಟರಾಜರು ಸ್ವಾತಂತ್ರ್ಯಪೂರ್ವದಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಗಾಂಧೀಜಿಯವರ ಅಭಿಮಾನಿಯಾಗಿದ್ದವರು. ಅವರ ತಂದೆಯವರು 'ಉಡುಪಿಯ ಗಾಂಧಿ' ಎಂದೇ ಹೆಸರಾಗಿದ್ದವರು. ವೆಂಕಟರಾಜರಿಗೆ ಸ್ವಾತಂತ್ರ್ಯಾನಂತರ ಭಾರತದಲ್ಲಿ ಸ್ವರ್ಣಯುಗದಂತಹ ಒಳ್ಳೆಯ ಕಾಲ ಬರಬಹುದೆಂದು ಸಹಜವಾಗಿ ನಿರೀಕ್ಷೆಯಿದ್ದಿತ್ತು. ತಮ್ಮ ತಂದೆ, ಎಸ್.ಯು. ಪಣಿಯಾಡಿಯವರು, ಹಿರಿಯ ಮಿತ್ರ ಹೊನ್ನಯ್ಯ ಶೆಟ್ಟಿಯವರು, ಕೆ.ಕೆ. ಶೆಟ್ಟಿಯವರು ಮುಂತಾದವರ ಚಿಂತನೆಯ ಮಾದರಿಯಲ್ಲಿ ಬಡವರ ಮತ್ತು ದಲಿತರ ಪರವಾದ ಸಮಾಜಸುಧಾರಣೆಯಾಗಬೇಕೆಂಬ ಹಂಬಲ ಅವರಲ್ಲಿದ್ದುದಕ್ಕೆ ಅವರ ಕವನಗಳಲ್ಲಿ ಮತ್ತು ಪತ್ರಿಕೆಯಲ್ಲಿ ಅವರು ಬರೆಯುತ್ತಿದ್ದ ಚುಟುಕುಗಳಲ್ಲಿಯೂ ಸಾಕಷ್ಟು ಉದಾಹರಣೆಗಳಿವೆ. ಬಹುಶಃ ಅವರಿಗಿಂತ ಭಿನ್ನವಾದ ರೀತಿಯ ಬುದ್ಧಿಜೀವಿಯಾಗಿದ್ದ ವೆಂಕಟರಾಜರು ತಮ್ಮ ಕಾಲದ ರಾಜಕೀಯವನ್ನು ನಿಷ್ಪಕ್ಷಪಾತವಾಗಿ ವಿಶ್ಲೇಷಿಸಿ ಜನರನ್ನು ಪ್ರಬುದ್ಧ ರಾಜಕೀಯ ಚಿಂತನೆಯಲ್ಲಿ ತೊಡಗಿಸುವ ಉನ್ನತ ಧ್ಯೇಯವನ್ನಿಟ್ಟುಕೊಂಡು 'ವೀರಭೂಮಿ'ಯನ್ನು ಆರಂಭಿಸಿದರು.

ತಮ್ಮ ಮೊದಲ ಸಂಪಾದಕೀಯದಲ್ಲಿ ಅವರು ಬರೆದಿರುವ ಈ ಮಾತುಗಳನ್ನು ಗಮನಿಸಬಹುದು: "ಜಗಳಕ್ಕಾಗಿಯೆ ತೊಡಗಿದ ಜಾತಿ, ದೂಷಣೆಗಾಗಿಯೇ ಬೆಳೆದು ಬಂದ

ಧರ್ಮ, ಹೊಗಳಿಕೆಗಾಗಿಯೇ ಹುಟ್ಟಿದ ರಾಜಕಾರಣ–ಈ ಎಲ್ಲರ ಮಧ್ಯದಲ್ಲಿ ಏನೂ ತಿಳಿಯದೆ ನಿಂತಿರುವ ಬೊಕ್ಕ ತಲೆಯ ಬೋರೇ ಗೌಡ ಬದುಕಲು ಸಾಧ್ಯವೇ? ಸತ್ಯಸಂಧನಾದ ಧರ್ಮರಾಯ ಸತ್ಯವನ್ನೇನೋ ಹೇಳಿದ. ಆದರೆ ಅವನ ಸತ್ಯಕ್ಕೂ ಸುಳ್ಳಿಗೂ ಏನು ವ್ಯತ್ಯಾಸವಿದ್ದಿತ್ತು? ಇಂದಿನ ಪರಿಸ್ಥಿತಿಯೂ ಅದೇ ರೀತಿ."(ವೀರಭೂಮಿ : 15.8.1963)

ವೆಂಕಟರಾಜರ ಸಂಪಾದಕೀಯ ವಿಶ್ಲೇಷಣೆಗಳು ಮತ್ತು ಇತರ ಲೇಖನಗಳು ಭಾವುಕತೆಯ ಸ್ಪರ್ಶವಿಲ್ಲದ, ಪ್ರಬುದ್ಧ ಚಿಂತನೆಯ ಸಾರಗಳಾಗಿವೆ.

ವೆಂಕಟರಾಜರ ತಾರುಣ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎರಡು ಕೇಂದ್ರಗಳಾದ ಮಂಗಳೂರು ಮತ್ತು ಉಡುಪಿ ಎರಡೂ ಪಟ್ಟಣಗಳಲ್ಲಿ ಸದಭಿರುಚಿಯ, ಸಾಹಿತಿಗಳಿಗೆ ಪ್ರೋತ್ಸಾಹ ಕೊಡುವ, ಸಾಹಿತಿಗಳೇ ಸಂಪಾದಕರಾಗಿದ್ದ ಮ್ಯಾಗಜಿನ್‌ಗಳು ಪ್ರಕಟವಾಗುತ್ತಿದ್ದವು. ಆ ಉತ್ಸಾಹದ ವಾತಾವರಣದ ಪ್ರಯೋಜನವನ್ನು ಸ್ವತಃ ವೆಂಕಟರಾಜರು ತಮ್ಮ ಬೆಳವಣಿಗೆಯ ದಿನಗಳಲ್ಲಿ ಪಡೆದಿದ್ದರು. ಸುಮಾರು 1950–55ರ ಹೊತ್ತಿಗೆ ಹಿಂದಿನ ಉತ್ತಮ ಪತ್ರಿಕೆಗಳು ನಿಂತುಹೋಗಿದ್ದವು ಅಥವಾ ಬಸವಳಿದಿದ್ದವು. ಇಂತಹ ಸನ್ನಿವೇಶದಲ್ಲಿ 'ವೀರಭೂಮಿ'ಯನ್ನು ಆರಂಭಿಸುವ ಮೂಲಕ ಜಿಲ್ಲೆಗೆ ಹಿಂದಿನ ಪತ್ರಿಕೆಗಳಂತಹ ಆದರ್ಶವಾದಿ, ನೇರ ಮಾತಿನ ರಾಜಕೀಯ ವಿಶ್ಲೇಷಣೆಗಳ, ಸಾಹಿತ್ಯ ಕೇಂದ್ರಿತ 'ನವೋದಯ ಪತ್ರಿಕೆಗಳ' ಮಾದರಿಯ ಪತ್ರಿಕೆಯೊಂದನ್ನು ವೆಂಕಟರಾಜರು ಹುಟ್ಟುಹಾಕಿದರು. ಇದು ವಿಶೇಷ ಸಮಾಚಾರಗಳು ಮತ್ತು ಮಾಹಿತಿಗಳನ್ನು ಡೈಜೆಸ್ಟ್ ರೂಪದಲ್ಲಿ ನೀಡುತ್ತಿದ್ದುದರಿಂದ ಸಂಪಾದಕರು 'ಕಸ್ತೂರಿ' ಪತ್ರಿಕೆಯನ್ನೂ ಒಂದು ಮಾದರಿಯಾಗಿ ಇಟ್ಟುಕೊಂಡಿದ್ದರೆಂದು ಊಹಿಸಬಹುದು.

'ವೀರಭೂಮಿ'ಯ ಧ್ಯೇಯ – ಧೋರಣೆ – ಸ್ವರೂಪ

ವೀರಭೂಮಿಯ ಧ್ಯೇಯ ಸತ್ಯ – ಸದಾಚಾರ – ಸದ್ವಿಚಾರಗಳ ಪ್ರತಿಪಾದನೆ!

ಧೋರಣೆ–ಸಮುದ್ರಸ್ಸಮಯಂಕೃತ್ವಾ ನ ವೇಲಾಮತಿವರ್ತತೇ! ಎಂದು ವೆಂಕಟರಾಜರೇ ಹೇಳಿಕೊಂಡಿದ್ದಾರೆ.

ವೆಂಕಟರಾಜರು ಪ್ರಕಾಶಕರಾಗಿ ಮತ್ತು ಸಂಪಾದಕರಾಗಿ 'ವೀರಭೂಮಿ' ಮಾಸ ಪತ್ರಿಕೆಯನ್ನು ಸಂಪೂರ್ಣ ಏಳು ವರ್ಷಗಳ ಕಾಲ ಪ್ರಕಟಿಸಿಕೊಂಡು ಬಂದರು. 1963ರ ಅಗೋಸ್ಟ್ 15ರಂದು ಅಂದರೆ ಸ್ವಾತಂತ್ರ್ಯ ದಿನದಂದು, ಚೈನಾ ಯುದ್ಧಕ್ಕೆ ಎರಡು ತಿಂಗಳ ಮುಂಚೆ–ಆದರೆ ಯುದ್ಧ ಭೀತಿ ಇದ್ದಾಗ 'ವೀರಭೂಮಿ' ಪ್ರಾರಂಭವಾಯಿತು. ಅದರ ಶೀರ್ಷಿಕೆಯಂತೆ ವಸ್ತು – ವಿಷಯಗಳಲ್ಲೂ ದೇಶ ಪ್ರೇಮ ಮತ್ತು ಧೈರ್ಯ – ಶೌರ್ಯಗಳನ್ನು ಪ್ರೇರೇಪಿಸಬೇಕೆಂದು ವೆಂಕಟರಾಜರು ಉದ್ದೇಶಿಸಿದ್ದರೆನ್ನುವುದು ಸ್ಪಷ್ಟವಾಗಿದೆ. ಪತ್ರಿಕೆಯ ಮೊದಲೆರಡು ಸಂಚಿಕೆಗಳ ಮುಖಪುಟವಾಗಿ ಸಿಂಹವೊಂದು ಎತ್ತರದ ದಿಬ್ಬವೊಂದರ ಮೇಲೆ ನಿಂತು ದೂರದ ಕಣಿವೆಯಲ್ಲಿ ನರಿಗಳು ಎಗರಾಡುತ್ತಿರುವುದನ್ನು ನೋಡುವ ಚಿತ್ರವನ್ನು ಬಳಸಿಕೊಂಡಿದ್ದಾರೆ. ಇದನ್ನು ತಮ್ಮ ಮೆಚ್ಚಿನ ಚಿತ್ರಕಾರ ಉಡುಪಿಯ ಶೀನ ಶೆಟ್ಟಿಯವರಿಂದ ಪತ್ರಿಕೆಗಾಗಿಯೇ ಬರೆಸಿದ್ದು ಅದರ ಮೂಲ ಚಿತ್ರ ಈಗಲೂ ವೆಂಕಟರಾಜರ ಮನೆಯಲ್ಲಿದೆ. ಮುಂದೆಯೂ ಈ ಚಿತ್ರವನ್ನು ಪತ್ರಿಕೆಯ ಮುಖಪುಟವಾಗಿ ಅವರು ಕೆಲವೊಮ್ಮೆ ಬಳಸಿ ಕೊಂಡಿದ್ದಾರೆ ನೆಹರೂ, ಗಾಂಧಿ, ಶಾಸ್ತ್ರಿ ಮುಂತಾದವರ ವರ್ಣಚಿತ್ರಗಳು, ಮಕ್ಕಳ ಚಿತ್ರಗಳು (ಎಲ್ಲವೂ ಕಲಾವಿದರಿಂದ ರಚಿತವಾದ ಚಿತ್ರಗಳು, ಫೋಟೋಗಳಲ್ಲ) 'ವೀರಭೂಮಿ'ಯ ಮುಖಪುಟಗಳಾಗಿರುತ್ತಿದ್ದವು. ಬೇರೆ ಉತ್ತಮ ಛಾಯಾಚಿತ್ರಗಳನ್ನು ಆಗಾಗ ವೆಂಕಟರಾಜರು

ಮುಖಪುಟವಾಗಿ ಬಳಸಿಕೊಳ್ಳುತ್ತಿದ್ದರು ಮತ್ತು ಅವುಗಳ ಮೂಲವನ್ನು ಸ್ಮರಿಸುತ್ತಿದ್ದರು. ಉದಾಹರಣೆಗೆ, 1965ರ ಜೂನ್ ತಿಂಗಳ ಸಂಚಿಕೆಯ ಮುಖಪುಟದ ಕುರಿತಾದ ಟಿಪ್ಪಣಿ ಹೀಗಿದೆ: "ಮುಖಪುಟದ ಕದಂಬ ಹೂವಿನ ಚಿತ್ರವನ್ನು ಪ್ರಬುದ್ಧ ಕರ್ನಾಟಕದ ಸಂಚಿಕೆಯಿಂದ ಆಡಿ. B.G.L. ಸ್ವಾಮಿಯವರ ಅನುಮತಿಯಿಂದ ಪ್ರಕಟಿಸಲಾಗಿದೆ." ಸಾಮಾನ್ಯವಾಗಿ ಮುಖಪುಟವು ಸಂಚಿಕೆಯ ಸಂಪಾದಕೀಯ ಅಥವಾ ಯಾವುದಾದರೊಂದು ಲೇಖನಕ್ಕೆ ಪೂರಕವಾಗಿ ಇರುತ್ತಿತ್ತು. ಕದಂಬ ಹೂವಿನ ಚಿತ್ರವನ್ನು ಪ್ರಕಟಿಸಲು ಕಾರಣ: ಆ ಸಂಚಿಕೆಯಲ್ಲಿ ಶ್ಯಾಮಲಾ ದಂಡಕ ಎಂಬ ಲೇಖನವಿದ್ದು(ಲೇ. ಪ್ರೊಫೆಸರ್ ಯು. ವೆಂಕಟಕೃಷ್ಣರಾವ್) ಅದರಲ್ಲಿ ಅವರು ಶ್ಯಾಮಲಾ ದಂಡಕವನ್ನು ಕಾಳಿದಾಸನು ಬರೆದಿರಲಾರನು; ಯಾರೋ ಕನ್ನಡಿಗರೇ ಅದನ್ನು ಬರೆದಿರಬೇಕೆಂದು ವಾದಿಸಲು ದೇವಿಯನ್ನು ಕದಂಬ ವನವಾಸಿನಿ ಎಂದು ಕರೆದಿರುವುದನ್ನು; ಕದಂಬವು ಕನ್ನಡದ ವಿಶಿಷ್ಟ ಹೂವಾಗಿರುವುದನ್ನು ಮುಖ್ಯ ಆಧಾರವಾಗಿ ಬಳಸಿದ್ದಾರೆ.

ಸಾಮಾನ್ಯವಾಗಿ ಬಹು ವರ್ಣದ ಚಿತ್ರಗಳಿರುತ್ತಿದ್ದ ಮುಖಪುಟದ ಕೆಳಭಾಗದಲ್ಲಿ ದೊಡ್ಡ ಅಕ್ಷರಗಳಲ್ಲಿ ಒಂದು ಪಟ್ಟಿಯ ಹಿನ್ನೆಲೆಯಲ್ಲಿ ಎದ್ದು ಕಾಣುವಂತೆ "ಸಮುದ್ರಸ್ಸಮಯಂ ಕೃತ್ವಾ ನ ವೇಲಾಮತಿವರ್ತತೇ" ಎಂಬ ಪತ್ರಿಕೆಯ ಘೋಷವಾಕ್ಯ ಇರುತ್ತಿತ್ತು. ಇದರ ಅರ್ಥ– "ಸಮುದ್ರವು ಒಂದು ನಿಯಮವನ್ನು ಮಾಡಿದ ಮೇಲೆ ಅದನ್ನು ಮೀರುವುದಿಲ್ಲ; ಅರ್ಥಾತ್ ತನ್ನ ದಡವನ್ನು ನಿರ್ಧರಿಸಿದ ಬಳಿಕ ಆ ದಡವನ್ನು ಮೀರಿ ಉಕ್ಕುವುದಿಲ್ಲ." ತಮ್ಮ ಪತ್ರಿಕೆಯ ಧ್ಯೇಯ ಧೋರಣೆಗಳು ಕಾಲ ಕಾಲಕ್ಕೆ ಬದಲಾಗುವಂಥವುಗಳಲ್ಲ ಎನ್ನುವುದನ್ನು ಸೂಚಿಸಲು ಈ ಮಾತನ್ನು ವೆಂಕಟರಾಜರು ಬಳಸಿಕೊಂಡಿರಬೇಕು.

'ವೀರಭೂಮಿ' ಉಡುಪಿಯಲ್ಲಿ ಮೆಜಿಸ್ಟಿಕ್ ಪ್ರೆಸ್ಸಿನಲ್ಲಿ ಮುದ್ರಣಗೊಳ್ಳುತ್ತಿತ್ತು. ಮೊದಲನೆಯ ಸಂಚಿಕೆಯಲ್ಲಿ ಡಿ.ವಿ.ಜಿ., ಎಂ. ಅಕಬರ ಅಲಿ, ಸು.ರಂ. ಎಕ್ಕುಂಡಿ, ಸಿಂಪಿ ಲಿಂಗಣ್ಣ ಮತ್ತು ವೆಂಕಟರಾಜರ ಕವಿತೆಗಳು; ಶಿವರಾಮ ಕಾರಂತ, ಶಂ.ಬಾ. ಜೋಶಿ ಮತ್ತು ಗೌರೀಶ ಕಾಯ್ಕಿಣಿಯವರ ಲೇಖನಗಳು, ನಾರಾಯಣ ಬಲ್ಲಾಳ, ಬಿ. ಸುಬ್ರಾಯ ಅಡಿಗ, ಅರ್ಚಿಕ ವೆಂಕಟೇಶ ಮತ್ತು ಮಾದರಬೆಟ್ಟು ರಂಗರಾಯ ಇವರ ಕತೆ–ಲಘು ಬರಹಗಳು ಮತ್ತು ಸಾಲಿಗ್ರಾಮದ ಪಿ. ಲಕ್ಷ್ಮೀನಾರಾಯಣ ಅಡಿಗರು ಬರೆದ ಮಾಸಭವಿಷ್ಯ(ತಾರಾಬಲ) ಇದ್ದವು.

ಆಮೇಲೆ ವೀರಭೂಮಿಯಲ್ಲಿ ಬೇಂದ್ರೆ, ಚೆನ್ನವೀರ ಕಣವಿ, ಜೀವಿ ಕುಲಕರ್ಣಿ, ಸುಬ್ರಾಯ ಚೊಕ್ಕಾಡಿ, ಎಸ್. ದಿವಾಕರ್, ಎನ್ಕೆ, ಮಿರ್ಜಿ ಅಣ್ಣಾರಾಯರು, ಬಿ. ಎಚ್. ಶ್ರೀಧರ, ಸುಬೋಧ ರಾಮರಾಯರು, ಸಂತೋಷಕುಮಾರ ಗುಲ್ವಾಡಿ, ವ್ಯಾಸರಾವ್ ನಿಂಜೂರ್, ನೀರಗುಂದ ಕೇಶವಮೂರ್ತಿ, ಭಾರತೀಸುತ, ಅಶ್ವತ್ಥ, ನವಗಿರಿನಂದ, ಶೇಷನಾರಾಯಣ, ಜಿ.ಎಸ್. ಅವಧಾನಿ, ಮುಂತಾದವರ ಕವಿತೆ, ಕತೆ, ಬರಹಗಳು ಪ್ರಕಟವಾಗಿವೆ. ನವಗಿರಿನಂದ, ಬಳ್ಳೂರು ಸುಬ್ರಾಯ ಅಡಿಗ. ವಿ.ಕೆ. ಉಮಾರಾಣಿ, ವೆಂಕಟಕೃಷ್ಣರಾವ್ ಮುಂತಾದವರು ಪತ್ರಿಕೆಯ ಖಾಯಂ ಬರಹಗಾರರಾಗಿದ್ದರು. ಕಾ.ನಾ.ಭ.(ಶೇಣಿ ಗೋಪಾಕೃಷ್ಣ ಭಟ್ಟರ ಮಗ) ಬರೆಯುತ್ತಿದ್ದ ಪ್ರೇತಾತ್ಮಗಳು ಎಂಬ ಅಂಕಣ ಜನಪ್ರಿಯವಾಗಿತ್ತು. (ಕೆಲವು ವರ್ಷಗಳ ಹಿಂದೆ 'ಪ್ರೇತಾತ್ಮಗಳು' ಪುಸ್ತಕ ರೂಪದಲ್ಲಿ ಮರುಮುದ್ರಣ ಕಂಡವು).

'ವೀರಭೂಮಿ'ಯ ಮೊದಲೆರಡು ಪುಟಗಳಲ್ಲಿ ಸಾಮಾನ್ಯವಾಗಿ ಜಾಹೀರಾತು ಗಳಿರುತ್ತಿದ್ದವು. ಮೂರನೆಯ ಪುಟದಲ್ಲಿ 'ಕಾಳು–ಕಣಜ' ಎಂಬ ಶೀರ್ಷಿಕೆಯಡಿ ಸಂಚಿಕೆಯ ಬರಹಗಳ ಪರಿವಿಡಿ ಇರುತ್ತಿತ್ತು. ನಾಲ್ಕನೆಯ(ಬಲ ಭಾಗದ) ಪುಟದಲ್ಲಿ ಸಂಪುಟ–ಸಂಚಿಕೆಗಳ ಮಾಹಿತಿ ಮತ್ತು ಒಂದು ದ್ವಿಪದಿ ಹಾಗೂ ವೇದೋಪನಿಷತ್ತುಗಳಿಂದ, ಕಾವ್ಯ ಹಾಗೂ

ಧರ್ಮಗ್ರಂಥಗಳಿಂದ ಆರಿಸಿದ ಶ್ರೇಷ್ಠ ಮಾತುಗಳು(ಮೂಲದಲ್ಲಿ ಮತ್ತು ವೆಂಕಟರಾಜರ ಅನುವಾದದಲ್ಲಿ) ಇರುತ್ತಿದ್ದವು. ಆ ದ್ವಿಪದಿ ಹೀಗಿದೆ :

ಬದುಕಿನಲಿ ಸೊಗಸಲ್ಲ ಕೆಡುಕನೊಂದನು ಕಂಡು

ಕೊಲುವ ಬಿಲ್ದತ್ತಳಿಕೆ ಬಿಗಿಯಬೇಕು.

ತಮ್ಮ ಪತ್ರಿಕೆ ಲೋಕದ ಕೆಡುಕನ್ನು ವಿರೋಧಿಸಿ ಜನರ ನೋವಿಗೆ ಸ್ಪಂದಿಸುತ್ತದೆ ಎನ್ನುವುದು ವೆಂಕಟರಾಜರ ಅಭಿಪ್ರಾಯ.

'ವೀರಭೂಮಿ'ಯ ಮೊದಲನೆಯ ಸಂಚಿಕೆ ರಕ್ಷಾಪತ್ರಗಳನ್ನು ಬಿಟ್ಟು 86 ಪುಟಗಳನ್ನು ಹೊಂದಿತ್ತು. ಮುಂದಿನ ಸಂಚಿಕೆಗಳು 56 ಪುಟಗಳನ್ನು ಹೊಂದಿರುತ್ತಿದ್ದವು. ಕೊನೆಗೆ ಪುಟಗಳ ಸಂಖ್ಯೆ ಇಳಿದು, 40 ಪುಟಗಳನ್ನು ಪತ್ರಿಕೆ ಕೊಡುತ್ತಿತ್ತು. ಕತೆ, ಕವನ, ವಿಚಾರಪ್ರಚೋದಕ ಲೇಖನಗಳ ಜತೆಗೆ ಅನುವಾದಿತ ಕತೆಗಳು, ವಿದೇಶಗಳಲ್ಲಿ ಆಗುತ್ತಿದ್ದ ವಿಜ್ಞಾನ ಹಾಗೂ ತಂತ್ರಜ್ಞಾನದ ಹೊಸ ಅನ್ವೇಷಣೆಗಳ ಮಾಹಿತಿ ಇವು ಇರುತ್ತಿದ್ದವು. ಸಂಪಾದಕೀಯ ಜವಾಬ್ದಾರಿಯನ್ನೆಲ್ಲ ವೆಂಕಟರಾಜರೊಬ್ಬರೇ ಹೊತ್ತಿದ್ದುದರಿಂದ ಅವರು ಕೆಲವು ವಿಭಾಗಗಳ ಪುಟಗಳನ್ನು ತಾವೇ ತುಂಬಿಸಬೇಕಾಗಿತ್ತು. ಇದು ತಮಗೆ ಒಳ್ಳೆಯ ಅನುಭವವೇ ಆಗಿತ್ತೆಂದು ಅವರು ಹೇಳಿದ್ದರು. ಎಡೆತುಂಬು[gap filler]ಗಳಾಗಿ ನಗೆ ಹನಿಗಳು ಮತ್ತು ಕೃಷಿವಾರ್ತೆಗಳು –ಮಾಹಿತಿಗಳು ಪ್ರಕಟವಾಗುತ್ತಿದ್ದವು. ಕೃಷಿ ವಾರ್ತೆಗಳನ್ನು ಎಡೆತುಂಬುಗಳಾಗಿ ಉಪಯೋಗಿಸಿದುದು ವೆಂಕಟರಾಜರ ಸ್ವಂತಿಕೆಯನ್ನು ತೋರಿಸುತ್ತದೆ.

ವೆಂಕಟರಾಜರು ತಮ್ಮ ಪತ್ರಿಕೆಯಲ್ಲಿ ಬರೆಯುತ್ತಿದ್ದ ಅಂಕಣಗಳೆಂದರೆ ವಾರ್ತಾಲಾಪ ಎಂಬ ಸ್ಥಳೀಯ ಪ್ರಮುಖ ವರದಿಗಳ ಅಂಕಣ, ಮಧುರ ಮಂಥನ ಎಂಬ ಪುಸ್ತಕ ಸಮೀಕ್ಷೆಯ ಅಂಕಣ[ಬೇರೆ ಕೆಲವರೂ ಪುಸ್ತಕಗಳನ್ನು ಸಮೀಕ್ಷಿಸಿದ್ದಾರೆ], ಕೇವಲ ಕುಚೋದ್ಯ ಎಂಬ ವರದಿಗಳ ಚೂರುಗಳನ್ನು ಹೆಕ್ಕಿಕೊಂಡು ಅವುಗಳನ್ನು ವಿಡಂಬಿಸುವ ಅಂಕಣ, ಇದರ ಕೊನೆಗೆ ಮಾರಂಗ (ನವಗಿರಿನಂದರ ಗುಪ್ತನಾಮ) ಅವರ ಒಂದು ಪಾಕೆಟ್ ಕಾರ್ಟೂನ್ ಇರುತ್ತಿತ್ತು; ವಿಚಾರ ವೇದಿಕೆ ಎಂಬ ಚಿಂತನಶೀಲ ಬರಹಗಳ ಅಂಕಣ[ಇದರಲ್ಲಿ ಬೇರೆಯವರ ಲೇಖನಗಳು ಕೂಡಾ ಪ್ರಕಟವಾಗಿವೆ], ಲೋಕಾಭಿರಾಮ ಎಂಬ ಲಘು ಧಾಟಿಯ ಅಂಕಣ, ಚಾರು ಚೂರು ಎಂಬ ಸ್ವಾರಸ್ಯಕರ ಮತ್ತು ಮಾಹಿತಿಪೂರ್ಣ ಸುದ್ದಿಗಳನ್ನು ನೀಡುವ ಅಂಕಣ. ಪ್ರಾರಂಭದಲ್ಲಿ ಎಲ್ಲಾ ಅಂಕಣಗಳು ಇದ್ದ ಪತ್ರಿಕೆ ಪರಿಪುಷ್ಟವಾಗಿತ್ತು. ಮುಂದೆ [ಒಂದೆರಡು ವರ್ಷಗಳ ನಂತರ, ಪತ್ರಿಕೆಯ ಪುಟಗಳು ಕಡಿಮೆಯಾದಾಗ] ಇವುಗಳು ಪತ್ರಿಕೆಯಲ್ಲಿ ಅವಕಾಶ ನೋಡಿ ಕೊಂಡು ಪ್ರಕಟವಾಗುತ್ತಿದ್ದವು; ಅಂದರೆ ಈ ಎಲ್ಲ ಅಂಕಣಗಳು ಒಂದೇ ಸಂಚಿಕೆಯಲ್ಲಿ ಕಾಣಸಿಗುವುದಿಲ್ಲ. ಕೊನೆಯ ಎರಡು ಮೂರು ವರ್ಷಗಳಲ್ಲಿ ಕೆಲವು ಅಂಕಣಗಳು [ಉದಾಹರಣೆಗೆ ಕೇವಲ ಕುಚೋದ್ಯ, ವ್ಯಂಗ್ಯ ಚಿತ್ರ, ವಿಚಾರವೇದಿಕೆ. ತಾರಾಬಲ] ನಿಂತೇ ಹೋಗಿದ್ದವು. ವೆಂಕಟರಾಜರು ಪತ್ರಿಕೆಯ ಬಗ್ಗೆ ಆಸಕ್ತಿ ಕಳೆದುಕೊಳ್ಳತೊಡಗಿದ್ದರು ಎಂದು ಕೂಡ ಊಹಿಸಬಹುದಾದಂತೆ ಅಂಕಣಗಳಲ್ಲಿ ಕಡಿತ ಉಂಟಾಗಿದೆ. ಸ್ವಕೀಯ ಎಂಬ ಸಂಪಾದಕೀಯ ಪ್ರತಿ ಸಂಚಿಕೆಯಲ್ಲಿ ಇದ್ದೇ ಇರುತ್ತಿತ್ತು. ಈ ಸಂಪಾದಕೀಯ ಬರಹಗಳು ವೆಂಕಟರಾಜರ ಮುಖ್ಯ ಬರಹಗಳ ಸಾಲಿಗೆ ಸೇರಬೇಕಾದಷ್ಟು ಮುಖ್ಯವಾಗಿವೆ.

ಚಾರು ಚೂರು

ಒಂದೊಂದು ಕಂತಿನಲ್ಲಿ ಮೂರು ನಾಲ್ಕು ಕುತೂಹಲಕರ ಮಾಹಿತಿಗಳನ್ನು, ಹೊಸ

ಸಂಶೋಧನೆಗಳನ್ನು ಪರಿಚಯಿಸುವ ಅಂಕಣವಿದು. ವೆಂಕಟರಾಜರ ಆಸಕ್ತಿ ಕ್ಷೇತ್ರಗಳ ವೈವಿಧ್ಯ ಮತ್ತು ಓದಿನ ವಿಸ್ತಾರಗಳನ್ನು ತಿಳಿಸಬಲ್ಲ ಆಧಾರಗಳಲ್ಲಿ ಈ ಅಂಕಣವೂ ಒಂದು. ಈ ಅಂಕಣದ ಸ್ವರೂಪವನ್ನು ಪರಿಚಯಿಸಿಕೊಳ್ಳುವುದಕ್ಕಾಗಿ ಕೊಡಬಹುದಾದ ಉದಾಹರಣೆಯೆಂದರೆ, ದಶಂಬರ 1965ರ ಸಂಚಿಕೆಯಲ್ಲಿ **"ಅಟ್ಲಾಂಟಿಸ್ ಎಂಬ ಮಹಾದ್ವೀಪ ಇತ್ತೆ?"** ಎಂಬ ಕುತೂಹಲಕರ ಲೇಖನವನ್ನೂ, ಇತರ ಕೆಲವು ವೈಜ್ಞಾನಿಕ ಅನ್ವೇಷಣೆಗಳ(ಖಂಡಗಳ ಕೆಳಗಡೇ ಸಾಗರಗಳು, 30 ಲಕ್ಷ ವರ್ಷಗಳ ಪ್ರಾಚೀನಾವಶೇಷ, 300 ಕೋಟಿ ವರ್ಷಗಳ ಹಿಂದೆ, ಶಿಲಾಯುಗಾರಂಭ ಕಾಲದಲ್ಲಿ, ಬ್ರಾಹ್ಮಿಲಿಪಿಯ ತಾಳೆಗರಿ ಪುಸ್ತಕ) ಮಾಹಿತಿಯನ್ನೂ ಕೊಟ್ಟಿದ್ದಾರೆ. ಅಟ್ಲಾಂಟಿಸ್ ಇತ್ತೇ ಇಲ್ಲವೇ ಎನ್ನುವ ಚರ್ಚೆಯು ಸೋವಿಯತ್ ನಾಡಿನ ಜೆಮ್ಲ್ಯಾವ್ಸೆನ್ನಯ(ಭೂಮಿ–ಬ್ರಹ್ಮಾಂಡ) ಎಂಬ ಪತ್ರಿಕೆಯಲ್ಲಿ ನಡೆಯುತ್ತಿದೆ ಎಂದು ಹೇಳಿರುವ ವೆಂಕಟರಾಜರು ಡಾ. ಝಿರೋವ್ ಎಂಬವರು ಅಟ್ಲಾಂಟಿಸ್ ಇತ್ತು ಎಂದು ವಾದಿಸಿ ಪುಸ್ತಕವೊಂದನ್ನು ಬರೆದಿದ್ದರೆ, ಅಲೆಕ್ಸಾಂಡರ್ ಇಲಿನ್ ಎಂಬ ವಿಜ್ಞಾನಿ ಅದು ಕಪೋಲ ಕಲ್ಪನೆ ಎಂದು ವಾದಿಸಿದ್ದಾರೆಂದು ದಾಖಲಿಸಿದ್ದಾರೆ.

ಈ ಅಂಕಣ ವೆಂಕಟರಾಜರ ಆಸಕ್ತಿಯ ವಿಸ್ತಾರವನ್ನು, ವ್ಯಾಪಕ ಓದನ್ನು ಮತ್ತು ಚಿಂತನೆಯ ಸ್ಪೋಪಜ್ಞತೆಯನ್ನು ಸೂಚಿಸುವ ದಾಖಲೆಯೂ ಹೌದು.

ಕೇವಲ ಕುಚೋದ್ಯ

ಬೇರೆ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಗಳನ್ನು ಆಯ್ದು ಅದಕ್ಕೆ ವ್ಯಂಗ್ಯವಾಗಿ ಅಥವಾ ಹಾಸ್ಯಪ್ರಜ್ಞೆಯಿಂದ ಪ್ರತಿಕ್ರಿಯಿಸುವ ಅಂಕಣ **'ಕೇವಲ ಕುಚೋದ್ಯ'**. ಮಾಸ್ಟ್ ಹೆಡ್‌ನಲ್ಲಿ ಒಂದು ಚಿತ್ರವಿದ್ದು ಅದರಲ್ಲಿ ಕೆಲವು ಬಾಲಕರು ಕತ್ತೆಯ ಬಾಲಕ್ಕೆ ಪಟಾಕಿ ಕಟ್ಟಿ ಬೆಂಕಿ ಹಚ್ಚಿದಾಗ ಅದು ಬೆದರಿ ಓಡುವುದು, ಅದರ ಓಟಕ್ಕೆ[ಮತ್ತು ಪಟಾಕಿ ಸದ್ದಿಗೆ] ಬೆದರಿ ನಾಯಿಗಳು ಓಡುವುದು, ಹುಡುಗರು ನಗುವುದು ಇದೆ.

ಒಂದು ಉದಾಹರಣೆಯಿಂದ ಈ ಅಂಕಣದ ಸ್ವರೂಪವನ್ನು ಸ್ಪಷ್ಟಪಡಿಸಿಕೊಳ್ಳಬಹುದು:

ಜಯಪುರದಲ್ಲಿ ನಡೆದ ಎಐಸಿಸಿ ಮಹಾಸಭೆಯ ಮೆರವಣಿಗೆಯನ್ನು ಸಾವಿರಾರು ಮಂದಿ ಹಳ್ಳಿಗರು ಕುತೂಹಲದಿಂದ ನೋಡುತ್ತ ನಿಂತದ್ದನ್ನು ಶ್ರೀ ನೆಹ್ರೂರವರು ಪ್ರಶಂಸಿಸಿರುವರು.

– ಪತ್ರಿಕೆಯ ವರದಿ

ದರೋಡೆಗಾರರಿಗೆ ಕುಪ್ರಸಿದ್ಧವಾದ ರಾಜಸ್ಥಾನದ ಹಳ್ಳಿಯವರಿಗೆ ಇಂತಹ ಗುಂಪುಗಳನ್ನು ಪದೇ ಪದೇ ನೋಡುವುದು ಅಭ್ಯಾಸವಾಗಿರುವುದರಿಂದ ಈ ಮೆರವಣಿಗೆಯನ್ನು ಅಷ್ಟೇ ಕುತೂಹಲದಿಂದ ಕಾದು ನೋಡಿದರೆಂಬುದು ಶ್ರೀ ನೆಹ್ರೂರವರಿಗೆ ಪಾಪ! ಹೇಗೆ ಗೊತ್ತಾಗಬೇಕು?

('ವೀರಭೂಮಿ', ದಶಂಬರ 15, 1963)

– ಇಂತಹ ಎಂಟು ಹತ್ತು ಬರಹಗಳು (ಎರಡು ಪುಟಗಳ ಮಿತಿಯಲ್ಲಿ) ಒಂದೊಂದು ಅಂಕಣದಲ್ಲಿರುತ್ತಿದ್ದವು. ಈ ವಿಭಾಗದ ಕೊನೆಯಲ್ಲಿ ಒಂದು ಪುಟ್ಟ ವ್ಯಂಗ್ಯ ಚಿತ್ರ [ಪಾಕೆಟ್ ಕಾರ್ಟೂನ್] ಇರುತ್ತಿತ್ತು. ವ್ಯಂಗ್ಯ ಚಿತ್ರಕಾರರು–ಮಾರಂಗ [ಮಾದರಬೆಟ್ಟು ರಂಗರಾವ್ ಅಥವಾ ನವಗಿರಿನಂದ].

ವಿಚಾರ ವೇದಿಕೆ

ಗಂಭೀರ ಚರ್ಚೆಗಾಗಿ ಇದ್ದ ವೇದಿಕೆಯಾಗಿ ವೆಂಕಟರಾಜರು ಈ ಅಂಕಣವನ್ನು

ಕಲ್ಪಿಸಿರಬೇಕು. ಕೆಲವೊಮ್ಮೆ ಹರಟೆ, ಲಘು ಬರಹಗಳೂ ಈ ಅಂಕಣದಲ್ಲಿ ಪ್ರಕಟವಾಗಿವೆ. ಧಾಟಿ ಯಾವುದಿದ್ದರೂ ದೇಶದ ಕೆಲವು ಪ್ರಸಕ್ತ ಸಮಸ್ಯೆಗಳನ್ನು ಚರ್ಚಿಸಲು ಈ ಅಂಕಣವನ್ನು ವೆಂಕಟರಾಜರು ಉಪಯೋಗಿಸಿಕೊಳ್ಳುತ್ತಿದ್ದರು. ಈ ಅಂಕಣದ ಪ್ರಾರಂಭದಲ್ಲಿ ಈ ಅಂಕಣಕ್ಕಾಗಿಯೇ ಬರೆಯಿಸಿದ್ದ ಚಿತ್ರದಲ್ಲಿ ಕಪಿಗಳ ಮೀಟಿಂಗಿನ ವ್ಯಂಗ್ಯ ಚಿತ್ರವೊಂದನ್ನು ಹಾಕುತ್ತಿದ್ದರು. ಮೊದಲನೆಯ ಸಂಚಿಕೆಯಲ್ಲಿ ಗೌರೀಶ ಕಾಯ್ಕಿಣಿಯವರ 'ತುರ್ತು ಪರಿಸ್ಥಿತಿಯ ವಿವೇಚನೆ' ಎಂಬ ಲೇಖನವನ್ನು ಇದೇ ಅಂಕಣದಲ್ಲಿ ಪ್ರಕಟಿಸಿದ್ದರು. ಆಮೇಲೆ ಇದರಲ್ಲಿ ವೆಂಕಟರಾಜರ ಮತ್ತು ಇತರರ ಬರಹಗಳು ಪ್ರಕಟವಾಗಿವೆ.

ಅನುವಾದ ಲೇಖನಗಳು

ವೆಂಕಟರಾಜರು ತಮ್ಮ ಪತ್ರಿಕೆಗಾಗಿ ಇಂಗ್ಲಿಷ್ ಭಾಷೆಯಲ್ಲಿದ್ದ ಹಲವು ಲೇಖನಗಳನ್ನು ಅನುವಾದಿಸಿ ಪ್ರಕಟಿಸಿದ್ದಾರೆ. ಇವು ಸಾಹಿತ್ಯಿಕ ಲೇಖನಗಳಾಗಿರದೆ ವಿಶ್ವ ರಾಜಕೀಯ, ಸಾಮಾನ್ಯ ಜ್ಞಾನ ಮತ್ತು ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಲೇಖನಗಳೆನ್ನುವುದು ಮುಖ್ಯ. ತಮ್ಮ ಪತ್ರಿಕೆಯ ಮೂಲಕ ಸಾಹಿತ್ಯ ಚಿಂತನೆ ಯನ್ನಾಗಲೀ, ಹೊಸ ಸಾಹಿತ್ಯಿಕ ಚರ್ಚೆಗಳನ್ನಾಗಲೀ ಪ್ರಕಟಿಸುವ ಅವಕಾಶವಿದ್ದಾಗಲೂ ಹಾಗೆ ಮಾಡದೆ ತಮ್ಮ ಓದುಗರಿಗೆ ಪ್ರಚಲಿತ ವಿದ್ಯಮಾನ, ಹೊಸ ಹೊಸ ಸಂಶೋಧನೆಗಳ ಕುರಿತು ಮಾಹಿತಿ ನೀಡಲು ನಿರ್ಧರಿಸಿರುವುದು ಗಮನಾರ್ಹವಾಗಿದೆ.

'ವೀರಭೂಮಿ'ಯ ಸಂಪಾದಕೀಯಗಳು

ವೆಂಕಟರಾಜರು 'ವೀರಭೂಮಿ'ಯಲ್ಲಿ ಪ್ರತಿ ತಿಂಗಳೂ 'ಸ್ವಕೀಯ' ಎಂಬ ಶೀರ್ಷಿಕೆಯಡಿಯಲ್ಲಿ ಬರೆಯುತ್ತಿದ್ದ ಸಂಪಾದಕೀಯಗಳು ಅವರ ಮುಖ್ಯ ಬರಹಗಳ ಸಾಲಿಗೆ ಸೇರಬೇಕಾದಷ್ಟು ಮುಖ್ಯವಾಗಿವೆ. ವೆಂಕಟರಾಜರು ಒಬ್ಬ ದೂರದೃಷ್ಟಿಯ ರಾಜಕೀಯ ಚಿಂತಕರು ಮತ್ತು ತಮ್ಮ ರಾಜಕೀಯ ವಿಶ್ಲೇಷಣೆಯ ಲೇಖನಗಳಿಗೆ ತಮ್ಮ ಪತ್ರಿಕೆಯಲ್ಲಿ ಅವಕಾಶ ಮಾಡಿಕೊಂಡುದರಿಂದ ಆ ಕಾಲದ ರಾಜಕೀಯದ ಒಟ್ಟು ಚಿತ್ರಣ ನಮಗೆ ಲಭಿಸುವಂತಾಗಿದೆ. ಅವರು 1964ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಸಂಪಾದಕೀಯಗಳಲ್ಲಿ ಕಾಶ್ಮೀರದ ಸಮಸ್ಯೆಯನ್ನು ವಿಶ್ಲೇಷಿಸಿರುವ ರೀತಿ; ಜತೆಗೆ ಕಾಂಗ್ರೆಸಿನ ವ್ಯಕ್ತಿಪೂಜೆ ಮತ್ತು ದೇಶದ ಹಿತವನ್ನು ಪಕ್ಷದ ಹಿತಕ್ಕಾಗಿ ಬಲಿಕೊಡುತ್ತಿರುವುದರ ಖಂಡನೆ ಅವರ ತೀಕ್ಷ್ಣ ಚಿಂತನೆ ಮತ್ತು ದೂರದೃಷ್ಟಿಗಳಿಗೆ ಉದಾಹರಣೆಯಾಗಿದೆ.

1966ರ ಅಕ್ಟೋಬರ್ ಸಂಚಿಕೆಯಲ್ಲಿ, ದೇಶದಲ್ಲಿ ಚುನಾವಣೆ ಸನ್ನಿಹಿತವಾದಾಗ ಪ್ರಜಾಪ್ರಭುತ್ವದ ಚುನಾವಣೆಯ ಕೆಲವು ವಿಸಂಗತಿಗಳ ಬಗ್ಗೆ ವೆಂಕಟರಾಜರು ಕನ್ನಡಿ ಹಿಡಿದಿದ್ದಾರೆ. ಅವರ ಅಭಿಪ್ರಾಯಗಳೆಂದರೆ – 1. ಚುನಾವಣೆಯ ಪೂರ್ವದಲ್ಲಿ ಆಡಳಿತಾರೂಢ ಪಕ್ಷ ಅಧಿಕಾರದಿಂದ ಕೆಳಗಿಳಿದು ಮುಕ್ತ ಚುನಾವಣೆಗೆ ಅನುಕೂಲವಾಗುವಂತೆ ಸಂವಿಧಾನದಲ್ಲಿ ತಿದ್ದುಪಡಿ ಯಾಗಬೇಕು. [ಅಂಥ ಮಸೂದೆಯೊಂದು ಈಗಾಗಲೇ ಬಿದ್ದುಹೋಗಿದೆ ಎಂದು ಕೂಡಾ ಅವರು ದಾಖಲಿಸಿದ್ದಾರೆ]. 2. "ಹಲವು ಸಂದರ್ಭಗಳಲ್ಲಿ ಒಂದು ಕ್ಷೇತ್ರದ ಜನತೆಯ ಅಭಿಪ್ರಾಯ ಹಲವು ಪಾಲಾಗುವುದರಿಂದ ಆ ಪೈಕಿ ಯಾರು ಹೆಚ್ಚು ಮತ ಗಿಟ್ಟಿಸಿಕೊಳ್ಳುತ್ತಾರೋ ಅವರೇ ಪ್ರತಿನಿಧಿಯಾಗಿ ಆರಿಸಿಬರುತಿದ್ದಾರೆ. ಎಂದರೆ ಅವರ ವಿರುದ್ಧವಾಗಿ ಬಿದ್ದಿರುವ ಮುಕ್ಕಾಲು ಪಾಲು ಮತಗಳಿಗೂ ಬೆಲೆಯಿಲ್ಲದೆ ಹೋಗುತ್ತದೆ. ಆ ವ್ಯಕ್ತಿ ಮುಕ್ಕಾಲು ಪಾಲು

ಜನತೆಗೂ ಅನಪೇಕ್ಷಿತ ವ್ಯಕ್ತಿಯಾಗಿದ್ದರೂ ಆ ದಿನಕ್ಕೆ ಅವನೇ ನಮ್ಮ ಗಂಡನಾಗಿ ಬರುತ್ತಾನೆ. ಇಂತಹ ವಿಸಂಗತ ವಿವೇಕರಹಿತ ವಿಧಿಗಳಿಂದಾಗಿ ಮತದಾನದ ಮೂಲಭೂತ ಹಕ್ಕಿಗೇ ಚ್ಯುತಿ ಬರುವುದಂತೂ ನಿಸ್ಸಂದಿಗ್ಧ", ಹೀಗೆ ಹೇಳಿದರೂ ವೆಂಕಟರಾಜರು, "ಪ್ರಜಾಸತ್ತೆಯಲ್ಲಿ ಎಲ್ಲವನ್ನೂ ಸಹಿಸಿಕೊಳ್ಳಬೇಕು – ತಾಳಬೇಕು, ಏಕೆಂದರೆ ಪ್ರಜಾಸತ್ತೆಯಲ್ಲಿ ಇಂದಲ್ಲದಿದ್ದರೂ ಎಂದಾದರೊಂದು ದಿನ ಜನತೆಯ ಅಭಿಲಾಷೆ ಪರಿಪೂರ್ಣವಾಗಲು ಸಾಧ್ಯವಿದೆ" ಎನ್ನುತ್ತಾರೆ.

15.4.66ರ ಸಂಚಿಕೆಯಲ್ಲಿ, 'ನಾವು ನಮ್ಮ ಪ್ರಜಾಸತ್ತೆಯನ್ನು ಉಳಿಸಿಕೊಳ್ಳಬಲ್ಲೆವೆ' ಎಂಬ ವಿಚಾರಪ್ರಚೋದಕ ಸಂಪಾದಕೀಯವನ್ನು ಬರೆದಿದ್ದಾರೆ. "ಸಮಾಜವಾದದ ಮಾದರಿಯ ರಾಜ್ಯ ನಿರ್ಮಾಣವೆಂದು ಠರಾವು ಪಾಸು ಮಾಡಿಕೊಂಡೊಡನೆಯೇ ಜಗತ್ತಿನ ಉದ್ಧಾರ ವಾಗುವುದಿಲ್ಲ. ಸಮಾಜವಾದಕ್ಕೆ ಅಂಟಿಕೊಳ್ಳಲು ಅಂಜುವ ಸರಕಾರ ಅವರ ಮಾದರಿಯ ಕರಿನೆರಳನ್ನು ಕರಿನೆರಳನ್ನು ಅನುಸರಿಸುವ ಯತ್ನಕ್ಕೆ ಕೈಹಾಕಿಕೊಂಡುದೊಂದು ಮಹಾ ದುರ್ದೈವ!' ಎಂದು ಬರೆದಿದ್ದಾರೆ.

ಸಪ್ಟಂಬರ್ 1965ರ ಸ್ವಕೀಯದಲ್ಲಿ 'ಕಾಶ್ಮೀರದ ಯಕ್ಷಪ್ರಶ್ನೆ' ಎಂಬ ನಾಲ್ಕುಪುಟಗಳಷ್ಟು ದೀರ್ಘವಾಗಿ ಕಾಶ್ಮೀರ ಸಮಸ್ಯೆಯ ಮೂಲವನ್ನು ವೆಂಕಟರಾಜರು ಚರ್ಚಿಸಿದ್ದಾರೆ. ಸ್ವಾತಂತ್ರ್ಯ ಸಿಕ್ಕಿದ ಸಂದರ್ಭದಲ್ಲಿ ಬ್ರಿಟಿಷರು ನೀಡಿದ ಆಯ್ಕೆಯನ್ನು ಬಳಸಿಕೊಂಡು ಸ್ವತಂತ್ರವಾಗಿ ಉಳಿಯ ಬಯಸಿದ ಕಾಶ್ಮೀರದ ಹಿಂದೂ ರಾಜ ಪಾಕಿಸ್ತಾನ ತನ್ನ ರಾಜ್ಯದ ಮೇಲೆ ದಾಳಿ ಮಾಡಿದಾಗ ದಾರಿಕಾಣದೆ ಭಾರತದೊಂದಿಗೆ ವಿಲೀನವಾದನು. ಪಾಕಿಸ್ತಾನ ಅಲ್ಲಿನ ರಾಜನಿಗೆ ವಿಲೀನದ ಪ್ರಶ್ನೆಯನ್ನು ನಿರ್ಧರಿಸುವ ಹಕ್ಕಿಲ್ಲವೆಂದೂ ಅದನ್ನು ಜನತೆಯ ಅಭಿಪ್ರಾಯಕ್ಕೆ ಬಿಟ್ಟುಕೊಡಬೇಕೆಂದು ವಾದಿಸತೊಡಗಿತು. ಮತ್ತು ಅಂದಿನಿಂದಲೂ ಕಾಶ್ಮೀರದ ಮೇಲೆ ಪ್ರಚ್ಛನ್ನ ಯುದ್ಧವನ್ನು ಮಾಡುತ್ತಲೇ ಇದೆ. ವೆಂಕಟರಾಜರು ಹೇಳುತ್ತಾರೆ : "ಅಂದು ಭಾರತವು ಕಾಶ್ಮೀರದ ಸಹಾಯಕ್ಕೆ ಮುನ್ನುಗ್ಗಿ ಕಾಶ್ಮೀರದ ಕಣಿವೆಯನ್ನು ಗೆದ್ದು ಪರಾಕ್ರಮಣವನ್ನು ತಡೆಗಟ್ಟಿ ಮುನ್ನುಗ್ಗುತ್ತಿದ್ದಾಗಲೇ ನಮ್ಮ ರಾಜಕಾರಣಿಗಳ ಬುದ್ಧಿಹೀನ ಗದ್ದಲದಿಂದಾಗಿಯೇ ಇಂತಹ ರಾಗಕ್ಕೆ ಪುಟಬಂದಂತಾಯಿತು. ಬರೇ ಮೂರು ದಿನಗಳಲ್ಲಿ ಸಂಪೂರ್ಣ ಕಾಶ್ಮೀರದ ಭಾಗ ನಮ್ಮ ಕೈಸೇರುವ ಸಂದರ್ಭವಿದ್ದಾಗ ಉನ್ನತ ಸೈನ್ಯಾಧಿಕಾರಿಗಳ ಅಭಿಮತವನ್ನು ಮೀರಿ ರಾಜಕಾರಣಿಗಳು ವಿಶ್ವಸಂಸ್ಥೆಯ ಆದೇಶದ ಮೇರೆಗೆ ಯುದ್ಧವನ್ನು ಸ್ಥಗಿತಗೊಳಿಸಿದರು. ಇದರ ಪರಿಣಾಮವಾಗಿ ಕಾಶ್ಮೀರವು ಎರಡು ಹೋಳಾಯಿತು. ...ಅಂದಿನಿಂದಲೂ ಪಾಕಿಸ್ಥಾನವು ಕಾಶ್ಮೀರವನ್ನು ತನಗೆ ಸೇರಬೇಕಾದ ದಾಯಭಾಗವೆಂದು ವಾದಿಸುತ್ತಾ ಬಂದಿದೆ."

"ಆಗ ನಮ್ಮ ಧುರೀಣರು ರಾಜಕೀಯದಲ್ಲಿ ತಳೆದ ಅಸಮರ್ಥ ಅಸಮಗ್ರ–ಅರ್ಥಹೀನ ಧೋರಣೆಯೇ ಈ ಪ್ರಶ್ನೆಯನ್ನು ಮತ್ತಷ್ಟು ಜಟಿಲಗೊಳಿಸಲು ಕಾರಣವಾಯಿತು. ...ನಮ್ಮ ದೇಶದ ಭದ್ರತೆಗಾಗಿ ಬೇಕಾದ ಸೈನಿಕಶಕ್ತಿಯನ್ನು ನಾವು ದೊಡ್ಡದೊಂದು ಪಂಚಶಿಲೆಯನ್ನು ಹೊತ್ತುಹಾಕಿ ಕೊಂದುಬಿಟ್ಟೆವು. ಸಹಕಾರ–ಸಹಜೀವನ–ಸಹವರ್ತನೆ ಮೊದಲಾದ ದೊಡ್ಡ ದೊಡ್ಡ ಶಬ್ದಗಳ ಪುನರುಚ್ಚಾರದಿಂದಲೇ ನಮ್ಮ ದೇಶ ಬದುಕಬಹುದೆಂಬ ಹುಚ್ಚು ಕಲ್ಪನೆಯೇ ನಮ್ಮ ತಲೆ ಹೊಕ್ಕಿತ್ತು."

"ನಮಗೆ ಯುದ್ಧವೇ ಬೇಡವೆಂಬ ನಮ್ಮ ಭ್ರಮೆಯು ಒಂದುದಿನ ತಾನೇ ತಾನಾಗಿ ಕಳಚಿಹೋಯಿತು. ಹಾಗೆ ಕಳಚಿಹೋದಾಗ ಚೈನಾ ದೇಶದ ದಂಡು ನಮ್ಮ ಹದಿನಾಲ್ಕು ಸಾವಿರ ಮೈಲುಗಳ ಭೂಭಾಗವನ್ನು ಕಬಳಿಸಿದ್ದಿತ್ತು." ಹೀಗೆ ವಿಶ್ಲೇಷಿಸಿದ ಮೇಲೆ ನಾವು ಯುದ್ಧವನ್ನೇ ಮಾಡದೆ ಬೇರೆ ದಾರಿಯಿಲ್ಲವೆಂದು ಹೇಳಿರುವುದು ವೆಂಕಟರಾಜರ

ರಾಜಕೀಯ ದೂರದೃಷ್ಟಿಯನ್ನು ತೋರಿಸುತ್ತದೆ. ಕಾಶ್ಮೀರ ಸಮಸ್ಯೆಯ ಬಗ್ಗೆ ಹಲವು ಬಾರಿ ಅವರು ಪ್ರಸ್ತಾಪಿಸಿದ್ದಾರೆ.

ಗೋವಾ ಕರ್ನಾಟಕದ ಭಾಗವೇ ಹೊರತು ಮಹಾರಾಷ್ಟ್ರದ ನಾಯಕರು ಹೇಳುವಂತೆ ಮಹಾರಾಷ್ಟ್ರದ ಭಾಗವಲ್ಲ ಎಂದು ಕೆಲವು ಸ್ವಕೀಯದ ಬರಹಗಳಲ್ಲಿ ವೆಂಕಟರಾಜರು ಆಗಾಗ ಹೇಳುತ್ತಲೇ ಬಂದಿದ್ದರು. ಮತ್ತೊಂದು ಗಡಿ ಸಮಸ್ಯೆಯೆಂದರೆ ಬೆಳಗಾವಿಯದು. 1966ರ ಜೂನ್ ಮತ್ತು ಜುಲೈ ತಿಂಗಳುಗಳ ಸ್ವಕೀಯ ಅಂಕಣದಲ್ಲಿ ಆಗ ತಾರಕಕ್ಕೇರಿದ ಈ ಸಮಸ್ಯೆಯನ್ನು ವೆಂಕಟರಾಜರು ಚರ್ಚಿಸಿದ್ದಾರೆ. ಮುಂಬಯಿಯಲ್ಲಿ ನಡೆದ ಎ.ಐ.ಸಿ.ಸಿ. ಸಮ್ಮೇಳನದ ಒತ್ತಾಯದಂತೆ ಕೇಂದ್ರವು ಮೈಸೂರು–ಮಹಾರಾಷ್ಟ್ರಗಳ ಗಡಿ ವಿವಾದವನ್ನು ಪರಿಶೀಲಿಸಲು ಗಡಿ ಸಮಿತಿಯನ್ನು ರಚಿಸಿದ್ದರ ವಿರುದ್ಧ ಧ್ವನಿ ಎತ್ತಿದ್ದಾರೆ.

ಜುಲೈ ತಿಂಗಳಲ್ಲಿ ಗಡಿವಿವಾದದಿಂದಾಗಿ ರಾಜ್ಯದಲ್ಲಿ ಭುಗಿಲೆದ್ದ ಗಲಾಟೆಯನ್ನು ಸಮರ್ಥಿಸಿ ಕನ್ನಡಿಗರು ಕೊನೆಗಾದರೂ ತಮ್ಮ ಹಕ್ಕಿಗಾಗಿ ಹೋರಾಡುತ್ತಿದ್ದಾರೆಂದು ತೃಪ್ತಿ ತೋರ್ಪಡಿಸಿದ್ದಾರೆ. "ಇಂತಹ ಚಳವಳದಿಂದಾಗಿ ಶ್ರೀ ನಿಜಲಿಂಗಪ್ಪನವರ ಸ್ಥಾನಮಾನಗಳಿಗೆ ಧಕ್ಕೆ ತಗಲಬಹುದೆಂದು ಸೂಚಿಸುವವರೂ ಇದ್ದಾರೆ. ಆದರೆ ಈ ಮಂದಿ ನಾಡಿನ ಪ್ರಶ್ನೆಯ ಮುಂದೆ ಯಾವ ನಿಜಲಿಂಗಪ್ಪನವರೂ ಗೌಣರೆಂಬ ಭಾವನೆಯನ್ನು ಇನ್ನಾದರೂ ತಾಳುವುದು ಉತ್ತಮ. ...ಗದ್ದಲದಿಂದಲೇ ಒಂದು ರಾಜ್ಯವನ್ನು ಗೆಲ್ಲಲು ಬರುವುದೆಂದಾದರೆ ಅದು ನಮಗೂ ಸೈ!"

ಕಮ್ಯೂನಿಸ್ಟರ ಬಗ್ಗೆ ಮತ್ತು ನಕ್ಸಲೀಯರ ಬಗ್ಗೆ ವೆಂಕಟರಾಜರು ಸಂಶಯ ಮನೋಭಾವದಿಂದಲೇ ಬರೆದಿದ್ದಾರೆ. ನಕ್ಸಲೀಯರ ಚಟುವಟಿಕೆಗಳಿಗೆ ಕಮ್ಯೂನಿಸ್ಟರ ಬೆಂಬಲವಿರುವುದನ್ನು ಅವರು ಗುರುತಿಸಿದ್ದಾರೆ. "ಕಳೆದ ವರ್ಷ ಬಂಗಾಳದ ಮಾವೋ ಪ್ರಚೋದಕರಿಂದ ನಡೆಸಲ್ಪಟ್ಟಿತೆಂದು ಹೇಳಲಾದ ನಕ್ಸಲ್ಬಾರಿಯ ಪ್ರಕರಣ ಇಂದಿಗೂ ಮರೆತು ಹೋಗಿಲ್ಲ. ಅದೇ ವಿಧ್ವಂಸಕ ಕೃತಿಗಳು ಈಗೀಗ ಅಲ್ಲಲ್ಲಿ ತಲೆದೋರುತ್ತಿರುವುದು ದಿನನಿತ್ಯದ ಸುದ್ದಿಯಾಗುತ್ತಿದೆ. ಚೈನಾದ ದೂತಾವಾಸದಿಂದ ಹಣಸಹಾಯ ಪಡೆದು ಕ್ರಮಬದ್ಧವಾಗಿ ನಡೆಯುತ್ತಿರುವ ಇಂತಹ ಅಭ್ಯಾಸ ಗೋಷ್ಠಿಗಳು ಒರಿಸ್ಸಾ–ಆಂಧ್ರಪ್ರದೇಶದ ಶ್ರೀಕಾಕುಲ –ಮತ್ತೆ ಕೇರಳದ ವೈನಾಡಿನಲ್ಲಿ ಸಹಾ ತಮ್ಮದೇ ಆದ ನಿರ್ಮಿಸಿಕೊಂಡು ಗುಡ್ಡಗಾಡಿನ ಮೂಲನಿವಾಸಿಗಳನ್ನು ಹುರಿದುಂಬಿಸಿ ನೆರೆಕರೆಯ ಧನಿಕರ ಮೇಲೆ ಛೂ ಬಿಡುತ್ತಿರುವುದು ಬಹಳ ಗಣನೀಯವಾಗಿ ಬೆಳೆದಿದೆ. ಇಂತಹ ರೌದ್ರ ರೂಪದ ಕೊಲೆಗೆ ಸಹಾಯಕವಾಗಿಯೇ, ಅರಾಜಕತೆಯನ್ನು ನಿರ್ಮಿಸುವ ಸಲುವಾಗಿಯೇ ಮೊನ್ನೆ ಮೊನ್ನೆ ವೈನಾಡಿನ ಗಡಿಕಾವಲಿನ ಪೋಲೀಸು ಸ್ಟೇಶನಿನ ಮೇಲೆ ಮಾಡಿಸಿದ ದಾಳಿ ಒಂದು ಅಭೂತಪೂರ್ವವಾದ ದಾಖಲೆಯಾಗಿದೆ. ಎಂದರೆ ಈಗಲೀಗ ಕೇರಳದಲ್ಲಿ ಸರಕಾರವೇ ಇಲ್ಲ–ಇದ್ದರೂ ಅದು ಇಂತಹ ಪ್ರಚೋದನೆಗಳಿಗೆ ಮನಸ್ವೀ ಸಹಾಯ ಮಾಡುತ್ತಿದೆಯೆಂದೇ ನಂಬಬೇಕಾಗಿದೆ." – ಈ ಮಾತುಗಳಲ್ಲಿ ಅವರು ಕಮ್ಯೂನಿಸ್ಟರು ತತ್ವದ ಹೆಸರಿನಲ್ಲಿ ದೇಶವನ್ನು ಅಭದ್ರಗೊಳಿಸುತ್ತಿದ್ದಾರೆ; ಅಪ್ರಜಾಸತ್ತಾತ್ಮಕವಾದ ಭಯೋತ್ಪಾದನೆಗೆ ಪ್ರೋತ್ಸಾಹ ನೀಡುತ್ತಿದ್ದಾರೆ ಎಂದು ತಿಳಿದಿದ್ದರೆಂದು ಸ್ಪಷ್ಟವಾಗುತ್ತದೆ. ಕಮ್ಯೂನಿಷ್ಟರ ಬಗ್ಗೆ ಅವರು ಕೆಲವು ಲೇಖನಗಳನ್ನೂ ಬರೆದಿದ್ದಾರೆ.

ನಮ್ಮ ವಿದೇಶ ನೀತಿಯ ಬಗ್ಗೆ ವೆಂಕಟರಾಜರು ಆಗಾಗ ಟಿಪ್ಪಣಿ ಮಾಡುತ್ತಲೇ ಬಂದಿದ್ದಾರೆ. "ಯಾರನ್ನು ಹೊಂದಿಕೊಂಡಿರಬೇಕು? ಯಾರನ್ನು ಅನುಸರಿಸಬೇಕು – ಎಂಬುದು ನಮಗಿನ್ನೂ ಖಚಿತವಾಗಿಲ್ಲ. ನಾವೇನನ್ನೂ ಸಾಧಿಸದ ಮೇಲೆ ಬರೇ ಬೇಡುವಿಕೆಯ ಭಿಕ್ಷಾಪಾತ್ರಕ್ಕಂಟಿ ಕೊಂಡಿದ್ದರೂ ಬಾಯ್ಪಡುಕತನ ವನ್ನಂತೂ ಬಿಟ್ಟಿಲ್ಲ. ಪ್ರಪಂಚದ ಯಾವ

ಮೂಲೆಯಲ್ಲಿ ಏನು ನಡೆದರೂ ಅದನ್ನೇ ದೊಡ್ಡ ವಿಷಯವಾಗಿರಿಸಿ ಕೊಂಡು ಗಂಟೆ ಗಂಟೆ ಕಂಠಶೋಷಣ ಮಾಡಿಕೊಳ್ಳುವುದರಲ್ಲೇ ಆತ್ಮಸಂತೋಷ. ಹೆರರ ಆಗು ಹೋಗುಗಳ ಮೇಲೆ ಇಟ್ಟಷ್ಟು ನಿಗಾ ನಾವು ನಮ್ಮ ಪರವಾಗಿ ಇಟ್ಟುಕೊಂಡಿರುವುದಿಲ್ಲ. ಇಂದಿಗೂ ನಾವು ವಿಯೆತ್ನಾಮ್ ಇಸ್ರೇಲುಗಳ ಬಗ್ಗೆ ತೋರಿಸುವ ಕಳವಳದ ಅರ್ಧದಷ್ಟಾದರೂ ಸಹಾನುಭೂತಿಯನ್ನು ಹಂಗೇರಿ ಚಕೋಸ್ಲವೇಕಿಯದ ಬಗ್ಗೆ ಸಾದರು ಪಡಿಸುವುದಿಲ್ಲ. ನಮ್ಮದು ವಿಕೃತ ಧರ್ಮ – ವಿರೂಪ ದೃಷ್ಟಿ ! ನ್ಯಾಯವಾದುದನ್ನು ಎಲ್ಲ ಕಡೆಗಳಲ್ಲಿ ಹೇಳುವ ಧೈರ್ಯ ನಮಗಿಲ್ಲ. ಆದರೂ ಬಾಯಿಮುಚ್ಚಿ ಕುಳಿತಿರುವುದಿಲ್ಲ." ಎಂದು ಖಾರವಾಗಿ ಒಂದು ಸಂಪಾದಕೀಯದಲ್ಲಿ ಹೇಳಿದ್ದಾರೆ.

ವೆಂಕಟರಾಜರು ಆಗಾಗ ಪಕ್ಷಾಂತರದ ಪಿಡುಗಿನ ಬಗ್ಗೆ ತಮ್ಮ ಸಂಪಾದಕೀಯಗಳಲ್ಲಿ ಎಚ್ಚರಿಸುತ್ತಲೇ ಬಂದಿದ್ದಾರೆ. "ಮಧ್ಯಪ್ರದೇಶದಲ್ಲಿ ...ಕಾಂಗ್ರೆಸ್ ಸದಸ್ಯರೇ ಕಾಂಗ್ರೆಸ್ ಬಿಟ್ಟು ಹೊರನಡೆದು ಇಂತಹ ಮಹಾ ಗಂಡಾಂತರವನ್ನು ತಂದೊಡ್ಡಿದುದರಿಂದ... ಕಾಂಗ್ರೆಸ್ ಇಂತಹ ಪಕ್ಷ ಬಿಡುವ ಪರಾಕ್ರಮಿಗಳ ಬಗ್ಗೆ ಸೂಕ್ತ ಕ್ರಮದ ಏನಾದರೊಂದು ಸೂತ್ರಬದ್ಧತೆಯನ್ನು ಅನುಸರಿಸಬೇಕೆಂದು ಇತರ ಪಕ್ಷದವರೊಡನೆ ವಿಚಾರ ವಿನಿಮಯಕ್ಕೆ ತೊಡಗಿದೆ. ...ಇಂತಹ ಪಕ್ಷತ್ಯಾಗದ ಪ್ರೇತಗಳನ್ನು ನಿರ್ಮಿಸಿದವರೇ ಕಾಂಗ್ರೆಸಿನವರು! ...ಇಂತಹ ಪಕ್ಷಾಂತರಗಳ ಪರಿಣಾಮ ಬಹಳ ಕೆಟ್ಟದೆಂದು ಎಲ್ಲರೂ ಒಪ್ಪಲೇ ಬೇಕು. ಇದೊಂದು ವಿಧದ ಮತದಾರರ ಅಭಿಪ್ರಾಯಕ್ಕೆ ಹಾಕುವ ಸುರಂಗವೆಂದು ಭಾವಿಸಬಹುದು. ...ಇವುಗಳನ್ನೆಲ್ಲ ನಿರ್ಬಂಧಿಸಲು ಸೂಕ್ತ ಶಾಸನವನ್ನೆ ಮುಂದೆ ತರಬೇಕಾಗಬಹುದು. ಒಬ್ಬ ಸದಸ್ಯ ಆ ಕ್ಷೇತ್ರಕ್ಕೆ ಅನಪೇಕ್ಷಣೀಯವಾದರೆ ಅವನನ್ನು ನಿವೃತ್ತಿಗೊಳಿಸುವ ಹಕ್ಕೂ ಆಯಾ ಪಕ್ಷಕ್ಕೆ ಇದ್ದೇ ಇರಬೇಕು. ...ಆದುದರಿಂದ ಅಂತಹ ಪಕ್ಷದ್ರೋಹಿಗಳನ್ನು ಮುಂಚಿತವಾಗಿಯೇ ಮನೆಗೆ ಕಳುಹಿಸಿಕೊಡುವುದು ದೇಶಕ್ಕೆ ಗೌರವ!" ಎನ್ನುವ ಅವರ ಚಿಂತನೆ ಇಂದಿಗೂ ಪ್ರಸ್ತುತವಾಗಿದೆ.

ಜಾತಿ ರಾಜಕೀಯ: ಸ್ವಾತಂತ್ರ್ಯೋತ್ತರ ಭಾರತದ ಜಾತಿ ರಾಜಕೀಯ ಮತ್ತು ಅಲ್ಪಸಂಖ್ಯಾಕರ ಓಲೈಕೆಗಳನ್ನು ವೆಂಕಟರಾಜರು ನಿಷ್ಪಕ್ಷಪಾತವಾಗಿ ಖಂಡಿಸಿದ್ದಾರೆ. ಅವರ ಮಾತುಗಳು ಕೆಲವೊಮ್ಮೆ ಇಂದಿನ ಎಡಪಂಥೀಯರ ಮಾತುಗಳಂತೆಯೂ ಕೆಲವೊಮ್ಮೆ ಇಂದಿನ ಬಲಪಂಥೀಯರ ಮಾತುಗಳಂತೆಯೂ ಕಾಣುವುದು ವಿಶೇಷವಾಗಿದೆ. ಆ ಮಟ್ಟಿಗೆ ಅವರದು ಮಧ್ಯಮಪಂಥ. ಉದಾಹರಣೆಗೆ: "ಉತ್ತಿಷ್ಠತ ಜಾಗ್ರತ–ಪ್ರಾಪ್ಯವರಾನ್ನಿ ಬೋಧತ–ಈ ಚಿರಸ್ಮರಣೀಯ ಮಾತನ್ನು ಹೇಳಿದವರಾರು? ಈಗ ಇವನ್ನು ಹೇಳಿದ ಪುಣ್ಯಾತ್ಮರ ಜನಾಂಗದವರೊಡನೆಯೇ ವರಗಳನ್ನು ಪಡೆದುಕೊಳ್ಳಿರಿ–ಎಂದು ಹೇಳಿದರೆ ಏನು ವರಗಳನ್ನು ಕೇಳಿಕೊಂಡಾರು? ಶಿವಾಜಿಯ ಸಾಮ್ರಾಜ್ಯ, ಶಿವಸೇನೆಯ ಆಡಳಿತ ಇವೇ ಆ ಎರಡು ವರಗಳಿರಬಹುದಲ್ಲ? ಎಂದಾಗ ನಾವು ಮುಂದೆ ಮುಖ ಮಾಡಿಕೊಂಡು ಹಿಂದೆ ನಡೆಯುತ್ತಿದ್ದೇವೆ–ಎಂಬುದಂತೂ ಖಂಡಿತ!"–ಈ ಮಾತುಗಳು ಎಡಪಂಥೀಯರ ಮಾತುಗಳಂತಿವೆ.

ಇದೇ ಸ್ವಕೀಯದಲ್ಲಿರುವ: "ನಮ್ಮ ಚರಿತ್ರೆಯಲ್ಲಿ ಸ್ವಾಭಿಮಾನದ ಪುಟಗಳು ನಿರ್ನಾಮ ವಾಗುತ್ತಿವೆ. ಅದು ನಮ್ಮ ಅಲ್ಪಸಂಖ್ಯಾಕ ಪ್ರಜೆಗಳಿಗೆ ಆಕ್ಷೇಪಕರ." "ಅಲ್ಪಸಂಖ್ಯಾಕರಿಗಾಗಿ ನಮ್ಮ ಕರುಳುಗಳನ್ನು ಕತ್ತರಿಸಿಕೊಡುವ ದಾನಶೂರ ಕರ್ಣನ ವಂಶದವರು ನಾವು! ಅಂತೂ ಈ ಬೃಹದ್ದೇಶದಲ್ಲಿ ಬಹುಸಂಖ್ಯಾಕರ ಕುಲದಲ್ಲಿ ಹುಟ್ಟುವುದಕ್ಕಿಂತಲೂ ಅಲ್ಪಸಂಖ್ಯಾಕರ ವಂಶದಲ್ಲಿ ಹುಟ್ಟುವುದೇ ಲೇಸು! ಇಂತಹ ರಾಜಕೀಯ ಪರಿಸ್ಥಿತಿ ಇನ್ನಾವ ದೇಶದಲ್ಲಿ

ಕಾಣಲು ಸಿಗುತ್ತದೆ?"– ಈ ಮಾತುಗಳನ್ನು ಗಮನಿಸಿದರೆ ಇಂದಿನ ಬಲಪಂಥೀಯರ ವಾದದಂತೆ ಕಾಣುತ್ತದೆ. ಎರಡೂ ಸತ್ಯವಾದ ಮಾತುಗಳೇ ಆಗಿರುವುದರಿಂದ ವೆಂಕಟರಾಜರು ಮಧ್ಯಮಪಂಥದ ನಿಲುವನ್ನು ಹಿಂದೆಯೇ ತಾಳಿದ್ದರು ಎನ್ನುವುದನ್ನು ಗಮನಿಸಬಹುದು.

ದೇಶದಲ್ಲಿ ಇವತ್ತು ಕೂಡಾ ಕಾಣುತ್ತಿರುವ ಒಂದು ವಾಗ್ವಾದವೆಂದರೆ ತಮ್ಮ ತಮ್ಮ ಪಕ್ಷ ಅಥವಾ ತಮಗೆ ಬೇಕಾದ ಪಕ್ಷ ಜಾತ್ಯತೀತ ಪಕ್ಷ; ಭಾಜಪ ಕೋಮುವಾದಿ ಪಕ್ಷ ಇತ್ಯಾದಿ. ಇದರ ಮೂಲ ಸ್ವಾತಂತ್ರ್ಯೋತ್ತರ ರಾಜಕೀಯದಲ್ಲಿ ಹುಟ್ಟುವಾಗಲೇ ವೆಂಕಟರಾಜರು ಗುರುತಿಸಿದ್ದರು. ಅವರು ಒಂದು ಸ್ವಕೀಯದಲ್ಲಿ ಹೀಗೆ ಹೇಳಿದ್ದಾರೆ: "ನಮ್ಮ ದೇಶದಲ್ಲಿ ಸ್ವತಂತ್ರ–ಜನಸಂಘಗಳನ್ನು ಬಿಟ್ಟರೆ ಬೇರೆಲ್ಲ ಪಕ್ಷಗಳೂ ಸಮಾಜವಾದಿಗಳೆ! ಅಥವಾ ಹಾಗೆಂದುಕೊಳ್ಳುವವರೆ!" ಜಾಕಿರ್ ಹುಸೇನರನ್ನು ರಾಷ್ಟ್ರಾಧ್ಯಕ್ಷರನ್ನಾಗಿ ಆರಿಸಿದಾಗ ಕಾಂಗ್ರೆಸಿನ ಜಾತಿ ರಾಜಕೀಯವನ್ನು ಖಂಡಿಸುವ ಜತೆಗೆ ಅದು ವಿದೇಶದಲ್ಲಿ ನಮ್ಮ ಇಮೇಜನ್ನು ಹೆಚ್ಚಿಸುವುದೆಂಬ ಚಿಂತನೆಯ ದೋಷವನ್ನು ಅವರು ಹೀಗೆ ಹೇಳುತ್ತಾರೆ: "ಅಂತೆಯೇ ಜಾಕೀರ್ ಹುಸೇನರನ್ನು ಆರಿಸುವುದರಿಂದ ತಮ್ಮ ಜಾತ್ಯತೀತ ಧೋರಣೆಗೊಂದು ಕಿರೀಟವಿಟ್ಟಂತಾಗುವುದೆಂಬ ಕಾಂಗ್ರೆಸ್ಸಿಗಳ ಒಣತರ್ಕಕ್ಕೂ ಏನೂ ಬೆಲೆಯಿಲ್ಲ... ಪರದೇಶದವರು ಸಾಲಸೋಲ ಸೌಕರ್ಯಗಳನ್ನು ಕೊಟ್ಟಿರುವರೆಂಬೊಂದು ಕಾರಣದಿಂದ ಅವರ ಅಭಿಪ್ರಾಯಗಳಿಗೆ ಮನ್ನಣೆ ಕೊಡುವುದೇ ಒಂದು ನಮ್ಮ ರೀತಿ ನೀತಿಯಾಗಬಾರದು."

ವ್ಯಕ್ತಿಪೂಜೆಯ ಖಂಡನೆ: ವೆಂಕಟರಾಜರ ಸಂಪಾದಕೀಯ ಬರಹಗಳಲ್ಲಿ ವಿಶೇಷವಾಗಿ ಉಲ್ಲೇಖಿಸಬೇಕಾದುದು ಅವರು ವ್ಯಕ್ತಿಪೂಜೆಯನ್ನು ನಿಷ್ಪಕ್ಷಪಾತವಾಗಿ ಖಂಡಿಸುತ್ತಿದ್ದುದು. ತಾವು ತಮ್ಮ ನಾಟಕ ಕವನಗಳಲ್ಲಿ ಗಾಂಧಿಯವರನ್ನು ದೇವರ ಅವತಾರವೆಂದು ಹೇಳಿದರೂ ಸಂಪಾದಕೀಯದಲ್ಲಿ ಅವರನ್ನು ತಪ್ಪು ಕಾರಣಗಳಿಗಾಗಿ ಶ್ರೇಷ್ಠರೆಂದು ತಿಳಿದುಕೊಳ್ಳುವುದನ್ನು ಖಂಡಿಸಿರುವುದು ಒಂದು ಉಜ್ವಲ ಉದಾಹರಣೆಯಾಗಿದೆ: "ಗಾಂಧಿ ನಮ್ಮ ದೇಶದ ತಂದೆಯಾದ. ಅವನಿಂದಲೇ ನಮ್ಮ ಸ್ವರಾಜ್ಯ ಗಿಟ್ಟಿಸಿಕೊಂಡದ್ದೆಂದು ಅಹಿಂಸೆಯ ಕಹಳೆಯೂದಿದೆವು. ಸತ್ಯಾಗ್ರಹದ ಹೊಸ ಸಮರ ತಂತ್ರವನ್ನು ಪ್ರಚಾರಪಡಿಸಿದೆವು. ...ಈಗ ಇಲ್ಲಿ ಎದ್ದು ಕಾಣುವ ಪ್ರಶ್ನೆಯೆಂದರೆ ನಿಜವಾಗಿಯೂ ಗಾಂಧಿಯ ಅಹಿಂಸೆಯಿಂದಲೇ ನಮ್ಮ ಸ್ವರಾಜ್ಯ ಸಿಕ್ಕಿಹುದೇ? ದ್ವಿತೀಯ ಮಹಾಯುದ್ಧದ ಬಿಸಿ ವಾತಾವರಣವಲ್ಲದಿದ್ದರೆ– ಜಾಪಾನಿನ ಆಕ್ರಮಣವಲ್ಲದಿದ್ದರೆ ನಮಗೆ ನಮ್ಮ ಐಚ್ಛಿಕ ಸ್ವರಾಜ್ಯ ಲಭಿಸುತ್ತಿದ್ದಿತೆ? ಗಾಂಧಿಯ ಮಂತ್ರದಿಂದ ನಮ್ಮ ಸ್ವಾತಂತ್ರ್ಯ ಸಿಕ್ಕಿತೆನ್ನುವುದಾದರೆ–ಬರ್ಮಾ ಸಿಂಹಳಗಳಿಗೆ ಯಾಕೆ ಸ್ವರಾಜ್ಯ ದೊರೆಯಿತು? ...ಅವರಿಗೆ ಸ್ವರಾಜ್ಯ ಸಿಕ್ಕಿದುದು ಕೈಸೋತ ಬ್ರಿಟನ್ನಿನ ನಿಶ್ಶಕ್ತಿಯ ಪರಿಣಾಮದಿಂದಾದರೆ ನಮ್ಮದೂ ಅಷ್ಟೇ ಎನ್ನುವುದೇ ಸೂಕ್ತವಾಗಿದೆ. ...ನಮಗೊಬ್ಬ ಸ್ವಾತಂತ್ರ್ಯದ ಮೂಲಪುರುಷ ಬೇಕಾಗಿರುವುದರಿಂದ ಆ ಪಟ್ಟ ಕಿರೀಟವನ್ನು ಗಾಂಧಿಯ ತಲೆಯ ಮೇಲಿಟ್ಟೆವು!"

ನೆಹ್ರೂ ಅವರ ವ್ಯಕ್ತಿಪೂಜೆಯಿಂದ ದೇಶಕ್ಕೆ ಹಾನಿಯೇ ಹೊರತು ಅದರಿಂದ ಒಳಿತಿಲ್ಲವೆಂದು ವೆಂಕಟರಾಜರು ಹಲವು ಸಂದರ್ಭಗಳಲ್ಲಿ ಹೇಳಿದ್ದಾರೆ. ಮುಂದೆ ಅವರ ಲೇಖನಗಳಲ್ಲಿಯೂ ದೇಶದ ಹಿತದೃಷ್ಟಿಯಿಂದ ವ್ಯಕ್ತಿಪೂಜೆಯನ್ನು ಖಂಡಿಸಬೇಕೆಂದು ಹೇಳಿದ್ದನ್ನು ಗಮನಿಸಲಾಗಿದೆ. ಇದೇ ಕಾರಣಕ್ಕೆ ಅವರು ಡಾ. ರಾಮ ಮನೋಹರ ಲೋಹಿಯಾ ಅವರನ್ನು ಮೆಚ್ಚಿಕೊಂಡಿದ್ದರು. 1969ರ ಜುಲೈ ತಿಂಗಳ ಸಂಪಾದಕೀಯದಲ್ಲಿ, "ಸೇವೆ ತ್ಯಾಗಗಳ ಕಾಲವಾದ ಗಾಂಧೀ ಯುಗವು ಕಳೆದ ಮೇಲೆ ನೆಹರೂ ಯುಗದ

ಪ್ರಾರಂಭವಾಯಿತು. ಆಗಿಂದಾಗಲೇ ರಾಜಕೀಯದ ದಾಟಿಯ ಲೇಪ ತಳೆದ ಸ್ವಾರ್ಥ ಜೀವನಕ್ಕೆ ಅಂದೇ ನಾಂದಿಯಾಯಿತೆಂದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. ನೆಹರೂವಿಗೆ ಗಾಂಧೀವಾದದ ಮೇಲೆ ಭರವಸೆ ಎಂತೂ ಇರಲಿಲ್ಲ. ಒಂದಿಗೆ ಸಮಕಾಲೀನ ರಾಜಕೀಯ ಪ್ರಜ್ಞೆಯ ಬುದ್ಧಿವಂತಿಕೆಯೂ ಇರಲಿಲ್ಲ. ಆದುದರಿಂದಲೇ ಅವನ ಅಧಿಕಾರಾವಧಿಯಲ್ಲಿ ದೇಶದಲ್ಲಿ ಅವ್ಯವಸ್ಥೆಗೆ ಅನುಕೂಲವಾದ ವಾತಾವರಣವೇ ಬೆಳೆಯಿತು. ನೆಹರೂ ಸಂತಾನ ಮೊಂಡುತನಕ್ಕೆ ಮನೆಮಾತಾಗಿದೆ. ಆತ್ಮಾಭಿಮಾನ–ಅಹಂಕಾರಕ್ಕೆ ನಿದರ್ಶನವಾಗಿದೆ. ಇಂತಹ ಗುಣಗಳು ಬ್ರಿಟಿಷರ ವಿರುದ್ಧ ಹೋರಾಟದ ಕಾಲದಲ್ಲಿ ಒಂದು ಹಠದ ಅದಮ್ಯ ಶಕ್ತಿಯಾಯಿತೇ ಹೊರತು ನಂತರವಲ್ಲ. ನಂತರ ಅಂತಹ ಗುಣಗಳಿಗೆ ಸ್ವಾಸ್ಥ್ಯ ಸಮಾಜದಲ್ಲಿ ಸ್ಥಾನವಿಲ್ಲ. ...ನೆಹರೂ ವಂಶದ ಭೋಗ ತ್ಯಾಗಗಳ ಕಟ್ಟುಕತೆ ಇವುಗಳೇ ನೆಹರೂವನ್ನು ಮಹಾವ್ಯಕ್ತಿಯಾಗಿ ನಾವೆಲ್ಲ ಎಣಿಸಿಕೊಳ್ಳುವುದರಲ್ಲಿ ಸಹಾಯಕವಾಯಿತು. ಅದೂ ಅಲ್ಲದೆ ನಮ್ಮದು ಮೂರ್ತಿ ಪೂಜೆಯ ದೇಶ. ...ಆದರೆ ಇಂತಹ ಲೋಪದೋಷಗಳನ್ನು ಬೊಟ್ಟಿಟ್ಟು ತೋರಿಸುವುದರಲ್ಲಿ ಶ್ರೀಮಾನ್ ಲೋಹಿಯಾನೊಬ್ಬನೆ ಸಮರ್ಥನಾದನು. ಆಗ ಅವನನ್ನು ನಾವೆಲ್ಲ ಬರೇ ಹುಚ್ಚನೆಂದು ಬಗೆದಿದ್ದರೂ ಆ ಪುಣ್ಯಾತ್ಮ ಹಲವು ಸಂದರ್ಭಗಳಲ್ಲಿ ಪದೇ ಪದೇ ತೋರಿಸುತ್ತ ಬಂದ ಕುತೂಹಲಪೂರ್ಣ ಕುಚೋದ್ಯವೇ ಈ ಬಡ ದೇಶದ ಮಾರ್ಗವನ್ನು ಸಮನಾಗಿಸುವುದರಲ್ಲಿ ಮಹತ್ವಪೂರ್ಣವಾದ ಪಾತ್ರವನ್ನು ವಹಿಸಿದೆ ಎಂಬುದಂತೂ ನಿತ್ಯ ಸತ್ಯವಾಗಿದೆ" ಎಂದು ವೆಂಕಟರಾಜರು ವಿಶ್ಲೇಷಿಸಿದ್ದಾರೆ.

ಲೋಹಿಯಾ ಅವರು ಪ್ರಜಾಪ್ರಭುತ್ವ ರಕ್ಷಣೆಗಾಗಿ ಮತ್ತು ದೇಶದ ಹಿತಕ್ಕಾಗಿ ಕಾದುವ ನಿಷ್ಠಾವಂತ ಎಂಬ ಕಾರಣಕ್ಕೆ ವೆಂಕಟರಾಜರಿಗೆ ಅವರ ಬಗ್ಗೆ ಅಭಿಮಾನ. ವೆಂಕಟರಾಜರು ಲೋಹಿಯಾರ ಮರಣದ ಸಂದರ್ಭದಲ್ಲಿ ಬರೆದ ಸಂಪಾದಕೀಯದಲ್ಲಿ ಹೀಗೆ ಹೇಳಿದ್ದಾರೆ: "ಭಾರತದ ಕೆಲವೇ ಮಂದಿ ಪ್ರಾಮಾಣಿಕ ರಾಜಕಾರಣಿಗಳಲ್ಲೊಬ್ಬರೆಂದು ಹೆಸರಾಂತ, ಎಂದೆಂದಿಗೂ ಬಡವರ ಹಿತೈಷಿಯಾದ ಲೋಹಿಯಾರವರ ಹಲವು ವರ್ತನೆಗಳು ಹಲವು ಬಾರಿ ಹಲವು ಜನರಿಗೆ ಅರ್ಥವಾಗದಿರಬಹುದಾದರೂ ಅವರಿಗೆ ಸಮಾಜವಾದದ ಬೆಳವಣಿಗೆಯಲ್ಲಿ ದೇಶದ ಅಖಂಡ ಅಭಿವೃದ್ಧಿಯಲ್ಲಿ ಇದ್ದ ಅಚಲ ವಿಶ್ವಾಸ ಪ್ರಶ್ನಾತೀತ ವಾಗಿದ್ದಿತು. ದಿವಂಗತ ನೆಹ್ರೂರವರ ಪ್ರಭಾವಪೂರ್ಣ ವ್ಯಕ್ತಿತ್ವದ ಮುಂದೆ ಸವಾಲಾಗಿ ನಿಂತಿದ್ದ ಶ್ರೀ ಲೋಹಿಯಾರವರ ವ್ಯಕ್ತಿತ್ವವಾದರೂ ಎಂದಿಗೂ ಅವರದಕ್ಕಿಂತ ಕಡಿಮೆಯೆಂದು ಯಾರೂ ಭಾವಿಸಲಾಗದು ...ದೇಶಕ್ಕಿಂತಲೂ ನೆಹ್ರೂವೇ ದೊಡ್ಡದೆಂದು ಅವರ ಅಂಧ ಅನುಯಾಯಿಗಳು ಬಾಯಿಬಡಕರಾಗಿ ಪೂಜಿಸುತ್ತಿದ್ದಾಗ ಅಂತಹ ಅಪ್ರಾಸಂಗಿಕ ವ್ಯಕ್ತಿಪೂಜೆಯ ಅತಿರೇಕ ಭಾವನೆಯನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಿದ್ದ ಏಕಮೇವ ವ್ಯಕ್ತಿಯೆಂದರೆ ಲೋಹಿಯಾ ಮಾತ್ರ. ಲೋಹಿಯಾ ಇವರಿಗೆ ದೇಶವೇ ದೈವ–ದೇಶಕ್ಕಿಂತಲೂ ವ್ಯಕ್ತಿಯ ವರ್ಚಸ್ಸು ಬೆಳೆದು ಜನತೆ ಪ್ರಗತಿಪರ ಸಾಮಾಜಿಕ ಧೋರಣೆಗಳಿಂದ ಚ್ಯುತವಾಗುವುದನ್ನು ಅವರು ಎಂದಿಗೂ ಸಹಿಸಿದ್ದಿಲ್ಲ. ಈ ನಿಟ್ಟಿನಿಂದ ಕೇಂದ್ರ ಸಂಸತ್ತಿನಲ್ಲಿ ಯಾರನ್ನೂ ಗಣ್ಯ ಮಾಡದೆ ಕಾದಿದ ನಿಷ್ಠೆಯ ಕಾವಲುಗಾರ ಇನ್ನಿಲ್ಲ. ...ಅವರು ಭಾರತದ ಈ ಶತಮಾನದ ಒಬ್ಬ ಮಹಾಪುರುಷನೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು."

ವೆಂಕಟರಾಜರ ಸಂಪಾದಕೀಯಗಳು ಅವರ ಸಾಹಿತ್ಯ ವಾಙ್ಮಯದಲ್ಲಿ ವಿಶೇಷ ಸ್ಥಾನ ಪಡೆಯುತ್ತವೆ. ಅವರ ರಾಜಕೀಯ ಚಿಂತನೆಗಳು ಮತ್ತು ರಾಷ್ಟ್ರೀಯ ಚಿಂತನೆಗಳು ಅವರ ಸಂಪಾದಕೀಯಗಳಲ್ಲಿ ಸಿಗುತ್ತವೆ. ಅವು ನಮ್ಮ ರಾಜ್ಯ, ದೇಶ ಮತ್ತು ಜಗತ್ತಿನ

ಆಗುಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸಿದ ಮತ್ತು ವಿಶ್ಲೇಷಿಸಿದ ಮಹತ್ವದ ಬರಹಗಳಾಗಿವೆ; ಮೇಲಾಗಿ ಅವುಗಳು ನಿಷ್ಪಕ್ಷಪಾತವಾಗಿವೆ. ಆದುದರಿಂದ ಅವುಗಳು ಆ ಕಾಲದ ಅಮೂಲ್ಯ ಸಮಕಾಲೀನ – ಇತಿಹಾಸ ಬರಹಗಳಾಗಿವೆ.

ವೀರಭೂಮಿಯ ಸಾಧನೆ

ವೀರಭೂಮಿ ಒಂದು ಸದಭಿರುಚಿಯ ನಿರ್ಭೀತ ಪತ್ರಿಕೆಯಾಗಿತ್ತು. ಸಂಪಾದಕ ವೆಂಕಟರಾಜರು ಯಾವ ಪಕ್ಷ ಅಥವಾ ಜಾತಿಯ ಹಂಗಿನಲ್ಲೂ ಇಲ್ಲದೆ ಸ್ವತಂತ್ರ ಮನೋವೃತ್ತಿಯವರಾದುದರಿಂದ ಪ್ರಾಮಾಣಿಕವಾಗಿ ತಮ್ಮ ವಿಚಾರಗಳನ್ನು ಮಂಡಿಸುತ್ತಿದ್ದರು. ಅವರ ನಿಷ್ಠೆ ಜನರಿಗೆ ಮತ್ತು ಸಮಾಜಕ್ಕೆ ಇತ್ತೇ ಹೊರತು ಯಾವುದೇ ಪಕ್ಷಕ್ಕೆ ಅಥವಾ ಸಂಸ್ಥೆಗೆ ಇರಲಿಲ್ಲ. ಆದುದರಿಂದ ಅವರು ರಾಜಕೀಯ ನಾಯಕರಾಗಲೀ, ದೇಶಗಳಾಗಲೀ, ಮಠಾಧಿಪತಿಗಳಾಗಲೀ ಒಳ್ಳೆಯ ಕೆಲಸ ಮಾಡಿದಾಗ ಬೆಂಬಲಿಸಿ, ಅನಗತ್ಯವಾದುದನ್ನು ಮಾಡಿದಾಗ ಖಂಡಿಸುತ್ತಿದ್ದರು. ನೆಹರೂ ಎಷ್ಟು ದೊಡ್ಡ ವ್ಯಕ್ತಿಯೋ ಲೋಹಿಯಾ ಕೂಡಾ ಅಷ್ಟೇ ದೊಡ್ಡ ವ್ಯಕ್ತಿ ಎಂದು ಹೇಳಲು ಅವರಿಗೆ ಸಾಧ್ಯವಾದದ್ದು ಈ ದೃಷ್ಟಿಯಿಂದ. ಹಾಗೆಯೇ ನೆಹರೂ ಅವರನ್ನು ಎಲ್ಲರೂ ಪೂಜಿಸುತ್ತಿದ್ದಾಗ ಅವರ ವ್ಯಕ್ತಿತ್ವ ಮತ್ತು ಚಿಂತನೆಯ ದೋಷಗಳನ್ನು ತೋರಿಸಿ, ಅವರು ಸತ್ತು ಒಂದು ವರ್ಷವಾಗಿದ್ದಾಗ ಅಂಥ ವರ್ಚಸ್ವೀ ನಾಯಕನ ಅಗತ್ಯ ನಮಗೆ ಇದೆ ಎಂದು ಹೇಳಬಲ್ಲ ಮುಕ್ತ ಮನಸ್ಸು ವೆಂಕಟರಾಜರದು.

'ವೀರಭೂಮಿ' ಒಂದು ತನ್ನ ಓದುಗರಿಗೆ ಶಿಕ್ಷಣ ನೀಡಲು, ಅಮೂಲ್ಯ ಮಾಹಿತಿಗಳನ್ನು ಸಂಗ್ರಹಿಸಿ ನೀಡಲು ಪ್ರಯತ್ನಿಸಿದೆ. ಕತೆ, ಕವನ, ಲಘು ಬರಹಗಳಿಗೆ ಅವರು ಕೊಟ್ಟ ಪ್ರಾಧಾನ್ಯ ಕಡಿಮೆಯೆಂದೇ ಹೇಳಬಹುದು. ಸಾಹಿತ್ಯಕ್ಕೆ ಜನಮಾನಸದಲ್ಲಿ ಪ್ರಮುಖ ಸ್ಥಾನ ಇದ್ದ ಆ ಸನ್ನಿವೇಶದಲ್ಲಿ ಸಾಹಿತ್ಯೇತರ ವಿಷಯಗಳಿಗೆ [ಈಗಿನ ಪತ್ರಿಕೆಗಳಂತೆ] ಪ್ರಾಮುಖ್ಯ ಕೊಟ್ಟ ವೆಂಕಟರಾಜರ ಬೌದ್ಧಿಕ ಪ್ರಬುದ್ಧತೆ ಮೇಲ್ಮಟ್ಟದ್ದು ಎನ್ನುವುದರಲ್ಲಿ ಸಂಶಯವಿಲ್ಲ.

ಈ ಪತ್ರಿಕೆ ತನ್ನ ಪ್ರಕಟಣೆ ನಿಲ್ಲಿಸಿ ಆ ಆಗಸ್ಟ್ 15ಕ್ಕೆ ಐವತ್ತು ವರ್ಷಗಳಾದವು. ಆದರೆ ಇಂದಿಗೂ ಅದರ ಸಂಚಿಕೆಗಳನ್ನು ಓದುವಾಗ ಇವತ್ತಿನ ಪತ್ರಿಕೆಗಳಿಗಿಂತ ಹೆಚ್ಚು ಸಮತೋಲನದಿಂದ ತನ್ನ ಕಾಲಕ್ಕೆ, ಇಂದಿಗೂ ಪ್ರಸ್ತುತವಾಗಿರುವಂತೆ, ಸ್ಪಂದಿಸಿದ್ದು ವಿಶೇಷವಾಗಿ ಕಾಣಿಸುತ್ತದೆ.

✠✠✠

ಆಳ ಬಾವಿಯೊಳೆಸೆದ
ಖಾಲಿ ಕೊಡವೊಂದು
ಆಳಕಿಳಿಯುತಿದೆ
ತುಂಬಿಕೊಳುತ

ಸೆರೆಂಡಿಪಿಟಿ :
ಸಂಜೀವಿನಿ ಶೋಧಕರ ಸೀಮೋಲ್ಲಂಘನದ ಕಥೆಗಳು

(ಡಾ. ಕಿರಣ್ ಸೂರ್ಯ ಅವರ 'ಸೆರೆಂಡಿಪಿಟಿ' ಕೃತಿಯ ಬಗ್ಗೆ)

ಡಾ. ಸುದರ್ಶನ ರಾವ್

shgrao71@gmail.com

ಇಂಗ್ಲೀಷಿನಲ್ಲಿ pushing the boundaries ಅಥವಾ out of the box thinking ಎಂಬ ನುಡಿಗಟ್ಟಿದೆ. ಇರುವುದನ್ನು ಮೀರಿದ ಸಾಧ್ಯತೆಗಳ ಶೋಧನೆಗೆ ಸೀಮೋಲ್ಲಂಘನ ಎನ್ನುವುದು ಭಾರತೀಯ ನುಡಿಗಟ್ಟು. ಮಾಡಿದ್ದನ್ನೇ ಮಾಡಿದರೆ ಆಗಿದ್ದೆ ಆಗುತ್ತದೆ. ಹಾಗಾಗಿ ಪ್ರಸ್ತುತ ಮಿತಿಗಳನ್ನು ಮೀರಿ ಸಮಸ್ಯೆಗೆ ಪರಿಹಾರ ಹುಡುಕಬೇಕು ಎಂಬುದು ತಾತ್ಪರ್ಯ. ಅದಕ್ಕೆ ಹನುಮ ಸಂಜೀವಿನಿ ಮೂಲಿಕೆಗೆ ಬೆಟ್ಟವನ್ನೂ ಹೊತ್ತುತಂದ, ಸೀತಾನ್ವೇಷಣೆಗೆ ಸಮುದ್ರೋಲ್ಲಂಘನವನ್ನೂ ಮಾಡಿದ, ಸಾಧ್ಯತೆಗಳನ್ನು ವಿಸ್ತರಿಸಿ ಸಂಜೀವನೂ ಆದ!

(ತಪ್ಪುಗ್ರಹಿಕೆ ತಂದ ಸಫಲತೆ–ಎಂಬ ಕಥಾನಕದಲ್ಲಿನ ಮೊದಲ ವಾಕ್ಯವೇ ನನ್ನ ಮಾತುಗಳನ್ನು ಉದ್ಧರಿಸುತ್ತದೆ!)

ಪ್ರಸ್ತುತ ಕೊರೋನಾದ ಕ್ರೂರಮುಷ್ಟಿಯಲ್ಲಿ ಸಿಲುಕಿರುವ ಜಗತ್ತು, ವೈದ್ಯಕೀಯ, ಸಾಮಾಜಿಕ, ಆರ್ಥಿಕ, ಕೌಟುಂಬಿಕ, ಶೈಕ್ಷಣಿಕ ಎಂಬಂತಹ ಎಲ್ಲಾ ವಲಯಗಳಲ್ಲಿ ಸವಾಲುಗಳನ್ನು ಎದುರಿಸಲು ತನ್ನ ಈವರೆಗಿನ ನಂಬಿಕೆ ಆಚರಣೆಗಳನ್ನು, ಜೀವನಶೈಲಿ–ಉದ್ಯೋಗದ ರೀತಿಗಳನ್ನು ಅಮೂಲಾಗ್ರ ಮರುಚಿಂತನೆಗೆ ಒಡ್ಡಿಕೊಳ್ಳಬೇಕಾದ ಅನಿವಾರ್ಯತೆಗೆ ಸಿಲುಕಿದೆ. ಬಹುತೇಕ ಒಂದು ವರ್ಷದ ಅವಧಿಯಲ್ಲಿ ಪ್ರಪಂಚದಾದ್ಯಂತ ನೂರಾರು ಲಕ್ಷ ಜನಸೋಂಕಿಗೆ ತುತ್ತಾಗಿ, ಬಹಳಷ್ಟು ಮರಣಗಳು ಸಂಭವಿಸಿದ್ದರೂ ಇದಕ್ಕೊಂದು ಪರಿಹಾರ ಕಂಡುಹಿಡಿಯಲು ಸಾಧ್ಯವಾಗುತ್ತಿಲ್ಲ. ಮಾನವನ ವಿಕಾಸದ ಹಾದಿಯಲ್ಲಿ, ಅತ್ಯಾಧುನಿಕ ವಿಜ್ಞಾನ, ತಂತ್ರಜ್ಞಾನ, ಪ್ರಯೋಗಶಾಲೆ, ಸೌಲಭ್ಯಗಳು ಸಿಕ್ಕಿದರೂ, ಪ್ರಪಂಚಾದ್ಯಂತ ದೇಶಗಳು ಸಹಭಾಗಿತ್ವದಲ್ಲಿ–ಸಹಯೋಗಗಳಿಂದ ಪ್ರಯತ್ನಿಸಿದರೂ ಅದಕ್ಕೊಂದು ರಾಮಬಾಣದಂತಹ ಔಷಧಿಯಾಗಲೀ, ಲಸಿಕೆಯಾಗಲೀ ಅಭಿವೃದ್ಧಿಪಡಿಸಲು ಸಾಧ್ಯವಾಗಿಲ್ಲ. ಖಂಡಾಂತರ ಸೋಂಕೊಂದು ಆಧುನಿಕ ಮಾನವನನ್ನು ಹೀಗೆ ಅಲ್ಲಾಡಿಸಬಹುದಾದರೆ, ಹೆಚ್ಚೇನಲ್ಲ ನೂರಿನ್ನೂರು ವರ್ಷಗಳ ಕೆಳಗೆ ಸಾಧನ ಸಲಕರಣೆಗಳು, ಸಾರಿಗೆ ಸಂಪರ್ಕಗಳು ಇಲ್ಲದ ಕಾಲಘಟ್ಟದಲ್ಲಿ, ಪ್ರತಿವರ್ಷವೂ ಇಂತಹದ್ದೊಂದು ಯಾವುದೋ ಖಾಯಿಲೆ ಪ್ರಪಂಚದ ಯಾವುದಾದರೂ ಭಾಗದಲ್ಲಿ ಬಲಿಯನ್ನು ತೆಗೆಯುತ್ತಲೇ ಇರುತ್ತಿತ್ತು. ಕಾಯಿಲೆಯ ಮೂಲವೇ ಗೊತ್ತಿರದ ದಿನಗಳಲ್ಲಿ ಅದನ್ನೂ, ಅದರ ಜತೆಗೆ ಪರಿಹಾರವನ್ನೂ ಕಂಡುಹಿಡಿಯಲು ದುಡಿದ ಜೀವಗಳ ಕಥೆ ಇಲ್ಲಿದೆ. ತಮ್ಮ ಜೀವನವನ್ನು ಒತ್ತೆ ಇಟ್ಟು, ತಮ್ಮ ಮೋಜುಮಸ್ತಿಗಳನ್ನು ಬದಿಗಿಟ್ಟು ಮಾನವಕುಲದ ಒಳಿತಿಗೆ ದುಡಿದ ಅದೆಷ್ಟೋ ಜನ ಸಾಧಕರ ಯಶಸ್ಸಿನ ಹಿಂದಿನ ಪರಿಶ್ರಮದ ಕಥೆಗಳ ಗುಚ್ಚವೇ ಈಸೆರೆಂಡಿಪಿಟಿ.

ಸೆರೆಂಡಿಪಿಟಿ ಎಂಬ ಪದದ ಮೂಲವನ್ನು ಉಲ್ಲೇಖಿಸುತ್ತಾ ಲೇಖಕರು ಶ್ರೀಲಂಕಾದ ರಾಜಕುಮಾರತ್ರಯರ ಕಥೆಯನ್ನು ಹೇಳಿದ್ದಾರೆ. ಆದದ್ದೆಲ್ಲಾ ಒಳಿತೇ ಆಯಿತು ಎಂಬುದಿದರ ಭಾವ!! ಒಳಿತಿಗಾಗಿಯೇ ಜೀವವನ್ನು ತೇಯುವಾಗ ಅದರ ಫಲಿತಾಂಶವೂ ಒಳಿತಿನಲ್ಲಿಯೇ ಪರ್ಯಾವಸಾನವಾಗಬೇಕಾದ್ದು ನ್ಯಾಯ. ಇಂತಹ ಪರ್ಯಾವಸಾನಗಳು ಕೆಲವೊಮ್ಮೆ ಉದ್ದೇಶಕ್ಕೆ ತಕ್ಕಂಥ (ಕಾಲರಾ ರೋಗ), ಕೆಲವೊಮ್ಮೆ ಏನೋ ಮಾಡಲು ಹೋಗಿ ಬೇರೆ ಯಾವುದಕ್ಕೋ ಸಾಫಲ್ಯ ಪಡೆಯುವಂತೆ (ಕಣಗಿಲೆ ಸಸ್ಯದ ಅನುಗ್ರಹ), ಕೆಲವೊಮ್ಮೆ ಆಕಸ್ಮಿಕವಾಗಿ ಬಯಸದೆ ಬಂದ ಭಾಗ್ಯದಂತೆ (ಪೆನಿಸಿಲಿನ್ ಆವಿಷ್ಕಾರ) ಸಾಧಕರಿಗೆ ಸಫಲತೆಗಳು ಕೈಗೂಡಿವೆ. ಅಲ್ಲೆಲ್ಲವೂ ನಿರಂತರವಾಗಿ ಹರಿದಿರುವುದು ಕುತೂಹಲದ ಝರಿ, ಕೆಲಸ ಮಾಡಿರುವುದು ಕ್ಷಮತೆ–ಬದ್ಧತೆಗಳು ಮೇಳೈಸಿದ ಪರಿ. ಆ ಕಥೆಗಳನ್ನು ಲೇಖಕರು ಬಹಳ ಅಪ್ಯಾಯತೆಯಿಂದ ಕಟ್ಟಿಕೊಟ್ಟಿದ್ದಾರೆ.

ಪ್ರತಿಯೊಂದು ಅನ್ವೇಷಣೆಯ ಕುರಿತಾದ ಚರಿತ್ರೆಗೆ ಒಂದು ಕುತೂಹಲ ಮೂಡಿಸುವ ನವೀನ ಮಾದರಿಯ ಶೀರ್ಷಿಕೆ, ಜತೆಗೊಂದು ದೃಷ್ಟಾಂತ ಮತ್ತೆ ಅದನ್ನು ಉದ್ಧರಿಸಿ ಬೆಳೆಸಿದ ಕಥೆ ಕೆಲವೊಮ್ಮೆ ನೇರವಾಗಿ, ಕೆಲವೊಮ್ಮೆ ಇತರ ಘಟನೆಗಳೊಂದಿಕೆ ಕೂಡಿ ಕೊಳ್ಳುತ್ತಾ ಬೆಳೆಯುತ್ತದೆ. ಪ್ರತಿಯೊಂದು ಕಥೆಗೂ ಸೆರೆಂಡಿಪಿಟಿಯ ಕಿರಾತಾರ್ಜುನೀಯ ಸ್ಪರ್ಶವಿದೆ. ರುದ್ರನೊಂದಿಗೆ ಹೋರಾಡಿದ ಅರ್ಜುನ ಪಡೆದ ಪಾಶುಪತಾಸ್ತ್ರಗಳಿವೆ!!

ಶೀರ್ಷಿಕೆಗಳಲ್ಲಿ ಅಡಗಿರುವ ಮೋಜಿನ ಉದಾಹರಣೆಗೆ ಕಿಡಿಯೋ–ಖೀರೋ ಎಂಬ ಶೀರ್ಷಿಕೆ ತೆಗೆದುಕೊಳ್ಳಬಹುದು! ನಮ್ಮ ನರವ್ಯೂಹದಲ್ಲಿ ಸಂದೇಶಗಳು ಓಡಾಡುವ ಬಗೆಯನ್ನು, ಅದರ ಅರಿವಿನಿಂದಾದ ಆವಿಷ್ಕಾರ ಹೇಗೆ ಇಂದಿನ ಆಧುನಿಕ ಅರಿವಳಿಕೆ ಶಾಸ್ತ್ರದಿಂದ ಮೊದಲಾಗಿ ಗಂಭೀರ ಮಾನಸಿಕ ಖಾಯಿಲೆಗಳ ಚಿಕಿತ್ಸೆಗೆ ದಾರಿ ತೆರೆಯಿತು ಎಂಬುದರ ಸವಿಸ್ತಾರ ವಿವರಣೆ ಅಲ್ಲಿದೆ. ದಕ್ಷಿಣ ಅಮೆರಿಕಾದ ಮೂಲನಿವಾಸಿಗಳ ಬುದ್ಧಿವಂತಿಕೆಯೂ ಅಲ್ಲಿ ಬಂದು ಹೋಗುತ್ತದೆ. Apocalypse ಎಂಬ ಚಲನಚಿತ್ರದಲ್ಲಿ ಆ ಕೊಳವೆಯ ಮೂಲಕ ಬಾಣಗಳ ಪ್ರಯೋಗದ ನೇರದರ್ಶನ ಮಾಡಿಕೊಳ್ಳಬಹುದು.

ನೌಕಾಯಾನದ ನರಕವನ್ನು ನಿಗ್ರಹಿಸಿದನಿಂಬೆ ಎಂಬ ನನ ಎಂಬ ಆದಿಪ್ರಾಸದ ಪದಗಳು ಬರುವಂತಹ ಬಹಳ ನಾಲಿಗೆಗೆ ನಿಲುಕುವ ಶೀರ್ಷಿಕೆಗಳಿಂದ ಮನಸ್ಸಿಗೆ ಇಳಿಯುವ ಪ್ರಪಂಚಕ್ಕೆ ಕರೆದೊಯ್ಯುತ್ತಾರೆ. ಸ್ಕರ್ವಿ ಎಂಬ ಖಾಯಿಲೆ ಬಡಪೆಟ್ಟಿಗೆ ಬಗ್ಗುವುದಲ್ಲ ಎಂದಾಗ ಅದನ್ನು ಬೆಂಬೆತ್ತಿ ಪರಿಹಾರೋಪಾಯಗಳನ್ನು ಸಾಧಿಸಲು ಪಟ್ಟ ಪರಿಶ್ರಮಗಳ ಸುದೀರ್ಘ ವಿವರಣೆ ಅಲ್ಲಿದೆ. ನಿಂಬೆಹಣ್ಣನ್ನು ಮಂತ್ರಿಸಿ ಕೈಲಿ ಹಿಡಿಯಲು, ಅಥವಾ ನಿಂಬೆಹಣ್ಣಿನಂಥ ಹುಡುಗಿ ಬಂತು ನೋಡು ಎಂದು ಹಾಡಲು ಬಳಸುವ ನಮ್ಮ ಕಾಲದ ಜನ ಆ ಖಾಯಿಲೆಯ ಪರಿಚಯವೇ ಇಲ್ಲದಂತೆ ಬಾಳಲು ಅವಕಾಶ ಮಾಡಿಕೊಟ್ಟ ಸುಸಂಬದ್ಧ ಪ್ರಯೋಗಗಳ ವಿವರಣೆ ಅಲ್ಲಿದೆ. ಆಧುನಿಕ ವಿಜ್ಞಾನದ ಪ್ರಯೋಗ–ಆವಿಷ್ಕಾರಗಳಿಗೆ ಇಂದು ಬಳಸುವ ಕಡ್ಡಾಯ ಮಾದರಿಯ ಪರೀಕ್ಷೆಗಳು ಅಂದಿನ ತರ್ಕಾಡ್ಡದ್ಧ ಮನಸ್ಸುಗಳ ಕಾಣಿಕೆಎಂಬುದನ್ನು ಇಲ್ಲಿ ಅರಿಯಬಹುದು. ಕಾಲರಾ ಕುರಿತ ಕಥೆಯಲ್ಲಿಯೂ ಜಾನ್ ಸ್ನೋ ಅವರ ಕುಶಾಗ್ರಮತಿಯ ಸಂಶೋಧನೆಗಳಲ್ಲಿಯೂ ಈ ವಿಚಾರವನ್ನು ತಿಳಿಯಬಹುದು.

ಮಲೇರಿಯಾದ ಸುತ್ತಮುತ್ತ ಹೆಣೆದ ಹಲವಾರು ಕಥೆಗಳಿವೆ. ಆಕಾಶಾತ್ಪತಿ ತಂತೋಯಂ ಯಥಾಗಚ್ಛತಿ ಸಾಗರಂ ಎಂಬಂತೆ ಎಲ್ಲಿಯೋ ರೋಗದ ಮೂಲ, ಯಾರಿಂದಲೋ ರೋಗವಾಹಕದ ಪತ್ತೆ, ವೈದ್ಯರೇ ಅಲ್ಲದ ಪಾದ್ರಿಗಳಿಂದ ಮಲೇರಿಯಾದ

ಔಷಧೀಯ ಅಧಿಕೃತ ಪರಿಚಯಹೀಗೆ! ಕೊನೆಗೊಮ್ಮೆ ಎಲ್ಲವೂ ಬಂದು ಜೀವಶೋಷಕ ಮಲೇರಿಯಾದ ಚಿಕಿತ್ಸೆಗೆ ಸೆರೆಂಡಿಪಿಟಿ ಸಾಗರವನ್ನು ಸೇರಿದ ಅನುಭವ ನಿಮ್ಮದಾಗುತ್ತದೆ.

ವಿಶ್ವದ ಮೂಲವನ್ನು ಭೇದಿಸಲು ಪ್ರಯತ್ನಿಸುವ ಮಾನವ ತನ್ನ ಭಾವದ ಮೂಲ ಹೃದಯದಲ್ಲಿದೆಯೇ? ಮೆದುಳಿನಲ್ಲಿದೆಯೇ ಇನ್ನೂ ತಿಳಿದಿಲ್ಲ. ಹೃದಯ ವೀಣೆ ಮಿಡಿಯೇ ತಾನೇ ಕಾರಣ ನೀನೆ ಓ ಜಾಣೆ ಎಂದು ಪ್ರೇಮಿಗಳು ಹಾಡು ಹಾಡಿಕೊಂಡರೆ, ವಿಜ್ಞಾನಿಯೊಬ್ಬರು ಆ ಮಿಡಿತದ ಮೂಲವನ್ನು ಕಂಡುಹಿಡಿದು, ಅದನ್ನು ದಾಖಲಿಸಬಲ್ಲ ಯಂತ್ರವನ್ನು ಅಭಿವೃದ್ಧಿಗೊಳಿಸಿ, ಮಿಡಿತದ ಏರುಪೇರುಗಳನ್ನು ಮುದ್ರಿಸಿಯೂ ಕೊಟ್ಟರು– ECG ರೂಪದಲ್ಲಿ! ತಮಗೆ ಬಂದ ನೊಬೆಲ್ ಪಾರಿತೋಷಕವನ್ನು ಎಂದೋ ಕೆಲಸ ಬಿಟ್ಟುಹೋಗಿದ್ದ ತಮ್ಮ ಸಹಾಯಕನ ಬಡ ತಂಗಿಯನ್ನು ಹುಡುಕಿ, ಹಣಕೊಟ್ಟು ಹೃದಯವಂತಿಕೆಯನ್ನು ಮೆರೆದ ಐಂಟೋಫೆನ್ ಅವರ ಕಥೆಯಿದೆ. ಈ ಮಹಾನುಭಾವನ ಹಾದಿಯಲ್ಲಿ ಮುಂದೆ ಆಲ್ಬರ್ಟ್ಸ್ ಕೇನ್ ಅವರು ಅಭಿವೃದ್ಧಿಗಿಳಿಸಿದ pacemaker ಬೆಳೆದು ಬಂದ ಚರಿತ್ರೆಯಿದೆ, ಹೃದಯಾಘಾತವನ್ನು ತಡೆಯುವ ಔಷಧಿಗಳ ಪರಿಚಯವಿದೆ.

ಅರಿಷಡ್ವರ್ಗವಿಭೂಷಿತರಾದ ದೊಡ್ಡ ಮನುಷ್ಯರಿಂದ ಮೊದಲಾಗಿ ಜಗವೆಲ್ಲ ನಗುತಿರಲಿ ಜಗದಳುವು ಎನಗಿರಲಿ ಎಂಬ ಕರ್ಮಯೋಗಿ ಭಾರತೀಯರಾದ ಎಲ್ಲಪ್ಪರಗದ ಸುಬ್ಬರಾವ್ ಅವರ ವಿರೋಚಕ ಸಾಧನೆಗಳ ಸರಮಾಲೆಯಿದೆ. ಮನುಕುಲವು ಅವರಿಂದ ಪಡೆದುಕೊಳ್ಳಲು ಯೋಗ್ಯವಾಗದೆ ಹೋದ ನಮ್ಮ ಅಂತಃಸಾಕ್ಷಿಗೆ ಸವಾಲಾಗುವಂಥ ಚಿತ್ರಣವಿದೆ. ನನಗೆ ಈ ಪುಸ್ತಕದಲ್ಲಿ ಬಹಳ ಮನಸ್ಸಿಗೆ ತಟ್ಟಿದ ಕಥೆಯಿದು.

ಹೇಳುತ್ತಾ ಹೋದರೆ ಈ ಪರಿಚಯ ಲೇಖನ–ಅಭಿಪ್ರಾಯವೇ ಒಂದು ಕಿರುಹೊತ್ತಿಗೆಯಾದೀತು. ಪದಗಳು ತುಂಬಿದ ಪುಸ್ತಕವಲ್ಲ, ನಿಧಿಗಳೇ ಅಡಗಿದೆ ಇದರಲ್ಲಿ.

ಸ್ವತಃ ವೈದ್ಯಕೀಯ ಓದಿದ ನಾನು ಹಲವು ವಿಜ್ಞಾನಿಗಳ ಬಗ್ಗೆ ತೆಳುವಾಗಿ ತಿಳಿದಿದ್ದೇನೆಯೇ ಹೊರತು ಆಳವಾಗಿ ತಿಳಿದಿರಲಿಲ್ಲ. ಈ ಪುಸ್ತಕ ಆ ಕೊರತೆಯನ್ನು ನೀಗಿಸಿಕೊಳ್ಳಲು ಅವಕಾಶ.

ಪ್ರಾಯಶಃ ಮನುಕುಲ ತನ್ನ ಇತಿಹಾಸದಲ್ಲೇ ಅತ್ಯಂತ ಕಡಿಮೆ ಕ್ಷೋಭೆಯಿಂದ ಬದುಕಿದ ಅರ್ಧ ಶತಮಾನವಿದು. ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ಸಾಫಲ್ಯ, ಯುದ್ಧರಾಹಿತ್ಯ, ಕೊರೋನಾ ಹೊರತು ಜಗತ್ತನ್ನು ನಡುಗಿಸಿದ ಸಾಂಕ್ರಾಮಿಕ ರೋಗರಾಹಿತ್ಯ ಎಲ್ಲಾ ಅನುಕೂಲಗಳನ್ನು ಕಂಡುಂಡು ಬೆಳೆಯಲು ಅದೆಷ್ಟು ಜನರ ಯೋಗದಾನ ಆಗಿ ಹೋಗಿದೆ. ಅದರ ಸ್ವಲ್ಪಭಾಗದ ಪರಿಚಯ ಸಮರ್ಥವಾಗಿ ಇಲ್ಲಿ ಆಗಿದೆ.

ನಾನು ಹೈಸ್ಕೂಲಿನಲ್ಲಿದ್ದಾಗ ಇಜ್ಞಾಜ್ಞಿಲಿಪ್ಸಮೇಲ್ವಯ್ಸ್ ಎಂಬ ವೈದ್ಯವಿಜ್ಞಾನಿಯೊಬ್ಬ ಬಾಣಂತಿ ಜ್ವರಕ್ಕೆ ಕಾರಣವನ್ನೂ, ಅದನ್ನು ತಡೆಯಲು ಸುಲಭ ವಿಧಾನವನ್ನೂ ಕಂಡುಹಿಡಿದು ತನ್ನ ಪ್ರಪಂಚದಲ್ಲಿ ಸಾರಿದರೆ, ಅವನನ್ನು ದೋಷಾರೋಪಣೆ–ದೂಷಣೆಗಳನ್ನು ಮಾಡಿ ಆತ ಕಡೆಗೆ ಹುಚ್ಚನಾಗಿ ಪ್ರಾಣಬಿಡಬೇಕಾದ ಕಥೆಯನ್ನು ಓದಿ ವ್ಯಥೆಗೊಂಡಿದ್ದೆ. ಮುಂದೆ ವೈದ್ಯಕೀಯದ ಮೂರನೇ ವರ್ಷದಲ್ಲಿ ರಘುಪತಿ ಎಂಬ ಅಧ್ಯಾಪಕರು ಅದೇ ಮಾದರಿಯ ಇನ್ನೊಬ್ಬ ವಿಜ್ಞಾನಿಯ ಕಥೆಯನ್ನು ಹೇಳುತ್ತಾ See, we take everything for granted. The knowledge we have today is the life time work of some genius out there. While we struggle to even understand the concepts that are so elegant , those people envisioned and developed them. The least we could do is to

remember them with gratitude ಎಂಬುದಾಗಿ ಹೇಳಿದ್ದು ನನ್ನ ಮನಸಿನಲ್ಲಿದೆ.

ಇಂದು ಬೆಳಿಗ್ಗೆ, 40 ವರ್ಷದ ಒಬ್ಬಾಕೆ, ಹೃದಯ ಸ್ನಾಯುವಿನ ಅತಿ ಹಿಗ್ಗುವಿಕೆಯಿಂದ ಸ್ಥಂಭನಕ್ಕೊಳಗಾಗಿ pacemaker- defibrillator ಅಳವಡಿಸಿಕೊಂಡವಳಾಗಿ ಮರುಹುಟ್ಟು ಪಡೆದು, ಥೈರಾಯ್ಡ್ ನಿರ್ನಾಳ ಗ್ರಂಥಿಯ ಶಸ್ತ್ರಚಿಕಿತ್ಸೆಗೆ ಬಂದಿದ್ದಳು. ನೂರು ವರ್ಷಗಳ ಕೆಳಗೆ ಆಕೆ ಬದುಕುವ ಸಾಧ್ಯತೆಯೇ ಇರಲಿಲ್ಲ; ಮಕ್ಕಳು ತಬ್ಬಲಿಗಳಾಗಬೇಕಿತ್ತು. ಈಗಲೂ ಅದು ಕೇವಲ 20–25% ಮಾತ್ರ ಕೆಲಸ ಮಾಡುತ್ತಿತ್ತು. ಹೃದಯದ ಸ್ಕ್ಯಾನಿಂಗ್ ಮಾಡುತ್ತಾ ಸಾವಧಾನವಾಗಿ ಅರಿವಳಿಕೆಯನ್ನು ಕೊಟ್ಟು, ಹಲವಾರು ಔಷಧಗಳ ಮೂಲಕ ಅದರ ಕೆಲಸವನ್ನು ನಿಯಂತ್ರಣದಲ್ಲಿಟ್ಟು surgery ಮುಗಿಸಿ ಎಬ್ಬಿಸುವ ವೇಳೆಗೆ ನನಗೆ ಜೀವ ಕೈಯಲ್ಲಿ!! ಇದೊಂದು ಪ್ರಕ್ರಿಯೆಯಲ್ಲಿ ನಾವು ನೆನೆಯಬೇಕಾದವರೆಷ್ಟು ಜನ ಸಂಜೀವರು?

ಆ ಕೃತಜ್ಞತಾಪೂರ್ವಕವಾದ ಕೆಲಸವನ್ನು ಡಾ.ಕಿರಣ್ ಸೂರ್ಯ ಮಾಡಿದ್ದಾರೆ. ಇದು ಹೃದಯಾಂತರಾಳದಲ್ಲಿ ಒರತೆ ಮೂಡದೇ ಆಗುವ ಕೆಲಸವಲ್ಲ. ಅಷ್ಟು ಆಸ್ಥೆ–ಶ್ರದ್ಧೆ–ಕ್ಷಮತೆ–ಬದ್ಧತೆ–ಪ್ರೀತಿ– ಕೃತಜ್ಞತಾಭಾವಗಳಿಲ್ಲದೆ ಮೂಡುವ ಕೃತಿಯಲ್ಲ. ಅವರು ಇದಕ್ಕೊಂದು ಪ್ರತಿಕ್ರಿಯೆ ಬರೆಯಲು ಬಹಳ ಹಿಂದೆಯೇ ಹೇಳಿದ್ದರೂ ಸಹಾ ಬರೆಯುವ ಧೈರ್ಯ ನನಗಿರಲಿಲ್ಲ. ಇದಕ್ಕೆ ಯಾವ ಶೀರ್ಷಿಕೆ ಕೊಡುವುದೆಂಬುದೂ ಹೊಳೆದಿರಲಿಲ್ಲ. ಮತ್ತೆ ಈಗ ಮುದ್ರಣಕ್ಕೆ ಹೋಗುತ್ತಿದೆ ಎಂದರೆ ತಡಮಾಡುವುದು ಬೇಡ ಎಂದು ನನ್ನ ಯೋಗ್ಯತೆಯ ಮಿತಿಯಲ್ಲಿ ಒಂದಷ್ಟು ಬರೆದಿದ್ದೇನೆ. ಕನ್ನಡವೇ ಇರಲಿ, ಇಂಗ್ಲೀಷೇ ಇರಲಿ ಇದೊಂದು ಮೈಲಿಗಲ್ಲು ಆಗಬಹುದಾದ ಘನತೆಯ ಪುಸ್ತಕ.

✠✠✠

ತಾತ್ತ್ವಿಕರು ಚಿಂತಕರು ದಾರ್ಶನಿಕರೆಲ್ಲಿಹರು?
ಸರಿಯುತಿದೆ ಎಲ್ಲವೂ ತಡೆದು ನಿಲಿಸಲು ಬನ್ನಿ
ಬದಲಾಗುತಿದೆ ನಿತ್ಯ ಹಳತಾಗುತಿದೆ ಸತ್ಯ
ಹೊಸತನಾದರು ನಿತ್ಯಗೊಳಿಸಬನ್ನಿ

ಪರಿಸರ ಪತ್ರಿಕೋದ್ಯಮದಲ್ಲಿ 'ಹಸಿರುವಾಸಿ' ನಿಯತಕಾಲಿಕದ ಹೊಸ ಪ್ರಯೋಗ

*ಡಾ. ಹಂಪೇಶ್ ಕೆ ಎಸ್[1] ಮತ್ತು ಡಾ. ಸತೀಶ್ ಕುಮಾರ್[2]

ನಾವು ಪರಿಸರದಲ್ಲಿ ಬದುಕುತ್ತೇವೆ. ಅದು ಮರಗಿಡ ಬೆಟ್ಟವನ್ನು ಹೊಂದಿರಬಹುದು ಅಥವಾ ಕಟ್ಟಡಗಳಿಂದ ಕೂಡಿದ ನಗರವಾಗಬಹುದು. ನಮ್ಮ ಸುತ್ತಲಿನ ಎಲ್ಲವೂ ಪರಿಸರ ಎಂದೇ ಕರೆಯಲ್ಪಡುತ್ತದೆ. ಪರಿಸರದ ಕುರಿತು ವೃತ್ತಿಪರವಾಗಿ ಬರೆಯುವುದೇ ಪರಿಸರ ಪತ್ರಿಕೋದ್ಯಮ.

ದೈನಂದಿನ ವಿದ್ಯಮಾನಗಳನ್ನು ಹೊತ್ತ ತಾಜಾ ಸುದ್ದಿಗಳು ಪತ್ರಿಕೆಯ ಬಹುಭಾಗವನ್ನು ಆಕ್ರಮಿಸಿಕೊಂಡಿರುವಾಗಲೇ ನುಡಿಚಿತ್ರ ಬರಹಗಳನ್ನು ಒಳಗೊಂಡ ಪುರವಣಿಗಳು ಹುಟ್ಟಿಕೊಂಡವು. ಇವು ಕಲೆ, ಸಂಸ್ಕೃತಿ, ಪರಿಸರ, ಸಾಹಿತ್ಯ, ವ್ಯಕ್ತಿ ಪರಿಚಯ, ನುಡಿಚಿತ್ರ, ಕೃತಿ ವಿಮರ್ಶೆ, ಪ್ರವಾಸಕಥನ, ಕ್ರೀಡೆ ಮುಂತಾದ ವಿಷಯಗಳನ್ನು ಒಳಗೊಂಡಿದ್ದವು. ಇವು ಜನರ ಗಮನಸೆಳೆದು ಪತ್ರಿಕೆಗಳ ಪ್ರಸರಣದ ಅಲ್ಪಪ್ರಮಾಣದ ಹೆಚ್ಚಳಕ್ಕೂ ಕಾರಣವಾದವು. ಈ ಪುರವಣಿಗಳ ಮೂಲಕ ಪರಿಸರ ಬರಹಗಳು ಮುನ್ನೆಲೆಗೆ ಬಂದವು.

ಪರಿಸರ ಪತ್ರಿಕೋದ್ಯಮ

ನಮ್ಮ ಸುತ್ತಮುತ್ತಲಿನ ಜೈವಿಕ ಹಾಗೂ ಅಜೈವಿಕ ಪರಿಸರದ ಒಟ್ಟು ನೋಟವನ್ನು ಅರ್ಥೈಸಿಕೊಳ್ಳುವಲ್ಲಿ ಇಂದು ಪತ್ರಿಕೋದ್ಯಮ ಅರ್ಥಪೂರ್ಣ ಕೊಡುಗೆಯನ್ನು ನೀಡುತ್ತಿದೆ. ಜೊತೆಯಲ್ಲಿ ನಮ್ಮೊಂದಿಗೆ ಸಂವಾದ ನಡೆಸುತ್ತದೆ. ಪರಿಸರದ ಬಗ್ಗೆ ಕಳಕಳಿಯನ್ನು ಮೂಡಿಸಿ, ಅದರ ಮೌಲ್ಯಗಳ ಮತ್ತು ಅಗತ್ಯತೆಗಳ ಹಾಗೂ ಜೀವ ಸಂಕುಲಗಳ ಪರಸ್ಪರ ಸಂಬಂಧಗಳನ್ನು ಮೂಡಿಸುವಲ್ಲಿ ಅದೂ ವಿಶೇಷವಾಗಿ ಯುವಕರಲ್ಲಿ ಆ ಕುರಿತು ಪ್ರಜ್ಞೆಯನ್ನು ಮೂಡಿಸುವಲ್ಲಿ ಪರಿಸರ ಪತ್ರಿಕೋದ್ಯಮ ತನ್ನದೇ ಆದ ಕೊಡುಗೆಯನ್ನು ನೀಡುತ್ತಿದೆ.

ಇತ್ತೀಚಿನ ದಿನಗಳಲ್ಲಿ ಪರಿಸರ ಅಂದರೆ ಕೇವಲ ಮರಗಿಡಗಳನ್ನು ನೆಡುವುದು, ಮಾಲಿನ್ಯದ ಬಗ್ಗೆ ಮಾತನಾಡುವುದು, ಸರಿಯಾದ ಅಂಕಿ ಅಂಶಗಳಿಲ್ಲದೆ ಸಂಪನ್ಮೂಲಗಳ ನಿರ್ವಹಣೆಯ ಬಗ್ಗೆ ಮಾತನಾಡುವುದು ಇಷ್ಟಕ್ಕೇ ಸೀಮಿತವಾಗಿರುವುದು ದುಃಖಕರವೇ ಸರಿ. ಇದಲ್ಲದೆ ಇಂದಿನ ಪರಿಸರ ಶಿಕ್ಷಣ ಅನ್ನುವುದು ಕೂಡಾ ಅನ್ಯ ಶಿಕ್ಷಣ ವಿಷಯಗಳಂತೆ ಕೇವಲ ಉದ್ಯೋಗಕ್ಕಾಗಿ ಪಡೆಯಬೇಕಾದ ಶಿಕ್ಷಣವೆಂದು ತಿಳಿದವರೇ ಹೆಚ್ಚು. ಇತ್ತೀಚಿನ ದಿನಗಳಲ್ಲಿ ಆ ಕುರಿತು ಮಾತನಾಡುವುದು ಒಂದು ರೀತಿಯಲ್ಲಿ ಹವ್ಯಾಸವೆಂದು ಪರಿಗಣಿಸಲಾಗುತ್ತಿದೆ. ಈ ನಿಟ್ಟಿನಲ್ಲಿ, ಪರಿಸರ ಪತ್ರಿಕೋದ್ಯಮ ಪರಿಸರವನ್ನು ಜ್ಞಾನಶಾಖೆಯಾಗಿ ಪರಿಗಣಿಸಿಕೊಂಡಿದೆ. ಅಲ್ಲಿ ಆಗುವ ಪ್ರಾಕೃತಿಕ ಏರುಪೇರುಗಳು, ಮಾನವನಿಂದಾಗಿ ಆಗುವ ಸಮಸ್ಯೆಗಳು, ಆ ಕುರಿತ ವೈಜ್ಞಾನಿಕ ಹಿನ್ನೆಲೆ ಹಾಗೂ ವಿವರಣೆ ಇತ್ಯಾದಿ ವಿಚಾರಗಳನ್ನು ಪರಿಸರ ಪತ್ರಿಕೋದ್ಯಮ ನಿಷ್ಠೆಯಿಂದ ಮಾಡುತ್ತಿದೆ. ಸಸ್ಯ ವೈವಿಧ್ಯತೆ, ಪ್ರಾಣಿ ವೈವಿಧ್ಯತೆ,

ಜೀವ ಕ್ರಿಯೆಗಳು, ಶಕ್ತಿ ಮೂಲಗಳು, ಪರಿಸರ ವ್ಯವಸ್ಥೆಗಳು, ಪರಿಸರದಲ್ಲಿ ಸಮತೋಲನ, ಕೃಷಿ ಮತ್ತು ಆಹಾರ, ಪರಿಸರ ಮಾಲಿನ್ಯ, ಪರಿಸರ ಸಂರಕ್ಷಣೆ ಇತ್ಯಾದಿ ಪರಿಸರದ ನಿರ್ದಿಷ್ಟ ಅಂಶಗಳ ಕುರಿತಾಗಿಯೇ ಪ್ರಕಟಗೊಳ್ಳುವ ಪತ್ರಿಕೆಗಳನ್ನು ನಾವಿಂದು ಕಾಣುತ್ತಿದ್ದೇವೆ. ಇವು ಪರಿಸರ ಪತ್ರಿಕೋದ್ಯಮದ ಸ್ಥಂಬಗಳು.

ಪರಿಸರಕ್ಕೆ ಸಂಬಂಧಿಸಿದ ಪ್ರಸ್ತುತ ಘಟನೆಗಳು, ಪ್ರವೃತ್ತಿಗಳು, ಸಮಸ್ಯೆಗಳಿಗೆ ಸಂಬಂಧಿಸಿದ ಮಾಹಿತಿಯ ಸಂಗ್ರಹ, ಪರಿಶೀಲನೆ, ಉತ್ಪಾದನೆ, ವಿತರಣೆ ಮತ್ತು ಪ್ರದರ್ಶನವೇ ಪರಿಸರ ಪತ್ರಿಕೋದ್ಯಮ. ಪರಿಸರ ಪತ್ರಕರ್ತರಿಗೆ ವೈಜ್ಞಾನಿಕ ಭಾಷೆ ಮತ್ತು ಅಭ್ಯಾಸದ ಬಗ್ಗೆ ತಿಳುವಳಿಕೆ ಇರಬೇಕು. ಐತಿಹಾಸಿಕ ಪರಿಸರದ ಘಟನೆಗಳ ಜ್ಞಾನ, ಪರಿಸರಕ್ಕೆ ಸಂಬಂಧಿಸಿದ ನೀತಿ ನಿರ್ಧಾರಗಳು, ಪರಿಸರೀಯ ಸಂಸ್ಥೆಗಳ ಕೆಲಸ, ಪ್ರಸ್ತುತ ಪರಿಸರದ ಸಾಮಾನ್ಯ ತಿಳುವಳಿಕೆಯನ್ನು ಪಡೆದುಕೊಂಡು ಸಾರ್ವಜನಿಕರಿಗೆ ಸುಲಭವಾಗಿ ತಿಳಿಸುವ ಕೌಶಲ್ಯವಿರಬೇಕು.

ಪರಿಸರ ಪತ್ರಿಕೋದ್ಯಮ ಕ್ಷೇತ್ರವು ಹಲವಾರು ವಿಧದ ವಿಷಯಗಳನ್ನು ಹೊಂದಿದೆ. ಇದು ವಿಜ್ಞಾನ ಹಾಗೂ ಕೃಷಿ ಬರಹಗಳನ್ನೂ ಒಳಗೊಂಡಿದೆ. 'ದಿ ರಿಪೋರ್ಟರ್ಸ್ ಎನ್ವಿರಾನ್ಮೆಂಟಲ್ ಹ್ಯಾಂಡ್‌ಬುಕ್' ಪ್ರಕಾರ ಪರಿಸರ ಪತ್ರಕರ್ತರು ನೀರಿನ ಸಮಸ್ಯೆಯನ್ನು ಗಂಭೀರ ಪರಿಸರ ಸಮಸ್ಯೆಯೆಂದು ಗ್ರಹಿಸುತ್ತಾರೆ. ನಂತರ ವಾಯುಮಾಲಿನ್ಯದ ಸಮಸ್ಯೆ ಮತ್ತು ತ್ಯಾಜ್ಯ ನಿರ್ವಹಣೆ ಸಮಸ್ಯೆಗಳ ಕುರಿತು ಕಾಳಜಿ ವಹಿಸುತ್ತಾರೆ. ಸಮೀಕ್ಷೆಯೊಂದರ ಪ್ರಕಾರ ಪರಿಸರ ಪತ್ರಕರ್ತರು ಸ್ಥಳೀಯ ಪರಿಸರ ಸಮಸ್ಯೆಗಳಿಗೆ ಜಾಗತಿಕ ಪರಿಸರ ಸಮಸ್ಯೆಗಳಿಗಿಂತ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಾರೆ. ಪರಿಸರ ಪತ್ರಿಕೋದ್ಯಮವು ಕೆಲವು ವಿಷಯಗಳಿಗೆ ಮಾತ್ರ ಸೀಮಿತವಾಗಿಲ್ಲ. ಪರಿಸರ ಮಾಲಿನ್ಯ, ಜೀವ ವೈವಿಧ್ಯತೆ, ರಾಸಾಯನಿಕಗೊಬ್ಬರ, ಆರೋಗ್ಯ, ತ್ಯಾಜ್ಯ ನಿರ್ವಹಣೆ, ವಿಷಕಾರಿ ತ್ಯಾಜ್ಯಗಳು, ಓಜೋನ್ ಪದರಕ್ಕಾಗುತ್ತಿರುವ ಸಮಸ್ಯೆಗಳು, ಮಾಲಿನ್ಯ ನಿಯಂತ್ರಣ ನೀರಿನ ಪೂರೈಕೆ, ಕೃಷಿ, ಹವಾಮಾನ ವೈಪರಿತ್ಯ, ಪ್ರಕೃತಿ ವಿಕೋಪಗಳು, ಪರಿಸರ ಶಿಕ್ಷಣ, ಪರಿಸರ ನೀತಿ ಹಾಗೂ ನೈತಿಕತೆ, ಸುಸ್ಥಿರ ಅಭಿವೃದ್ಧಿ, ವನ್ಯಜೀವಿ ಹಾಗೂ ಪರಸರಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಪರಿಸರ ಪತ್ರಿಕೋದ್ಯಮ ಒಳಗೊಂಡಿದೆ.

ಪರಿಸರ ಪತ್ರಿಕೋದ್ಯಮವು ಪರಿಸರದ ಸಮಸ್ಯೆಗಳ ಬಗ್ಗೆ ಸಾಮಾಜಿಕ ಚರ್ಚೆಗಳನ್ನು ಒಳಗೊಂಡಿದೆ. ಪರಿಸರ ಬರವಣಿಗೆ, ವಿಜ್ಞಾನ ಬರವಣಿಗೆ, ಕೃಷಿ ಬರವಣಿಗೆ ಇದರ ವ್ಯಾಪ್ತಿಯೊಳಗೆ ಬರುತ್ತದೆ. ಪರಿಸರ ಸಂವಹನದಲ್ಲಿ ಸುದೀರ್ಘವಾದ ಇತಿಹಾಸದೊಂದಿಗೆ ಪ್ರಕೃತಿ ಬರವಣಿಗೆಯಾಗಿದೆ. ವೈಜ್ಞಾನಿಕ ಅಧ್ಯಯನದ ವಿಷಯಗಳ ಬಗ್ಗೆ ನಿರ್ದಿಷ್ಟವಾಗಿ ಬರೆಯುವುದನ್ನು ವಿಜ್ಞಾನ ಬರವಣಿಗೆ ಎನ್ನುತ್ತಾರೆ. ಇದು ಪರಿಸರ ಪತ್ರಿಕೋದ್ಯಮದ ಭಾಗವಾಗಿದೆ. ನಿರ್ದಿಷ್ಟ ವಿಷಯದ ಕುರಿತು ಜನರಿಗೆ ಅರ್ಥವಾಗುವ ರೀತಿಯಲ್ಲಿ ಬರೆಯಲಾಗುತ್ತದೆ. ಸಾಮಾನ್ಯವಾಗಿ ಹಲವು ವಿಜ್ಞಾನ ಬರಹಗಳು ಪರಿಸರ ಪತ್ರಿಕೋದ್ಯಮದ ವ್ಯಾಪ್ತಿಯೊಳಗೆ ಬರುತ್ತವೆ.

ಕೃಷಿ ಬರಹಗಳು ಕೂಡಾ ಪರಿಸರ ಪತ್ರಿಕೋದ್ಯಮದ ಭಾಗವಾಗಿವೆ. ಇಂತಹ ಬರಹಗಳಲ್ಲಿ ಕೆಲವು ಬರಹಗಳು ರೈತರಿಗೆ ಹೊಸ ಚಿಂತನೆಗೆ ಅವಕಾಶ ಮಾಡಿಕೊಟ್ಟರೆ, ಇನ್ನೂ ಕೆಲವು ರೈತರ ದಾರಿ ತಪ್ಪಿಸುತ್ತವೆ. ಇತ್ತೀಚೆಗೆ ಸುಧಾರಣೆಗೊಂಡಿರುವ ಕೃಷಿ ಬರಹಗಳಿಂದಾಗಿ, ಅನೇಕ ರೈತರು ತಮ್ಮ ಅನುಭವ ಹಂಚಿಕೊಳ್ಳುವಾಗ ನೇರವಾಗಿ

ಮಾಧ್ಯಮಗಳನ್ನು ಶ್ಲಾಘಿಸುತ್ತಾರೆ. ಉದಾಹರಣೆಗೆ, ಸಾವಯವ ಕೃಷಿಕರಾಗಿರುವ ಮಾರುಗೊಂಡನಹಳ್ಳಿ ಸದಾಶಿವಯ್ಯ ಎಂಬುವವರು ಪ್ರತಿ ಕಾರ್ಯಕ್ರಮಗಳಲ್ಲೂ ಮಾಧ್ಯಮಗಳನ್ನು ಸ್ಮರಿಸುತ್ತಾರೆ. ತನ್ನ ಕೃಷಿ ಬದುಕಿನ ದಿಕ್ಕನ್ನೇ ಬದಲಾಯಿಸಿದ್ದು ಕೃಷಿ ಪುರವಣಿಗಳ ಲೇಖನಗಳು ಎನ್ನುತ್ತಾರೆ. ದೊಡ್ಡಿಂದುವಾಡಿಯ ಕೈಲಾಸಮೂರ್ತಿ ತಾನು ಕೃಷಿಕನಾಗುವುದಕ್ಕೆ ಸಹಜಕೃಷಿಯ ಪಿತಾಮಹ ಮಸನೋಬ ಫುಕುವೋಕಾನ 'ಒಂದು ಹುಲ್ಲಿನ ಕ್ರಾಂತಿ'ಪುಸ್ತಕವೇ ಕಾರಣ ಎಂದುಹೇಳುತ್ತಾರೆ.

ಪರಿಸರದ ಭಾಷಾಜ್ಞಾನ ಪಡೆಯಲು ಹಳ್ಳಿಗರು, ವನವಾಸಿಗರ ಸಂಗಡ ಬೆರೆಯಬೇಕು. ಸೋಲಿಗ, ಗೌಳಿ, ಕುಡುಬಿ, ಮಲೆಕುಡಿಯ, ಲಂಬಾಣಿ ಹೀಗೆ ಮುಂತಾದ ಪ್ರತಿ ಜನಾಂಗದ ಜನರು ಸುತ್ತಲಿನ ಪರಿಸರವನ್ನು ಸನಿಹದಿಂದ ಗಮನಿಸುತ್ತಿರುತ್ತಾರೆ. ವಿಜ್ಞಾನಕ್ಕೆ ಅರಿಯದ ಹಲವು ಸಂಗತಿಗಳು ಇವರಿಗೆ ತಿಳಿದಿರುತ್ತದೆ. ಜನಪದರು ಬಳಸುವ ಪದಗಳನ್ನು ಸರಿಯಾಗಿ ಬರೆದಿಡಬೇಕು.

ಸುತ್ತಮುತ್ತಲಿನ ಸಂಗತಿಗಳನ್ನು ಸೂಕ್ಷ್ಮವಾಗಿ ನೋಡಲು ಪ್ರಾರಂಭಿಸಿದರೆ ನಿಸರ್ಗವೇ ಒಂದು ದೊಡ್ಡ ವಿಶ್ವವಿದ್ಯಾಲಯವಾಗುತ್ತದೆ. ಬರಹಗಳಿಗೆ ಬೇಕಾಗುವ ವಿಷಯಗಳು ದೊರೆಯುತ್ತವೆ. ಸ್ಥಳೀಯ ಸಂಗತಿಗಳನ್ನು ಗುರುತಿಸಿ ಅಧ್ಯಯನಕ್ಕೆ ಬಳಸಿಕೊಂಡು ಯಾವ ರೀತಿಯಲ್ಲಿ ಆಸಕ್ತಿಯುತವಾಗಿ ಬರೆಯುತ್ತೇವೆಂಬುದು ಮುಖ್ಯವಾಗುತ್ತದೆ. ವಿಷಯಗಳನ್ನು ನೋಡುವ ರೀತಿಯನ್ನು ಬದಲಿಸಿ, ಹೊಸ ಹೊಸ ಆಯಾಮಗಳಲ್ಲಿ ಗಮನಿಸಬೇಕು. ಪ್ರಕೃತಿಯಲ್ಲೇ ವಾಸಿಸುವವರು ಹೇಗೆ ಸರಳವಾಗಿ ಬದುಕುತ್ತಾರೆ? ಅವರು ಪರಿಸರದ ಜೊತೆ ಸಹಬಾಳ್ವೆಯಿಂದ ಜೀವಿಸುವುದು ಹೇಗೆ ಎಂಬ ವಿಷಯಗಳ ಕುರಿತು ಆಸಕ್ತಿಯಿಂದ ತಿಳಿದುಕೊಳ್ಳಬೇಕು.

ಪರಿಸರ ಸಂಬಂಧಿ ಹೋರಾಟಗಳ ಸಂದರ್ಭದಲ್ಲಿ ಪರಿಸರವಾದಿಗಳ ಹೇಳಿಕೆಗಳು ಪತ್ರಿಕಾ ಕಛೇರಿಗೆ ಬರುತ್ತವೆ. ಆ ಸಮಯದಲ್ಲಿ ಮಾಧ್ಯಮಗಳು ಹೇಳಿಕೆಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿ ಪತ್ರಿಕೆಗಳಲ್ಲಿ ಪ್ರಕಟಿಸಿ ಜನರಿಗೆ ತಲುಪುವಂತೆ ಮಾಡುತ್ತವೆ. ತನ್ಮೂಲಕ ಓದುಗರಲ್ಲಿ ಪರಿಸರ ಪ್ರಜ್ಞೆ ಬಿತ್ತುತ್ತವೆ. ಹತ್ತು ಜನ ಸೇರಿ ಪರಿಸರ ಚಳುವಳಿಯೊಂದನ್ನು ನಡೆಸಿದರೆ, ನೂರಾರು ಜನ ಸೇರಿದ್ದರು ಎಂದು ಚಳುವಳಿಯ ವರದಿ ಬರೆಯುವಲ್ಲಿ ಮಾಧ್ಯಮಗಳು ಪರಿಸರ ಪರವಾಗಿ ಕೆಲಸ ಮಾಡುತ್ತವೆ. ಹೆಚ್ಚಿನ ಸಂದರ್ಭದಲ್ಲಿ ಹೋರಾಟದ ಭಾಗವಾಗಿ ಧ್ವನಿ ಎತ್ತುವ ಕೆಲಸವನ್ನು ಮಾಧ್ಯಮ ಮಾಡುತ್ತದೆ.

ಪರಿಸರದ ಅರಿವು ಬಿತ್ತುವುದು ಮಾಧ್ಯಮದ ಮುಖ್ಯ ಕಾಳಜಿಯಾಗಿರಬೆಕು. ಅಭಿವೃದ್ಧಿಯ ಹೆಸರಲ್ಲಿ ನಿಸರ್ಗದ ಮೇಲಾಗುತ್ತಿರುವ ದಬ್ಬಾಳಿಕೆಯನ್ನು ಬರಹಗಾರರು ಜನಸಾಮಾನ್ಯರಿಗೆ ತಿಳಿಸಬೇಕು. ಪ್ರಮುಖ ಪತ್ರಿಕೆಗಳ ಸಾಪ್ತಾಹಿಕ ಪುರವಣಿ, ವಾರಪತ್ರಿಕೆಗಳ ಮುಖ್ಯ ಬರಹಕ್ಕೆ ಪರಿಸರ ವಸ್ತು ವಿಷಯವಾಗಿದೆ. ಪರಿಸರ ಚಳುವಳಿಗಳ ಸಂದರ್ಭದಲ್ಲಿ ಪರಿಸರ ಬರಹಗಾರರು ಪರಿಸರ ಕಾರ್ಯಕರ್ತರಂತೆ ದುಡಿಯುತ್ತಿದ್ದಾರೆ.

ಜಾಗತಿಕ ಪರಿಸರ ಪತ್ರಿಕೋದ್ಯಮ

ಪರಿಸರ ಪತ್ರಿಕೋದ್ಯಮವು ಸುದೀರ್ಘ ಇತಿಹಾಸವನ್ನು ಹೊಂದಿದೆ. 19ನೇ ಶತಮಾನದ ಕೊನೆಯಲ್ಲಿ ಜಾಗತಿಕ ಮಟ್ಟದಲ್ಲಿ ಪರಿಸರ ಪತ್ರಿಕೋದ್ಯಮದ ಕುರಿತು ಚಿಂತನೆ ಪ್ರಾರಂಭವಾಯಿತು. ಪರಿಸರ ಬರಹಗಾರರಾದ ರಾಲ್ಫ್ ವಾಲ್ಡೋ ಎಮರ್‌ಸನ್ ಮತ್ತು ಹೆನ್ರೀ

ಡೇವಿಡ್ ಥೋರೋ ಪರಿಸರ ಪತ್ರಿಕೋದ್ಯಮದ ಕುರಿತು ಯೋಚಿಸಿದವರಲ್ಲಿ ಪ್ರಮುಖರು. 20ನೇ ಶತಮಾನದ ಆರಂಭದಲ್ಲಿ ಜಾನ್ ಬರೋಸ್ ಮತ್ತು ಜಾನ್ ಮುಯಿರ್ ಪರಿಸರ ಬರಹಗಳನ್ನು ಬರೆಯಲು ಶುರುವಿಟ್ಟರು. 1940ರ ದಶಕದಲ್ಲಿ ಅಲ್ಡೊ ಲಿಯೋಪೋಲ್ಡ್ ತಮ್ಮ ಬರಹಗಳಲ್ಲಿ ಪರಿಸರ ಪ್ರಜ್ಞೆಯನ್ನು ಅಳವಡಿಸಿಕೊಂಡರು.

1960 ಹಾಗೂ 1979ರ ತನಕ ಪರಿಸರ ಪತ್ರಿಕೋದ್ಯಮಕ್ಕೆ ಸರಿಯಾದ ರೂಪುರೇಷೆ ಸಿಕ್ಕಿರಲಿಲ್ಲ. ಪರಿಸರ ಚಳುವಳಿಗಳ ಬೆಳವಣಿಗೆಯೊಂದಿಗೆ ಪರಿಸರ ಪತ್ರಿಕೋದ್ಯಮವೂ ಬೆಳವಣಿಗೆ ಕಂಡಿತು. 1962ರಲ್ಲಿ ರಾಚೆಲ್ ಕಾರ್ಸನ್ ಪ್ರಕಟಿಸಿದ 'ಸೈಲೆಂಟ್‌ಸ್ಪ್ರಿಂಗ್' ಮತ್ತು 1964ರಲ್ಲಿ ಕಾನೂನುಬದ್ಧವಾಗಿ ಅಂಗೀಕಾರಗೊಂಡ 'ವೈಲ್ಡರ್ನೆಸ್ ಆಕ್ಟ್' ಪರಿಸರ ಪತ್ರಿಕೋದ್ಯಮದ ಬೆಳವಣಿಗೆಗೆ ನಾಂದಿಹಾಡಿತು. 1960 ಮತ್ತು 1970ರ ದಶಕಗಳಲ್ಲಿ ಪರಿಸರ ಸಂಘಟನೆಗಳು ರಾಜಕೀಯದಲ್ಲೂ ಪ್ರಭಾವ ಬೀರಲಾರಂಭಿಸಿದವು. ಪರಿಸರ ಬಿಕ್ಕಟ್ಟುಗಳು ಹಾಗೂ ಸಮಸ್ಯೆಗಳನ್ನು ಸಾರ್ವಜನಿಕರಿಗೆ ತಿಳಿಸಿ, ಅರಿವುಮೂಡಿಸಿ, ಪರಿಸರಕ್ಕೆ ಪೂರಕವಾಗುವ ನೀತಿ ನಿರ್ಧಾರಗಳು ರಚನೆಯಾಗುವಲ್ಲಿ ಪ್ರಭಾವ ಬೀರಿದವು. ಇದರಿಂದಾಗಿ ಮಾಧ್ಯಮಗಳು ಪರಿಸರ ಸಮಸ್ಯೆಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಸಿ ಪರಿಸರದ ಪರವಾಗಿ ಕೆಲಸ ಮಾಡಲಾರಂಭಿಸಿದವು.

ಪರಿಸರ ವರದಿಗಳ ಗುಣಮಟ್ಟ, ನಿಖರತೆ ಮತ್ತು ಗೋಚರತೆಯನ್ನು ಸುಧಾರಿಸುವ ಮೂಲಕ ಪರಿಸರ ಸಮಸ್ಯೆಗಳ ಬಗ್ಗೆ ಸಾರ್ವಜನಿಕರಲ್ಲಿ ಗ್ರಹಿಕೆಯನ್ನು ಹೆಚ್ಚಿಸುವ ಉದ್ದೇಶದಿಂದ 1990ರಲ್ಲಿ 'ಸೊಸೈಟಿ ಆಫ್ ಎನ್ವಿರಾನ್ಮೆಂಟಲ್ ಜರ್ನಲಿಸ್ಟ್'ಸ್ಥಾಪನೆಗೊಂಡಿತು. ಇದರಿಂದಾಗಿ ಪರಿಸರಪತ್ರಿಕೋದ್ಯಮದ ಕ್ಷೇತ್ರವು ಕಾನೂನುಬದ್ಧಗೊಂಡಿತು. ಇತ್ತೀಚೆಗೆ ಅನೇಕಶಿಕ್ಷಣ ಸಂಸ್ಥೆಗಳಲ್ಲಿಪರಿಸರಪತ್ರಿಕೋದ್ಯಮದ ಸಂಪೂರ್ಣ ವಿಸ್ತಾರವನ್ನು ತಿಳಿಸಲು ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ.

ಭಾರತದಲ್ಲಿ ಪರಿಸರ ಪತ್ರಿಕೋದ್ಯಮ

1920ರಲ್ಲಿ ಭಾರತದಲ್ಲಿ ಪರಿಸರ ಕುರಿತಾದ ಪತ್ರಿಕೋದ್ಯಮ ಶುರುವಾಯಿತು. 1947ರ ಸುಮಾರಿಗೆ ಗಾಂಧೀಜಿಯವರ ಅಹಿಂಸಾ ಚಳುವಳಿಯ ಅವಧಿಯಲ್ಲಿ ಪರಿಸರದ ಚೌಕಟ್ಟು ಸ್ಥಿತ್ಯಂತರವಾಯಿತು. 1970ರ ಸುಮಾರಿಗೆ ಮರುಹುಟ್ಟು ಪಡೆದುಕೊಂಡ ಪರಿಸರ ಕಾಳಜಿಯ ಚಿಂತನೆ ಚಿಪ್ಕೊ ಚಳುವಳಿ, ನರ್ಮದಾ ಕಣಿವೆ ಆಂದೋಲನ, ಕೇರಳದಲ್ಲಿ ಮೀನುಗಾರರ ಚಳುವಳಿಗಳಿಂದ ಆರಂಭವಾಯಿತು. 1920ರಲ್ಲಿ ಟಾಟಾ ಅವರು ಪಶ್ಚಿಮ ಘಟ್ಟಗಳ ಸಾಲಿನಲ್ಲಿನ ಲೋನೋಲ್ವಾ ಬಳಿ ದೊಡ್ಡ ಡ್ಯಾಮ್‌ನ್ನು ಕಟ್ಟಲು ಮುಂದಾದಾಗ ಸ್ಥಳೀಯ 15–20 ಕುಟುಂಬಗಳನ್ನು ಸ್ಥಳಾಂತರ ಮಾಡಬೇಕಾದಾಗ ವಿರೋಧ ವ್ಯಕ್ತವಾಯಿತು. ಸಮಾಜ ಹೋರಾಟಗಾರ ಪುಣೆಯ ಸೇನಾಪತಿ ಬಾಪಟ್ ಹೋರಾಟಕ್ಕಿಳಿದರು. ಆಗ ಪರಿಸರ ಕುರಿತಾದ ಬರಹಗಳು ಪತ್ರಿಕೆಯಲ್ಲಿ ಬರಲು ಆರಂಭಿಸಿದವು ಹಾಗೂ ಪರಿಸರ ಪತ್ರಿಕೋದ್ಯಮಕ್ಕೆ ಅಡಿಪಾಯ ಆರಂಭವಾಯಿತು. ಅಹಮದಾಬಾದ್‌ನ ಶ್ಯಾಮ್ ಪರೇಖ್, ದೆಹಲಿಯ ಸುಬೀರ್‌ಗೋಶ್, ಕನ್ನಡ ಪರಿಸರ ಪತ್ರಿಕೋದ್ಯಮಿ ನಾಗೇಶ್ ಹೆಗಡೆ ಹಾಗೂ ಶ್ರೀಪಡ್ರೆ ಪರಿಸರ ಪತ್ರಿಕೋದ್ಯಮದಲ್ಲಿ ಗುರುತಿಸಿಕೊಂಡವರಲ್ಲಿ ಪ್ರಮುಖರು.

ಕರ್ನಾಟಕದಲ್ಲಿ ಪರಿಸರ ಪತ್ರಿಕೋದ್ಯಮ

ಭಾರತದಲ್ಲಿ ಪರಿಸರ ಪತ್ರಿಕೋದ್ಯಮ ಬೆಳೆಯುತ್ತಿದ್ದಂತೆಯೇ ಕರ್ನಾಟಕದಲ್ಲೂ ಇದು ಬೆಳವಣಿಗೆ ಕಂಡಿತು. ಅಪ್ಪಿಕೋ ಚಳುವಳಿ, ಪಶ್ಚಿಮ ಘಟ್ಟ ಉಳಿಸಿ ಅಭಿಯಾನ, ಕಾವೇರಿ ಉಳಿಸಿ ಚಳುವಳಿ, ನೇತ್ರಾವತಿ ನದಿ ಉಳಿಸಿ ಅಭಿಯಾನ ಮುಂತಾದ ಪರಿಸರ ಪರ ಹೋರಾಟಗಳಲ್ಲಿ ಪರಿಸರ ಪತ್ರಿಕೋದ್ಯಮ ಪ್ರಮುಖ ಪಾತ್ರವಹಿಸಿತು. ಪರಿಸರ ಹೋರಾಟಗಾರರ ಚಿಂತನೆಗಳು ಬರಹ ರೂಪಕ್ಕಿಳಿದವು. ಹಲವು ಪರಿಸರಪರ ಹೋರಾಟಗಳಿಗೆ ಪರಿಸರ ಪತ್ರಿಕೋದ್ಯಮ ಬೆಂಬಲವಾಗಿ ನಿಂತಿತು. ಕರ್ನಾಟಕದಲ್ಲಿ ನಾಗೇಶ್ ಹೆಗಡೆ, ಶ್ರೀ ಪಡ್ರೆ, ಶಿವಾನಂದ ಕಳವೆ, ರಾಧಾಕೃಷ್ಣ ಭಡ್ತಿ ಮುಂತಾದವರು ಪರಿಸರ ಪತ್ರಿಕೋದ್ಯಮದಲ್ಲಿ ಗುರುತಿಸಿಕೊಂಡ ಪ್ರಮುಖರು.

ಕನ್ನಡದಲ್ಲಿ ಪರಿಸರ ನಿಯತಕಾಲಿಕಗಳು

ಕನ್ನಡದಲ್ಲಿ ಹಲವು ಪರಿಸರ ಬರಹಗಾರರಿದ್ದರೂ ಪರಿಸರಕ್ಕೆ ಸಂಬಂಧಿಸಿದ ನಿಯತಕಾಲಿಕಗಳು ವಿರಳವೆಂದೇ ಹೇಳಬಹುದು. ಶ್ರೀಪಡ್ರೆ ಸಂಪಾದಕತ್ವದ ಅಡಿಕೆ ಪತ್ರಿಕೆ, ವಿ.ಗಾಯತ್ರಿ ಸಂಪಾದಕತ್ವದ ಸಹಜ ಸಾಗುವಳಿ, ಡಾ.ಜಿ.ಎಸ್.ಎನ್‌ರೆಡ್ಡಿ ಸಂಪಾದಕತ್ವದ ಸಿರಿ ಸಮೃದ್ಧಿ, ಡಾ.ಜಿ.ಕೆ.ಹೆಬ್ಬಾರ್ ಸಂಪಾದಕತ್ವದ ಸುಜಾತ, ಡಿ ಎಂ ಸತೀಶ್ ಸಂಪಾದಕತ್ವದ ಕೃಷಿ ಮಿತ್ರ, ರಾಧಾಕೃಷ್ಣ ಭಡ್ತಿ ಸಂಪಾದಕತ್ವದ ಹಸಿರುವಾಸಿ ನಿಯತಕಾಲಿಕೆಗಳು ಕರ್ನಾಟಕದ ಪ್ರಮುಖ ಪರಿಸರ ನಿಯತಕಾಲಿಕೆಗಳಾಗಿವೆ.

ಅಧ್ಯಯನದ ಉದ್ದೇಶ

ಪರಿಸರ ಪತ್ರಿಕೋದ್ಯಮಕ್ಕೆ ಹೊಸ ಆಯಾಮ ಕೊಟ್ಟ ಹಸಿರುವಾಸಿ ಪತ್ರಿಕೆಯ ಕುರಿತು ವಿವಿಧ ಆಯಾಮಗಳಲ್ಲಿ ಸಮಗ್ರವಾಗಿ ಅಧ್ಯಯನ ನಡೆಸುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿತ್ತು. ಅದರ ಜೊತೆಗೆ ಹಸಿರುವಾಸಿ ಪತ್ರಿಕೆಯ ಹುಟ್ಟಿನ ಹಿನ್ನೆಲೆ ಮತ್ತು ಅದರ ಹುಟ್ಟು ಕನ್ನಡ ಪರಿಸರ ಪತ್ರಿಕೋದ್ಯಮದ ನಿರ್ವಾತವೊಂದನ್ನು ತುಂಬಿದ ಬಗೆಯನ್ನು ಅಧ್ಯಯನ ನಡೆಸುವುದು ಹಾಗೂ ಆ ನಿಯತಕಾಲಿಕದ ಬರಹ ವೈವಿಧ್ಯಗಳನ್ನು ವಿಶ್ಲೇಷಿಸುವುದು ಈ ಅಧ್ಯಯನದ ಇತರ ಉದ್ದೇಶಗಳಾಗಿದ್ದವು.

ಅಧ್ಯಯನ ವಿಧಾನ:

ಈ ಸಂಶೋಧನಾ ಲೇಖನಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಲು ವಿಷಯ ವಿಶ್ಲೇಷಣೆ ಮತ್ತು ಸಂದರ್ಶನ ವಿಧಾನಗಳನ್ನು ಅನುಸರಿಸಲಾಗಿತ್ತು. ಅದರ ಜೊತೆಗೆ ಹಸಿರುವಾಸಿ ಪತ್ರಿಕೆಯ ಆಯ್ದ ಓದುಗರಿಂದ ಅಭಿಪ್ರಾಯಗಳನ್ನು ಸಂಗ್ರಹಿಸುವ ಮೂಲಕ ಈ ಸಂಶೋಧನಾ ಲೇಖನ ರಚಿಸಲಾಗಿದೆ.

ಹಸಿರುವಾಸಿ ನಿಯತಕಾಲಿಕೆ ಹುಟ್ಟಿನ ಹಿನ್ನೆಲೆ:

ಹಸಿರುವಾಸಿಯ ಹುಟ್ಟಿನ ಕಾರಣಗಳನ್ನು ತಿಳಿಯಲು ಅದರ ಸಂಪಾದಕರಾದ ರಾಧಾಕೃಷ್ಣ ಭಡ್ತಿಯವರ ಜೀವನಾಸಕ್ತಿ ಮತ್ತು ಪತ್ರಿಕೋದ್ಯಮದ ಅನುಭವಗಳನ್ನು ಅರಿಯುವುದು ಅನಿವಾರ್ಯ. ಜೀವನ ಮತ್ತು ವೃತ್ತಿ ಜೀವನವೆರಡನ್ನೂ ಬೇರೆಯಲ್ಲವೆಂಬಂತೆ

ಕಾಯಕ ಯೋಗಿಯಂತೆ ದುಡಿಯುವ ಅವರ ಮನೋಭಾವವೇ ಇದಕ್ಕೆ ಕಾರಣ. ರಾಧಾಕೃಷ್ಣ ಭಡ್ತಿಯವರ ಬರೋಬ್ಬರಿ 17 ವರ್ಷಗಳ ಕನಸು ಹಸಿರುವಾಸಿ. ಪದವಿಯನ್ನು ಮುಗಿಸಿದ ಹೊಸದರಲ್ಲಿ ಪತ್ರಿಕೋದ್ಯಮದ ಹುಚ್ಚುಗಳನ್ನು ಮೈಗೆ ಬಳಿದುಕೊಂಡಿದ್ದ ಭಡ್ತಿಯವರು ಶಿವಮೊಗ್ಗವನ್ನು ಕೇಂದ್ರವಾಗಿರಿಸಿಕೊಂಡು 'ಅಭ್ಯಾಗತ' ಎಂಬ ಪ್ರಾದೇಶಿಕ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಕ್ರೋನ್‌ಸೈಜಿನಲ್ಲಿ ಎಂಟು ಪುಟಗಳಲ್ಲಿ ಪ್ರಕಟವಾಗುತ್ತಿದ್ದ 'ಅಭ್ಯಾಗತ' ಅಂದಿನ ಕಾಲಕ್ಕೇ 2000ರ ಆಸುಪಾಸು ಪ್ರಸರಣ ಸಂಖ್ಯೆಯನ್ನು ಹೊಂದಿತ್ತು ಎಂಬುದು ಗಮನಾರ್ಹ ಸಂಗತಿ. ಅದೇಸಮಯಕ್ಕೆ ಶಿವಮೊಗ್ಗದಲ್ಲಿ ಆರಂಭವಾದ 'ಜನವಾರ್ತೆ' ಎಂಬ ಜಿಲ್ಲಾ ಪತ್ರಿಕೆಗೆ ಆಗಮಿಸುವಂತೆ ಒತ್ತಡಬಂದುನಾ. ಡಿಸೋಜಾ, ಟಿ. ಮಹಾಬಲೇಶ್ವರ ಭಟ್ ಅವರುಗಳ ತಂಡವನ್ನು ಸೇರಿಕೊಂಡರು. ನಂತರ ಟಿ.ಶಾಮರಾಯರ ಒತ್ತಾಯದ ಮೇರೆಗೆ ಭಡ್ತಿಯವರು ಸೇರಿದ್ದೇ 'ಸಂಯುಕ್ತ ಕರ್ನಾಟಕ'.

ಮೊದಲಿಂದಲೂ ಸ್ವಂತ ಪತ್ರಿಕೆಯ ಕನಸು ಕಾಣುತ್ತಿದ್ದ ಭಡ್ತಿಯವರಿಗೆ ಗ್ರಾಮೀಣ ಅಭಿವೃದ್ಧಿ ಪತ್ರಿಕೋದ್ಯಮದ ಹುಚ್ಚು ಸಹ ಆಗಿನಿಂದಲೇ ಇತ್ತು. ನಂತರ ಬದುಕಿನ ವಿವಿಧ ಅನಿವಾರ್ಯತೆಯಿಂದ ಪತ್ರಿಕೋದ್ಯಮದ ಮುಖ್ಯವಾಹಿನಿಯಲ್ಲಿ ತೊಡಗಿಸಿಕೊಳ್ಳುವುದು ಅನಿವಾರ್ಯವಾಯಿತು. ಆದರೆ ಮುಖ್ಯವಾಹಿನಿಯ ಪತ್ರಿಕೋದ್ಯಮದಲ್ಲೇ ನೀರಿನ ಕುರಿತು ಅಂಕಣ ಬರೆಯಲು ಶುರುವಿಟ್ಟಾಗಿನಿಂದಲೇ ನೀರಿನ ಕುರಿತು ಅಥವಾ ಅಭಿವೃದ್ಧಿ ಪತ್ರಿಕೋದ್ಯಮದ ಕುರಿತೇ ಒಂದು ಪತ್ರಿಕೆ ಪ್ರಾರಂಭಿಸುವ ಕನಸಿಗೆ ಫಲವತ್ತತೆ ಒದಗಿತು. ನಂತರ ವಿಜಯ ಕರ್ನಾಟಕದಲ್ಲಿ ಪುರವಣಿ ವಿಭಾಗದ ಮುಖ್ಯಸ್ಥರಾದ ಭಡ್ತಿಯವರು ವಿಜಯ ಕರ್ನಾಟಕದಲ್ಲಿ ಪತ್ರಿಕೆಗಳ ಪುರವಣಿ ಲೋಕಕ್ಕೆ ಹೊಸ ರೂಪು ನೀಡುವಲ್ಲಿ ಸಫಲರಾದರು. ಹೀಗೆ ದಿನಕ್ಕೆ ಒಂದೇ ವಿಷಯಕ್ಕೆ ಸಂಬಂಧಿಸಿದ ಪುರವಣಿಗಳು ಅಂದಿನ ಎಲ್ಲಪತ್ರಿಕೆಗಳ ರೂಡಿಯಾಗಿತ್ತು. ವಿಜಯ ಕರ್ನಾಟಕವನ್ನು ರೀಲಾಂಚ್ ಮಾಡುವ ಸಂದರ್ಭದಲ್ಲಿ ಸಹಾಯಕ ಸಂಪಾದಕರಾಗಿದ್ದ ರಾಧಾಕೃಷ್ಣ ಭಡ್ತಿಯವರು ಪತ್ರಿಕೆಯ ಮ್ಯಾನೇಜ್‌ಮೆಂಟಿನ ಎದುರು ಹೊಸ ಯೋಜನೆಯನ್ನು ಪ್ರಸ್ತಾಪಿಸಿದರು. ಪತ್ರಿಕೆಯ ವಿನ್ಯಾಸ, ಸುದ್ದಿ ನೀಡುವ ಸ್ವರೂಪವನ್ನು ಹೊಸದಾಗಿ ರೂಪಿಸುವುದು ಮಾಮೂಲಿ. ಆದರೆ ಪುರವಣಿಗಳಿಗೆ ಯಾಕೆ ಮಾಂತ್ರಿಕ ಸ್ಪರ್ಶ ನೀಡಬಾರದು ಎಂಬ ಅವರ ಯೋಚನೆಯನ್ನೊಪ್ಪಿದ ಮ್ಯಾನೇಜ್‌ಮೆಂಟ್ 'ಮದುವೆ ಆಗು ಅಂದ್ರೆನೀನೇ ನನ್ನ ಗಂಡ' ಎಂಬಮಾತಿನಂತೆ ಅದನ್ನು ಕಾರ್ಯರೂಪಕ್ಕಿಳಿಸುವ ಜವಾಬ್ದಾರಿಯನ್ನು ಭಡ್ತಿಯವರ ಹೆಗಲಿಗೇರಿಸಿತು. ವಸ್ತು, ವಿನ್ಯಾಸ ಮತ್ತು ಸ್ವರೂಪಗಳನ್ನು ಮರು ವಿನ್ಯಾಸಗೊಳಿಸಿದ ಅವರು ಲವಲವಿಕೆ ಪುರವಣಿಯನ್ನು ಪ್ರತಿಯೊಬ್ಬರೂ ಓದಲೇಬೇಕಾದ ಪುರವಣಿಯನ್ನಾಗಿ ರೂಪಿಸಿದರು. ಒಂದು ವೇಳೆ ವಿಫಲವಾದರೆ ಕೆಲಸವನ್ನೇ ತೊರೆಯಬೇಕಾದ ಸವಾಲು ಎದುರಿಗಿತ್ತು. ತಮ್ಮದೇ ಆಯ್ಕೆಯ ಸೃಜನಾತ್ಮಕ ತಂಡ ಕಟ್ಟಿದ ಭಡ್ತಿಯವರಿಗೆ ಎಲ್ಲ ವಯೋಮಾನದ, ಎಲ್ಲ ವರ್ಗದ ಎಲ್ಲ ಮನೋಭಾವದ ಓದುಗರಿಗೂ ಆಸಕ್ತಿ ಮೂಡುವ ಹೊಸ ಪುರವಣಿ ರೂಪಿಸುವ ಉದ್ದೇಶವಿತ್ತು. ಒಂದು ಪುರವಣಿ ಎಲ್ಲ ವಿಷಯಗಳನ್ನೂ ಒಳಗೊಂಡದ್ದಾಗಿರಬೇಕೆಂಬುದು ಲವಲವಿಕೆಯಹಿಂದಿನ ಉದ್ದೇಶವಾಗಿತ್ತು. ಲವಲವಿಕೆ ಪತ್ರಿಕೆಗೆ ಪ್ರಚಾರವನ್ನೂ, ಆದಾಯವನ್ನೂ ತಂದುಕೊಟ್ಟಿತು. ಹೀಗೆ ಕನ್ನಡ ಪುರವಣಿ ಲೋಕಕ್ಕೆ ಲವಲವಿಕೆಯ ಮೂಲಕ ಹೊಸ ಚೇತನ ನೀಡಿದ ಕೀರ್ತಿ ರಾಧಾಕೃಷ್ಣ ಭಡ್ತಿಯವರದ್ದು.

ಆದರೆ ಕೆಲವು ಕಾರಣಗಳಿಂದ ವಿಜಯ ಕರ್ನಾಟಕವನ್ನು ರಾಧಾಕೃಷ್ಣ ಭಡ್ತಿಯವರು

ತೊರೆಯುವ ಪ್ರಸಂಗ ಬಂತು. ನಂತರ ಲವಲವಿಕೆ ಸಿನಿಮಾ ಮತ್ತು ಕಮರ್ಶಿಯಲ್ ಪುರವಣಿಯಾಗಿ ನಿಧಾನವಾಗಿ ಬದಲಾಯಿತು. ಇದೊಂದು ಭಡ್ತಿಯವರ ಮನಸ್ಸಲ್ಲಿ ಅಚ್ಚೊತ್ತಿತ್ತು. ನಂತರ ಕನ್ನಡ ಪ್ರಭದಲ್ಲಿ ಪುರವಣಿ ವ್ಯವಸ್ಥಾಪಕ ಮತ್ತು ಸಹ ಸಂಪಾದಕರಾಗಿ ಸೇರಿದ ಅವರು ಅಲ್ಲಿಯ ಸಾಪ್ತಾಹಿಕ ಪುರವಣಿ 'ಖುಷಿ'ಯನ್ನು ಪುಸ್ತಕ ರೂಪದಲ್ಲಿ ತರುವ ವಿಶಿಷ್ಟ ಸಾಹಸಕ್ಕೆ ಕೈಹಾಕಿದರು. ಸುಮಾರು ಮೂರು ತಿಂಗಳನಂತರ ಆದಾಯದ ನೆಪವೊಡ್ಡಿ ಪತ್ರಿಕೆಯ ಆಡಳಿತ ಮಂಡಳಿ ಈ ಪ್ರಯತ್ನವನ್ನು ನಿಲ್ಲಿಸಿತು. ನಂತರ ಅವರು ದೆಹಲಿ ವಿಭಾಗಕ್ಕೆ ವರ್ಗಾವಣೆಗೊಂಡ ಸಂದರ್ಭದಲ್ಲೆ 'ಖುಷಿ' ಪುರವಣಿಯೂ ಸ್ಥಗಿತವಾಯಿತು. ಆ ಬೇಸರವೂ ಭಡ್ತಿಯವರ ಮನಸ್ಸನ್ನು ಕಾಡುತ್ತಿತ್ತು.

ಭಡ್ತಿಯವರಿಗೆ ಹೊಸತನ್ನು ಮಾಡುವ ಎಲ್ಲಿಲ್ಲದ ಉತ್ಸಾಹ. ಅಭಿವೃದ್ಧಿ ಪರ ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡವರ ಜೊತೆ ನಿರಂತರ ಸಂಪರ್ಕ. ಒಮ್ಮೆ ಯಾದಗಿರಿ–ಕಲ್ಬುರ್ಗಿಯ ಪ್ರವಾಸದಲ್ಲಿದ್ದ ಹಿರಿಯ ಪರಿಸರ ಬರಹಗಾರ ಶಿವಾನಂದ ಕಳವೆಯವರು ಅನಿರೀಕ್ಷಿತವಾಗಿ ಕರೆ ಮಾಡಿದರು. ಅವರು ಹೇಳಿದ ಒಂದು ಸುದ್ದಿ ಹಸಿರುವಾಸಿಯ ಸ್ಥಾಪನೆಗೆ ಮುಖ್ಯ ಕಾರಣವಾಯಿತು.

ಬದಲಾವಣೆಗೆ ಕಾರಣವಾದ ಬಾಥ್ ಟಬ್

ಶಿವಾನಂದ ಕಳವೆಯವರು ಮಲೆನಾಡಿನ ಹೆಡಗೆ/ ಬೆತ್ತದ ಬುಟ್ಟಿ ಆಕಾರದ ರಚನೆಯೊಂದರಲ್ಲಿ ಓರ್ವ ತಾಯಿ ಮಕ್ಕಳಿಗೆ ಸ್ನಾನ ಮಾಡಿಸುತ್ತಿರುವ ಚಿತ್ರವನ್ನು ರಾಧಾಕೃಷ್ಣ ಭಡ್ತಿಯವರಿಗೆ ಕಳಿಸಿದರು. ಅರೆ! ಇದೇನಿದು, ಇದರಲ್ಲೇನು ವಿಶೇಷ? ಎಂದು ಕರೆಮಾಡಿ ಪ್ರಶ್ನಿಸಿದ ಭಡ್ತಿಯವರ ಹೃದಯಕ್ಕೆ ದಿಗಿಲು ಮೂಡಿಸುವ ಉತ್ತರ ಕಳವೆಯವರದಾಗಿತ್ತು. ಆ ಭಾಗದಲ್ಲಿ ನೀರಿಗೆ ಭೀಕರ ಕೊರತೆ. ವಾರದ ಒಂದು ದಿನ ಮಾತ್ರ ನೀರು. ಟ್ಯೂಬ್‌ನಲ್ಲಿ ಮಗುವನ್ನು ಕೂರಿಸಿ ಸ್ನಾನ ಮಾಡಿಸುತ್ತಾಳೆ. ಮತ್ತೆ ಅದೇ ನೀರನ್ನು ಬಕೇಟಲ್ಲಿ ತುಂಬಿಸಿ ತೆಗೆದಿಡುತ್ತಾಳೆ. ಒಂದೇ ಬಕೇಟಿನ ನೀರಲ್ಲಿ ವಾರಕ್ಕೊಮ್ಮೆ ಐವರು ಮಕ್ಕಳು ಮತ್ತು ಗಂಡ ಹೆಂಡತಿಯ ಕುಟುಂಬದ ಸ್ನಾನವಾಗಬೇಕು. ಪ್ರತಿಯೊಬ್ಬರಿಗೂ ಕೊನೆಯಲ್ಲಿ ಎರಡು ಚೊಂಬು ಮಾತ್ರ ಹೊಸನೀರು. ಅಷ್ಟು ಕರುಣಾಜನಕ ಚಿತ್ರಣವನ್ನು ಕಳವೆಯವರು ವಿವರಿಸಿದ್ದೇ ತಡ, ಅವರೊಳಗಿದ್ದ ಜವಾಬ್ದಾರಿಯುತ ಪತ್ರಕರ್ತ ಎಚ್ಚೆತ್ತ. ವಿಶ್ವವಾಣಿ ಸುದ್ದಿ ಮನೆಯಲ್ಲಿ ಕುಳಿತಿದ್ದ ಭಡ್ತಿಯವರ ತಲೆಯಲ್ಲಿ ಮರುದಿನದ ಮೊದಲ ಪುಟದ ಲೀಡ್ ಹೊಳೆಯಿತು. ಅಷ್ಟೇ ಅಲ್ಲದೇ ಶಿವಾನಂದ ಕಳವೆಯವರು ಉತ್ತರ ಕರ್ನಾಟಕದ ಪ್ರವಾಸದಲ್ಲಿದ್ದಷ್ಟೂ ದಿನ ವಿಶ್ವವಾಣಿಗಾಗಿ ಇಂತಹ ಸುದ್ದಿಗಳನ್ನು ನೀಡಲು ಕೋರಿದರು. ಪತ್ರಿಕೆಯ ವತಿಯಿಂದ ಸೂಕ್ತ ಸಂಭಾವನೆ ನೀಡುವ ಭರವಸೆ ನೀಡಿದರು. ಮರುದಿನದ ಲೀಡ್‌ಗಾಗಿ ತಯಾರಿ ಆರಂಭಿಸಿದರು.

ನಂತರ ಕೆಲವು ಕಾಲ ವಿಶ್ವವಾಣಿಯಲ್ಲಿ ಕೆಲಸ ಮಾಡಿದರೂ ಭಡ್ತಿಯವರ ಮನಸ್ಸಲ್ಲಿ ಸುದ್ದಿಮನೆಯ ಪ್ರಮುಖ ಹುದ್ದೆಯಲ್ಲಿದ್ದರೂ ಭಾರತದ ಪತ್ರಿಕೋದ್ಯಮಕ್ಕೆ ಅವಶ್ಯಕವಾದ ಗ್ರಾಮೀಣ ಅಭಿವೃದ್ಧಿಗೆ ಮಹತ್ವ ನೀಡಲು ಸಾಧ್ಯವಾಗದ್ದು ವಿಷಯವೇ ಕಾಡಲಾರಂಭಿಸಿತು. ದೇಶದ ಯಾವುದೇಭಾಷೆಯಲ್ಲಿ ಪರಿಸರಕ್ಕೊಂದೇ ಸಂಬಂಧಿಸಿದ ನಿಯತಕಾಲಿಕ ಇಲ್ಲ ಎಂಬುದು ಭಡ್ತಿಯವರ ಹುಡುಕಾಟದಿಂದ ಪತ್ತೆಯಾಯಿತು. ಇಂಗ್ಲೀಷಿನ ಡೌನ್ ಟು ಅರ್ಥ್ ಪರಿಸರದ ರಾಜಕೀಯ ಆಯಾಮಗಳ ಕುರಿತು ಹೆಚ್ಚು ಗಮನಹರಿಸುತ್ತದೆ.

ಪ್ರಖ್ಯಾತ ಮಲಯಾಳೀ ಮನೋರಮಾ ಸಮೂಹವೂ ಸಹ ಪರಿಸರ ಸಂಬಂಧಿ ಪತ್ರಿಕೆ ಅಥವಾ ನಿಯತಕಾಲಿಕೆಯನ್ನು ಹೊರತಂದಿಲ್ಲ. ಇಂಥದ್ದೊಂದು ಸಂದರ್ಭದಲ್ಲಿ ಕೆಲ ತಿಂಗಳ ನಂತರ ಕಾರಣಾಂತರದಿಂದ ವಿಶ್ವವಾಣಿಯನ್ನು ತೊರೆದ ಅವರ ಮುಂದಿನ ಗಟ್ಟಿ ಹೆಜ್ಜೆಯೇ 'ಹಸಿರುವಾಸಿ'.

ಹಸಿರು ಚಿಗುರಿದ ದಿನಗಳು

ಹಸಿರುವಾಸಿ ರೂಪಿಸಲು ನಾಡಿನಾದ್ಯಂತ ಹಲವರನ್ನು ಭೇಟಿ ಮಾಡಿ, ಚರ್ಚಿಸಿದಾಗ 99 ಪ್ರತಿಶತ ಜನರ ಅಭಿಪ್ರಾಯ ನಕಾರಾತ್ಮಕವಾಗಿತ್ತು. ಕೈಯಲ್ಲಿ ಯಾವುದೇ ಬಂಡವಾಳವಿಲ್ಲದೇ ಪತ್ರಿಕೆ ರೂಪಿಸುವ ಹುಚ್ಚುತನ ಬೇಡ ಎಂದೇ ಬಹುಜನರ ಅಭಿಪ್ರಾಯ ವ್ಯಕ್ತವಾಯಿತು. ಆದರೆ ತಮ್ಮ ಸುದೀರ್ಘ 27 ವರ್ಷಗಳ ವೃತ್ತಿ ಜೀವನದ ಮೂಲಕ ಒಳ್ಳೆಯದನ್ನು ನೀಡಿದರೆ ಓದುಗ ಖಂಡಿತವಾಗಿಯೂ ಓದುತ್ತಾನೆ ಎಂಬುದನ್ನು ಅರಿತಿದ್ದ ಭಡ್ತಿಯವರು ಹಸಿರುವಾಸಿಯ ಪ್ರಯತ್ನಕ್ಕೆ ಹಿಂದೇಟು ಹಾಕಲಿಲ್ಲ. ಪತ್ರಿಕೋದ್ಯಮದ ಅನುಭವವೊಂದೇ ಹಸಿರುವಾಸಿಯ ಭದ್ರ ಅಡಿಪಾಯವಾಗಿತ್ತು. ಓದುಗ ಕೇಳಿದ್ದನ್ನಷ್ಟೇ ನೀಡುವುದು ಪತ್ರಕರ್ತನ ಕೆಲಸವಲ್ಲ. ಪತ್ರಿಕೋದ್ಯಮ ಎಂಬುದು ಮನರಂಜನೆಯಿಂದ ಮನೋವಿಕಾಸದೆಡೆ ಓದುಗನನ್ನು ಕರೆದೊಯ್ದು ಪ್ರಜ್ಞಾವಂತ ನಾಗರಿಕರನ್ನು ರೂಪಿಸುವ ಮಂತ್ರದಂಡ ಎಂದು ಭಾವಿಸಿದರು. ಓದುಗರು ಇಷ್ಟಪಡುವಂತೆಯೇ ಅಪರಾಧ ಮತ್ತು ಅತಿ ರಂಜನೀಯ ರಹಿತ ಮನೋವಿಕಾಸದೆಡೆ ಕರೆದೊಯ್ಯಬಲ್ಲ ವಿಷಯಗಳನ್ನು ಒದಗಿಸುವ, ಓದುಗರ ಅಭಿರುಚಿಯು ಸೋ ಕಾಲ್ಡ್ ರಾಜಕೀಯ, ಧರ್ಮ, ಅಪರಾಧ ಮತ್ತು ಸಿನಿಮಾಗಳಿಂದ ಹೊರತಾದ ಗ್ರಾಮೀಣ ಅಭಿವೃದ್ಧಿ ಪತ್ರಿಕೋದ್ಯಮವನ್ನು ನೀಡುವುದು ಹಸಿರುವಾಸಿಯ ಉದ್ದೇಶವಾಗಿತ್ತು.

ಹಸಿರುವಾಸಿ ನಿಯತಕಾಲಿಕೆಯ ಬೆಳವಣಿಗೆಯಲ್ಲಿ ಎದುರಾದ ಸವಾಲು

ಬಂಡವಾಳ ಸಂಗ್ರಹ:

ಪತ್ರಿಕೆ ಆರಂಭಿಸುವಾಗ 99 ಪ್ರತಿಶತ ನಕಾರಾತ್ಮಕ ಅಭಿಪ್ರಾಯವನ್ನೇ ಪಡೆದ ಭಡ್ತಿಯವರಿಗೆ ಹಸಿರುವಾಸಿ ಆರಂಭಿಸಲು ಹಣದ ಕೊರತೆ ಉಂಟಾಗಿದ್ದು ಸಹಜವೇ. ಆದರೆ ನಿರಂತರ ಹುಡುಕಾಟ ಮತ್ತು ಆತ್ಮೀಯ ಹಳೆಯ ಗೆಳೆಯನೊಬ್ಬನ ಕೈಸಾಲವಾಗಿ ನೀಡಿದ ಹಣದಿಂದ ಜೂನ್ 10, 2017ರಂದು ಹಸಿರುವಾಸಿ ಆರಂಭವಾಯಿತು. ಪತ್ರಿಕೆಯ ಹೆಸರು ಸೂಚಿಸಲು ಸಾರ್ವಜನಿಕರಿಗೆ ಮುಕ್ತ ಆಹ್ವಾನ ನೀಡಲಾಗಿತ್ತು. ಕೊನೆಗೆ ಭಡ್ತಿಯವರ ಜೊತೆಯೇ ಮೊದಲು ಕೆಲಸ ಮಾಡಿದ್ದ ಪತ್ರಕರ್ತ ಹರೀಶ ಕೇರ 'ಹಸಿರುವಾಸಿ' ಎಂಬ ಹೆಸರು ಸೂಚಿಸಿದರು. ಭಡ್ತಿಯವರ ಅನುಭವವೇ ಹಸಿರುವಾಸಿಯ ಮುಖ್ಯ ಅಡಿಪಾಯವಾಯಿತು.

ಪತ್ರಿಕಾ 'ಉದ್ಯಮಿ'ಯಾಗಿ ಅನುಭವದ ಕೊರತೆ

ಪತ್ರಕರ್ತನಾಗಿ ಸುದೀರ್ಘ ಅನುಭವ ಹೊಂದಿದ್ದರೂ ಪತ್ರಿಕೋದ್ಯಮಿಯಾಗಿ ಕೆಲಸ ಮಾಡಿದ ಅನುಭವದ ಕೊರತೆ ರಾಧಾಕೃಷ್ಣ ಭಡ್ತಿಯವರಿಗೆ ಎದುರಾಯಿತು. ರಾಜ್ಯಾದ್ಯಂತ ಪ್ರಸರಣ ಮಾಡುವಲ್ಲಿ ಹಲವು ತೊಡಕುಗಳು ಎದುರಾದವು. ಮುಖ್ಯವಾಹಿನಿಯ

ಪತ್ರಿಕೆಯಲ್ಲದ ಕಾರಣ ಹಂಚಿಕೆ ತೊಡಕಾಯಿತು. ಪತ್ರಿಕೆಯ ವಿಷಯ ವ್ಯಾಪ್ತಿ ಸೀಮಿತ ಎಂಬ ಎಳೆಯನ್ನಿಟ್ಟುಕೊಂಡು ಮಾರಾಟಗಾರರು ಪುಸ್ತಕದಂಗಡಿಗಳಲ್ಲಿ ಮಾರಲು ಹಿಂದೇಟು ಹಾಕಿದರು. ಪತ್ರಿಕೆಯನ್ನು ಪುಸ್ತಕದಂಗಡಿಗೆ ಬರುವವರಿಗೆ ಕಾಣುವಂತೆ ವ್ಯವಸ್ಥಿತ ಮತ್ತು ಆಕರ್ಷಕ ಸ್ಥಳದಲ್ಲಿ ಇರಿಸುವುದು ಭಡ್ತಿಯವರಿಗೆ ಸವಾಲಾಗಿತ್ತು. ಒಂದು ಹಸಿರು ವಾಸಿಯ ಸ್ಥಾನವನ್ನು ಪುಸ್ತಕದಂಗಡಿಯಲ್ಲಿ ಭದ್ರಪಡಿಸಲು ಮೂರು ತಿಂಗಳಿಗೆ ಒಂದು ಸಾವಿರ ರೂಪಾಯಿಯಷ್ಟು ಹಣವನ್ನು ಭಡ್ತಿಯವರೇ ಅಂಗಡಿಯವರಿಗೆ ನೀಡಬೇಕಿತ್ತು!

ಹೊಸ ನಿಯತಕಾಲಿಕಗಳ ಕುರಿತು ಅಸಡ್ಡೆ

ಪುಸ್ತಕದಂಗಡಿಗಳು ಹೊಸ ನಿಯತಕಾಲಿಕಗಳ ಕುರಿತು ತೀವ್ರ ಅಸಡ್ಡೆಯನ್ನು ಹೊಂದಿದ್ದವು. ಅವುಗಳಿಗೆ ನಿಯತಕಾಲಿಕಗಳೆಂದರೆ ಸಿನಿಮಾ ಮತ್ತು ರಂಜನೀಯ ವಿಷಯಗಳ ಕುರಿತನಿಯತಕಾಲಿಕಗಳನ್ನು ಮಾರಲಷ್ಟೇ ಆಸಕ್ತಿಯಿತ್ತು. ಗ್ರಾಮೀಣ ಅಭಿವೃದ್ಧಿ ಪರ ವಿಷಯಗಳ ಕುರಿತಪತ್ರಿಕೆಗಳ ಕುರಿತು ಕೊಳ್ಳುವವರು ಮತ್ತು ಓದುಗರಿಲ್ಲ ಎಂಬ ಮಿಥ್ಯೆಯ ಪರದೆ ಅವರ ಕಣ್ಣಿಗೆಪೊರೆ ಕಟ್ಟಿತ್ತು. ಆದರೂ ಹಣ ಹೂಡಿಯಾದರೂ ಪುಸ್ತಕದಂಗಡಿಗಳಲ್ಲಿ ಸ್ಥಾನ ಪಡೆಯುವ ಸಾಹಸವನ್ನು ಭಡ್ತಿಯವರು ಮಾಡಿದರು.

ಚಿಕ್ಕ ಸಂಸ್ಥೆಯಾದ ಕಾರಣ ನೌಕರರ ಕೊರತೆ

ಹಸಿರುವಾಸಿಯು ಆರಂಭದ ದಿನಗಳಿಂದಲೂ ಕೆಲಸಗಾರರ ಸಮಸ್ಯೆಯನ್ನು ಎದುರಿಸಿತು. ಸಂಸ್ಥೆಯ ಗಾತ್ರದ ಹೆಸರೊಡ್ಡಿಕೊಂಡು ಕೆಲಸಕ್ಕೆ ಸೇರಲು ಪತ್ರಿಕೋದ್ಯಮ ಪದವಿ ಪಡೆದವರು ಹಿಂದೇಟು ಹಾಕಿದರು.

ಜಾಹೀರಾತು ಮತ್ತು ಪ್ರಸರಣದ ಕೊರತೆ

ಒಟ್ಟು 84 ಪುಟಗಳ ಹಸಿರುವಾಸಿಯ ಒಂದು ಪ್ರತಿಗೆ ತಗಲುವ ವೆಚ್ಚ ಸರಿಸುಮಾರು 80 ರೂ. ಆದರೆ ಹಸಿರುವಾಸಿಯ ಮುಖಬೆಲೆ 50 ರೂ. ಇದನ್ನು ತೂಗಿಸಿಕೊಂಡು ಕಿಂಚಿತ್ತಾದರೂ ಲಾಭದಿಂದ ಪತ್ರಿಕೆಯನ್ನು ಮುನ್ನಡೆಸಲು ಜಾಹೀರಾತು ಅತ್ಯಗತ್ಯ. ಪತ್ರಿಕೆಗಳ ಆರ್ಥಿಕ ಸ್ಥಿತಿ ನಿರ್ಧಾರವಾಗುವುದೇ ಜಾಹೀರಾತಿನಿಂದ ಸಿಗುವ ಹಣದ ಮೂಲಕ. ಆದರೆ ಪ್ರಸರಣ ಸಂಖ್ಯೆ ಕಡಿಮೆಯಿದ್ದ ಕಾರಣ ಪ್ರಾರಂಭದ ದಿನಗಳಲ್ಲಿ ಹಸಿರುವಾಸಿಗೆ ಜಾಹೀರಾತು ಲಭಿಸುತ್ತಿರಲಿಲ್ಲ. ಇದರಿಂದ ಪತ್ರಿಕೆ ನಡೆಸುವುದು ತ್ರಾಸದಾಯಕವೆನಿಸಿದ್ದು ಸುಳ್ಳಲ್ಲ.

ಸವಾಲು ಎದುರಿಸಿದ ಬಗೆ

ಪುಸ್ತಕದಂಗಡಿಗಳಲ್ಲಿ ಗ್ರಾಹಕರಿಗೆ ಆಕರ್ಷಕವಾಗಿ ಕಾಣುವಂತೆ ಹಸಿರುವಾಸಿಯ ಸಂಚಿಕೆಗಳನ್ನಿರಿಸುವಂತೆ ಮಾಡುವುದು ಸುಲಭದ ಕೆಲಸವಾಗಿರಲಿಲ್ಲ. ಮೊದಲೇ ಮಾರುಕಟ್ಟೆಯನ್ನು ಆಕ್ರಮಿಸಿದ್ದ ಸಿನಿಮಾ ಮತ್ತು ರಂಜನೆಗೆ ಸಂಬಂಧಿಸಿದ ನಿಯತಕಾಲಿಕಗಳ ಮಧ್ಯೆ ಸ್ಥಳವನ್ನು ಗಳಿಸಬೇಕಿತ್ತು. ಮಾರಾಟಗಾರನ ಮನಸ್ಸಿಗೆ ಆವರಿಸಿದ್ದ 'ಇಂಥ ನಿಯತಕಾಲಿಕೆಗಳನ್ನ ಯಾರು ಓದುತ್ತಾರೆ?' ಎಂಬ ಮಿಥ್ಯಾ ಪೊರೆಯನ್ನು ಹರಿಯುವ ತುರ್ತಿತ್ತು. ಹೊಸಪತ್ರಿಕೆ ಎಂಬ ಅಸಡ್ಡೆಯೂ ಮಾರಾಟಗಾರರ ನಡುವೆ ಮೂಡುವ ಪರಿಸ್ಥಿತಿಯಿತ್ತು. ಆದ್ಯತೆಯ ಮೇರೆಗೆ ಹಸಿರುವಾಸಿಗೆ ಸ್ಥಳಾವಕಾಶ ಲಭಿಸುವಂತೆ ಮಾಡಲು

ಮೊದಲೇ ಹೇಳಿದಂತೆ ಮೂರು ತಿಂಗಳಿಗೆ ಸಂಚಿಕೆಯೊಂದಕ್ಕೆ ಮಾರಾಟದ ಕಮಿಶನ್ ಲಾಭವನ್ನು ಹೊರತುಪಡಿಸಿ ಸಾವಿರ ರೂಪಾಯಿಯ ಬಾಡಿಗೆ ನೀಡಿ ಉತ್ತಮ ಸ್ಥಳ ದಕ್ಕುವಂತೆ ನೋಡಿಕೊಂಡರು. ಪುಸ್ತಕದಂಗಡಿಯವರ ಮನವೊಲಿಸಿದರು. ರಾಜ್ಯದ ಪ್ರತಿ ತಾಲೂಕುಗಳ ಮುಖ್ಯ ಪುಸ್ತಕದಂಗಡಿಗಳನ್ನು ಒಂದೊಂದಾಗಿ ಸಂಪರ್ಕಿಸಿ, ಸಂದರ್ಶಿಸಿ ಪುಸ್ತಕದಂಗಡಿಗಳಲ್ಲಿ ಸ್ಥಾನ ಭದ್ರಪಡಿಸಲಾಯಿತು. ಇದು ಪ್ರಸರಣೆಯ ಸಂಖ್ಯೆಯನ್ನು ನಿಧಾನವಾಗಿ ಹೆಚ್ಚಿಸಿತು. ಹಸಿರುವಾಸಿಯ ಆರಂಭದಿಂದಲೂ ಸಂಚಿಕೆಯಿಂದ ಸಂಚಿಕೆಗೆ 300 ರಿಂದ 400 ಚಂದಾದಾರರ ಹೆಚ್ಚಳವಾಗಿದೆ ಎಂಬುದು ಇಲ್ಲಿ ಉಲ್ಲೇಖನೀಯ ಸಂಗತಿ. ಪ್ರಸ್ತುತ ಹಸಿರುವಾಸಿಯ ಪ್ರಸಾರ ಸಂಖ್ಯೆ 48,000.

ಆರ್ಥಿಕ ಕುಸಿತ

ವಿಶ್ವದ ಆರ್ಥಿಕ ಹಿಂಜರಿಕೆ ಹಸಿರುವಾಸಿಯ ಮೇಲೂ ಪ್ರಭಾವ ಬೀರದೇ ಇಲ್ಲ. ಶುರುವಿನಿಂದಲೂ ಬಂಡವಾಳದ ಸಮಸ್ಯೆ ಎದುರಿಸಿದ್ದ ಹಸಿರುವಾಸಿಗೆ 2018ರ ಅಗಸ್ಟ್‌ನಿಂದ ನವೆಂಬರ್‌ವರೆಗೆ ಪತ್ರಿಕೆ ನಡೆಸುವುದು ಕಷ್ಟಕರವಾಗಿ ಪರಿಣಮಿಸಿತು. ನಂತರದ ಕೆಲವು ತಿಂಗಳು ಹಾಗೂ ಹೀಗೂ ಪತ್ರಿಕೆ ನಡೆದರೂ ಸಹ ಅಕ್ಟೋಬರ್ ತಿಂಗಳಿಂದ ಮತ್ತೊಮ್ಮೆ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿತು. ಮೂರುವರ್ಷಗಳ ಹಿಂದೆ ಸಾಲ ಮಾಡಿ ಹೂಡಿದ ಬಂಡವಾಳ ನಿಧಾನವಾಗಿ ಹಿಂತಿರುಗುವ ಪರಿಸ್ಥಿತಿಯಲ್ಲಿ ಈ ಆರ್ಥಿಕ ಹಿಂಜರಿತ ಪೆಟ್ಟು ಕೊಟ್ಟಿತು. ಕೆಲಸಗಾರರ ಸಂಬಳ, ಮುದ್ರಣ ವೆಚ್ಚಕ್ಕಾಗಿ ಹಣ ಸಂಗ್ರಹಿಸುವುದು ಕಷ್ಟದಾಯಕವಾದ ಸಂದರ್ಭವೂ ಬಂದೊದಗಿತ್ತು. ಇದುಪತ್ರಿಕೆಯ ಕೆಲಸಗಾರರು ಕೆಲಸ ತ್ಯಜಿಸಲುಮತ್ತು ಅಂಗಡಿಕಾರರು ಪತ್ರಿಕೆಯನ್ನು ಮಾರಲು ನಿರಾಕರಿಸುವ ಸ್ಥಿತಿಗೆ ಕೊಂಡೊಯ್ದಿತು. ಆದರೆ ಪ್ರಸ್ತುತ ಚಂದಾದಾರ ಸಂಖ್ಯೆಯ ಹೆಚ್ಚಳ ಮತ್ತು ಜಾಹೀರಾತಿನ ಲಭ್ಯತೆಯಿಂದ ಪತ್ರಿಕೆ ಚೇತರಿಕೆಯ ಹಾದಿಯಲ್ಲಿ ಸಾಗುತ್ತಿದೆ. ಆರರಿಂದ ಎಂಟು ಪುಟಗಳ ಜಾಹೀರಾತು ಪ್ರತಿ ಸಂಚಿಕೆಗೂ ಲಭ್ಯವಾಗುತ್ತಿದೆ.

ಪ್ರಚಾರದ ತಂತ್ರಗಳು

ಹಸಿರುವಾಸಿಯನ್ನು ಜನಸಾಮಾನ್ಯರಿಗೆ ಪರಿಚಯಿಸಲು ರಾಧಾಕೃಷ್ಣಭಡ್ತಿಯವರು ಹಲವು ಧನಾತ್ಮಕ ತಂತ್ರಗಳನ್ನು ಹೂಡಿದರು. ಪರಿಚಯಸ್ಥರ ಕುಟುಂಬ ವರ್ಗದಲ್ಲಿ ಮದುವೆ, ಮುಂಜಿಗಳಲ್ಲಿ ಹಸಿರುವಾಸಿಯ ಮಾರ್ಕೆಟಿಂಗ್ ತಂಡದ ಜೊತೆ ಸ್ವತಃ ಪ್ರಚಾರಕ್ಕಿಳಿದರು. ಯಾವುದೇ ನುಡಿಹಬ್ಬ, ಸಾಹಿತ್ಯ ಗೋಷ್ಠಿಗಳಿದ್ದರೂ ಹಸಿರುವಾಸಿಯ ಮಾರ್ಕೆಟಿಂಗ್ ತಂಡ ಉಪಸ್ಥಿತವಿರುತ್ತಿತ್ತು.

ಭಾಷೆಯಲ್ಲಿ ಬಹುತ್ವ

ಕನ್ನಡ ಓದುಗರ ಸಂಖ್ಯೆ ಕಡಿಮೆಯಾಗುತ್ತಿರುವುದನ್ನು ಗಮನಿಸಿದ ರಾಧಾಕೃಷ್ಣ ಭಡ್ತಿಯವರು ಹಸಿರುವಾಸಿಯನ್ನು ನೋಂದಾಯಿಸುವಾಗಲೇ ಬೈಲಿಂಗ್ವುವಲ್ ಆಗಿ ಪತ್ರಿಕೆಯನ್ನು ನೋಂದಾಯಿಸಿದ್ದರು. ಇದು ಅವರು ಕೈಗೊಂಡ ಬುದ್ಧಿವಂತಿಕೆಯ ನಡೆ. ಬೆಂಗಳೂರು ಕೇಂದ್ರಿತ ಯುವ ಓದುಗರು ವಿವಿಧ ಕಾರಣಗಳಿಂದ ಇಂಗ್ಲೀಷ್ ಕಂಟೆಂಟನ್ನೇ ಹೆಚ್ಚು ನೆಚ್ಚುವುದನ್ನು ಗಮನಿಸಿ ಎರಡು ಪುಟಗಳಲ್ಲಿ ಇಂಗ್ಲೀಷಿನಲ್ಲೇ ನೀಡಲಾರಂಭಿಸಿದರು.

ಇದು ನಗರ ಕೇಂದ್ರಿತ ಯುವ ಓದುಗರನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು.

ಆಯ್ಕೆಯ ಕೊರತೆಯನ್ನು ತುಂಬಿದ ಹಸಿರುವಾಸಿ

ಪತ್ರಿಕೆಯಲ್ಲಿ ಕೇವಲ ಗ್ರಾಮೀಣ ಭಾಗವನ್ನೇ ಕೇಂದ್ರೀಕರಿಸದೆ ಹಳಿ ತಪ್ಪದಂತೆ ಓದುಗ ವರ್ಗವನ್ನು ಸಮೀಕರಿಸಿಕೊಂಡರು. ನಗರ ಪ್ರದೇಶದ ಚಿಕ್ಕ ಮನೆಗಳಲ್ಲೂ ಅಗತ್ಯವಿರುವ ತರಕಾರಿಗಳನ್ನು ಸ್ವತಃ ಹೇಗೆ ಬೆಳೆಯಬಹುದೆಂಬ ವಿಷಯಗಳನ್ನು ಸರಳವಾಗಿ ಮತ್ತು ಕುತೂಹಲಕಾರಿಯಾಗಿ ವಿವರಿಸುವ ಕೆಲಸಕ್ಕೆ ಹಸಿರುವಾಸಿಯ ಮೂಲಕ ಭಡ್ತಿಯವರು ಕೈಹಾಕಿದರು. ಇದು ನಗರ ಮತ್ತು ಗ್ರಾಮೀಣವಷ್ಟೇ ಅಲ್ಲದೇ ಎಲ್ಲಸ್ತರದ ಉದ್ಯೋಗಿಗಳು, ಸ್ವಂತ ವಹಿವಾಟು ನಡೆಸುವವರು, ಕೃಷಿಕರನ್ನು ಓದುಗರನ್ನಾಗಿ ರೂಪಿಸಿತು.

ಅಭಿವೃದ್ಧಿ ಪತ್ರಿಕೋದ್ಯಮದಲ್ಲಿ ಶುಗರ್ ಕೋಟಿಂಗ್

ಅಭಿವೃದ್ಧಿ ಪತ್ರಿಕೋದ್ಯಮ ಎಂಬುದು ನಾಲ್ಕು ವಿಷಯಗಳಿಂದ ರಚಿತವಾದದ್ದು. ಗ್ರಾಮೀಣ, ಪರಿಸರ, ವಿಜ್ಞಾನಮತ್ತು ಕೃಷಿ. ಹಲವು ಅಭಿವೃದ್ಧಿಪರ ಓದುಗರು ಈ ನಾಲ್ಕು ಸಂಗತಿಗಳಿಂದಷ್ಟೇ ತೃಪ್ತಿ ಹೊಂದುವುದಿಲ್ಲ. ಕೆಲವರಿಗೆ ತತ್ವಜ್ಞಾನಬೇಕು. ಕೆಲವರಿಗೆ ಚಿಂತನೆ. ಅದಕ್ಕಾಗಿ ಭಡ್ತಿಯವರು ಅಭಿವೃದ್ಧಿ ಪರ ವಿಷಯಗಳ ತಿರುಳಿಗೆ ಹಲವು ವಿಷಯಗಳ ಲೇಪನ ಹಚ್ಚಿ ಕಂಟೆಂಟುಗಳನ್ನು ಅಭಿವೃದ್ಧಿಪಡಿಸಿದರು. ಇದರಿಂದ ಸಹಜವಾಗಿ ಓದುಗರ ಸಂಖ್ಯೆ ಹೆಚ್ಚಳವಾಯಿತು.

ಹೊಸ ಬರಹಗಾರರ ರೂಪಣೆ

ಕೇವಲ ಬರವಣಿಗೆಯ ತೃಪ್ತಿಗಷ್ಟಕ್ಕೇ ತಮ್ಮನ್ನುಸೀಮಿತಗೊಳಿಸಿದ್ದಹಲವರಬಳಿ ಹಸಿರುವಾಸಿಗೆ ಬರೆಯಲು ಆಹ್ವಾನಿಸಲಾಯಿತು. ಬ್ಲಾಗ್ ಬರಹಗಾರರನ್ನು, ನಗರ ಕೇಂದ್ರಿತ ಬದುಕಲ್ಲೂ ಪರಿಸರಕ್ಕೆ ಆದ್ಯತೆ ನೀಡುವವರನ್ನು, ವಿವಿಧ ಔದ್ಯೋಗಿಕ ವ್ಯಕ್ತಿಗಳನ್ನು, ಸಾಮಾಜಿಕ ಜಾಲತಾಣಗಳಲ್ಲಿ ಅಭಿವೃದ್ಧಿ ಪರತೆಯಲ್ಲಿ ಸೃಜಶೀಲರಾಗಿರುವರ ಬಳಿ ಬರಹಗಳನ್ನು ಬರೆಸಲಾಯಿತು. ಇದು ಅಭಿವೃದ್ಧಿ ಪರ ಪತ್ರಿಕೋದ್ಯಮದ ವಿಸ್ತಾರ ಹೆಚ್ಚಿಸಿತು. ಅಭಿವೃದ್ಧಿ ಪರ ಬರವಣಿಗೆಯ ಆಸಕ್ತಿಯನ್ನು ಹವ್ಯಾಸವನ್ನಾಗಿ ಪರಿವರ್ತಿಸಲು ನಾಂದಿಯಾಯಿತು.

ಉದಾಹರಣೆಗೆ ಶೋಭಾ ರಾವ್ ಅವರು ಬ್ಲಾಗ್ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಆಸಕ್ತಿಕರ ಬರಹಗಳನ್ನು ಬರೆಯುತ್ತಿದ್ದರು. ಶೋಭಾ ರಾವ್ ಅವರು ಸಾಮಾಜಿಕ ಜಾಲತಾಣಕ್ಕಾಗಿ ಬರೆದ ಬರಹವನ್ನೇ ಮೊದಲು ಹಸಿರುವಾಸಿಗಾಗಿ ಕೇಳಿದ ಭಡ್ತಿಯವರ ಕೋರಿಕೆ ಮನ್ನಿಸಿ ಶೋಭಾ ರಾವ್ ಅವರು ನಂತರ ಹಸಿರುವಾಸಿಗಾಗಿಯೇ ಅಂಕಣ ಬರೆಯಲು ಪ್ರಾರಂಭಿಸಿದರು.

ವಸಂತ ಕಜೆ ಅವರ ಹೆಸರು ಅಭಿವೃದ್ಧಿ ಪರ ವಲಯದಲ್ಲಿ ಇಂದು ಸುಪ್ರಸಿದ್ಧ. ಅವರ ಬರಹಗಳನ್ನು ನಿರಂತರವಾಗಿ ಓದಬೇಕೆಂದೇ ಹಸಿರುವಾಸಿ ಪತ್ರಿಕೆ ಖರೀದಿಸುವವರ ಸಂಖ್ಯೆಯೂ ದೊಡ್ಡದಿದೆ. ಕೇವಲ ಹವ್ಯಾಸವಾಗಿ, ತಮ್ಮ ಅನುಭವಗಳನ್ನು ದಾಟಿಸುವ ಸಶಕ್ತ ಕೋಲಾಗಿ ಬರವಣಿಗೆ ಶುರುಮಾಡಿದ ಕಜೆ ಅವರು ಹಸಿರುವಾಸಿಯ ನಿರಂತರ ಅಂಕಣಕಾರರು. ಹೀಗೆ ಹಸಿರುವಾಸಿ ಹೊಸ ಬರಹಗಾರರನ್ನು ರೂಪಿಸುವುದೊಂದೇ

ಅಲ್ಲದೇ ಓದುಗರಿಗೆ ವಿಸ್ತಾರ ವಿಷಯಗಳನ್ನು ಉಣಬಡಿಸುತ್ತಿದೆ.

ಹಣಗಳಿಕೆಯ ಉದ್ದೇಶವಿಲ್ಲದೆ ಬರೆಯುವ ಸುಮಾರು 200 ಫ್ರೀಲಾನ್ಸರ್‌ಗಳು ರಾಧಾಕೃಷ್ಣ ಭಡ್ತಿಯವರ ಸಂಪರ್ಕದಲ್ಲಿದ್ದರು. ಇರುವ ಕೆಲವೇ ಕೆಲವು ಮುಖ್ಯವಾಹಿನಿ ಪತ್ರಿಕೆಗಳಲ್ಲಿ ದಕ್ಕದ ಅವಕಾಶದಿಂದ ವಂಚಿತರಾದ ಅವರಿಂದ ಬರೆಸುವ ಕಾರ್ಯಕ್ಕೆ ಹಸಿರುವಾಸಿ ಮುಂದಾಯಿತು.

ಭೂಮಿಗೀತ ಮೀಡಿಯಾ ಪ್ರೈವೇಟ್ ಲಿಮಿಟೆಡ್

ಸುಮಾರು 20 ವರ್ಷಗಳ ಹಿಂದೆ ಹುಟ್ಟಿಕೊಂಡ ಭಡ್ತಿಯವರ ಕನಸಿನ ಸಂಸ್ಥೆ ಭೂಮಿಗೀತ. ತಮ್ಮ ಹಲವು ಸಹವರ್ತಿಗಳ ಜೊತೆ ಕೂಡಿ ನೀರಿಗೆ ಸಂಬಂಧಿಸಿದ ಕೆಲಸಗಳನ್ನು ಮಾಡಲು ತೊಡಗಿದರು. ಸೂಲಿಬೆಲೆಯಲ್ಲಿ ಆ ಸಮಯದಲ್ಲಿ ಆರಂಭವಾದ ಮೊರಾರ್ಜಿ ವಸತಿ ಶಾಲೆ ಬಿರುಬಿಸಿಲಿನ ಬೋಳುಗುಡ್ಡದ ಮೇಲಿತ್ತು. ರಾಧಾಕೃಷ್ಣ ಭಡ್ತಿಯವರು ಸ್ಥಳೀಯರಾದ ಚಕ್ರವರ್ತಿ ಸೂಲಿಬೆಲೆ ಮತ್ತು ವಿವಿಧ ಕ್ಷೇತ್ರದ ಉತ್ಸಾಹಿ 15–20 ಜನರ ಗುಂಪು ವಾರದ ಪ್ರತಿ ಭಾನುವಾರ ಆ ಸ್ಥಳಕ್ಕೆ ತೆರಳಿ ಆ ಇಡೀ ಗುಡ್ಡವನ್ನ ಹಸಿರೀಕರಣಗೊಳಿಸುವ ಕೆಲಸಕ್ಕೆ ಮುಂದಾಯಿತು. ಸ್ಥಳ ಪರಿಶೀಲಿಸಿ ಗಿಡ ನೆಡುವ ಕಾರ್ಯವಾರಂಭಿಸಿತು. ಉದ್ದು ಬಿತ್ತಿದರು. ಬಿದ್ದ ಮಳೆಯನ್ನು ಇಂಗಿಸಲು ಚಿಕ್ಕ ಚಿಕ್ಕ ಹೊಂಡಗಳನ್ನು ತೋಡಿ, ಜೀವ ಪ್ರಬೇಧ ಸಹಜವಾಗಿ ಬೆಳೆಯುವಂತೆ ವ್ಯವಸ್ಥೆ ಕಲ್ಪಿಸಿದರು. ಅರಣ್ಯಾಧಿಕಾರಿ ಡಾ. ಯಲ್ಲಪ್ಪ ರೆಡ್ಡಿಯವರು ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಭೂಮಿಗೀತದ ಹೆಸರಲ್ಲಿ ನಡೆದ ಮೊದಲ ಕಾರ್ಯಕ್ರಮ ಇತಿಹಾಸ ಬರೆಯಿತು. ನಂತರ ಬೇರೆ ಶಾಲೆಗಳಲ್ಲಿ ಪರಿಸರ ಕಾರ್ಯಕ್ರಮಗಳು ನಡೆಸಿದರು. ನಂತರದ ದಿನಗಳಲ್ಲಿ ಆ ತಂಡ ವಿವಿಧ ಸಹಜ ಕಾರಣಗಳಿಗೆ ಬೇರ್ಪಟ್ಟರೂ ರಾಧಾಕೃಷ್ಣ ಭಡ್ತಿಯವರು ಆಸಕ್ತರೊಂದಿಗೆ ಪರಿಸರ ಕೆಲಸಗಳಲ್ಲಿ ಮುಂದುವರೆದರು. ಸುಮಾರು 18 ವರ್ಷಗಳಲ್ಲಿ ಪ್ರತಿವರ್ಷ ಪರಿಸರಪರ ಕೆಲಸಗಳನ್ನು ಭೂಮಿಗೀತ ಮಾಡುತ್ತಾ ಬಂದಿತು. ಕೊಪ್ಪಳದ ತಲ್ಲೂರಿನ 200 ಎಕರೆಯ ಕೆರೆಯನ್ನು ಚಿತ್ರನಟ ಯಶ್ ಅವರ ಯಶೋಮಾರ್ಗದ ಜೊತೆ ಸೇರಿ ಅಭಿವೃದ್ಧಿಪಡಿಸಿದ್ದು ಭೂಮಿಗೀತ ಸಂಸ್ಥೆಯ ಇತ್ತೀಚಿನ ಅಭಿವೃದ್ಧಿ ಪರ ಕೆಲಸ. 2017ರಲ್ಲಿ ಭೂಮಿಗೀತ ಸಂಸ್ಥೆಯನ್ನು ಕಂಪನಿಯಾಗಿ ಪರಿವರ್ತಿಸಿ ಭೂಮಿಗೀತ ಮೀಡಿಯಾ ಪ್ರೈವೇಟ್ ಲಿಮಿಟೆಡ್ ಎಂದು ನೋಂದಾಯಿಸಿದರು.

ಹಸಿರುವಾಸಿ ನಿಯತಕಾಲಿಕೆಯ ಆಯ್ದ ಬರಹಗಳ ವಿಷಯವಿಶ್ಲೇಷಣೆ

ಹಸಿರುವಾಸಿಯು ಲೇಖನಗಳ ಸಂಗ್ರಹದಲ್ಲಿ ಹಲವು ವಿಶಿಷ್ಟಪದ್ಧತಿಗಳನ್ನು ಅನುಸರಿಸುತ್ತಿದೆ. ಲೇಖನಗಳ ಸಂಗ್ರಹದಲ್ಲಿ ಹಸಿರುವಾಸಿ ಮಡಿವಂತಿಕೆಯನ್ನು ಪ್ರದರ್ಶಿಸುವುದಿಲ್ಲ. ಹಸಿರುವಾಸಿಯಲ್ಲಿ ಪ್ರಕಟಣೆಗೆ ಅರ್ಹವಾದ ಯಾವುದೇ ಒಂದು ಶ್ರೇಷ್ಠ ಬರಹ ರಾಜ್ಯದ ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾದಾಗ್ಯೂ ಸಹ ಅದನ್ನು ಪ್ರಕಟಿಸಲು ಹಸಿರುವಾಸಿ ಹಿಂದೆಮುಂದೆ ನೋಡುವುದಿಲ್ಲ. ಹಸಿರುವಾಸಿ ಪತ್ರಿಕೆಯು ಓದುಗರಿಗೆ ಒದಗಿಸುತ್ತಿರುವ ವಿಷಯಗಳು ಬಹಳ ವಿಭಿನ್ನ. ಪರಿಸರವನ್ನು ಶುದ್ಧ ದೇಸಿ ಕಣ್ಣುಗಳಲ್ಲಿ ಕಂಡು ಅಕ್ಷರ ರೂಪಕ್ಕಿಳಿಸಿದ ಬರಹಗಳು ಇದರ ಸತ್ವ ಮತ್ತು ಜೀವಾಳ.

'ಋತುಪರ್ಣ' ಅವರ ಅಂಕಣ 'ಶುದ್ಧಿಸಮಾಚಾರ' ಪರಿಸರ ಕಾಯುವ ನವೀನ

ವಿಧಾನಗಳನ್ನೂ, ಆಸಕ್ತಿ ಮೂಡಿಸುವ ಪರಿಸರ ಸಂಬಂಧಿ ಕೆಲಸ ಮಾಡುತ್ತಿರುವವರ ಪರಿಚಯಿಸಿದೆ. ಪರಿವಿಡಿಯ ನಂತರ ತಕ್ಷಣ ಓದುಗರನ್ನು ಆಕರ್ಷಿಸುವಂತೆಯೇ ಇದರ ವಿನ್ಯಾಸವೂ ಇದೆ. ಹೀಗೊಂದು ಪತ್ರಿಕೆ ಶುರುವಾಗುತ್ತದೆ ಎಂಬ ಸುದ್ದಿಯಿಂದಲೇ ಪುಳಕಿತರಾಗಿದ್ದ ನಾಡಿನ ಮತ್ತು ಹೊರನಾಡಿನ ಹಸಿರಕ್ಷರ ಪ್ರೇಮಿಗಳು ಹಸಿರುವಾಸಿಯ ನಿಯತಕಾಲಿಕದ ಮೇಲೆ ಅಪಾರ ನಿರೀಕ್ಷೆ ಮತ್ತು ಭರವಸೆಗಳನ್ನು ಹೊಂದಿ ಕಾಯುತ್ತಿದ್ದರು. ಮುಖಪುಟವೇ ಓದಲು ಮತ್ತು ಖಾಯಂ ಚಂದಾದಾರರಾಗಲು ರಸಕವಳ ನೀಡಿ ಆಹ್ವಾನವಿತ್ತಂತಿತ್ತು. 'ಪತ್ರಹರಿತ್ತು' ಎಂಬ ಹಾರೈಕೆಗಳನ್ನು ಹೊತ್ತ ಪುಟ ಅಕ್ಷರ ದಾಹಿಗಳ ನಿರೀಕ್ಷೆಗಳನ್ನೂ ಎತ್ತಿ ತೋರಿಸುವಂತಿತ್ತು. 'ಹಸಿರುಹರಸು'ವಿನ ಮೂಲಕ ಜನಪದ ವಿದ್ವಾಂಸ ಜಿ. ವೆಂಕಟಸುಬ್ಬಯ್ಯನವರು ತಮ್ಮ ಬಾಲ್ಯಕಾಲದ ಕೆರೆಯ ಹೂಳು ತೆಗೆಯುವ ನೆನಪುಗಳ ಮೂಲಕ ಹಸಿರುವಾಸಿಗೆ ಹಾರೈಸಿದ ಶುಭಾಶಯ ಪತ್ರಿಕೆಯ ಅವಶ್ಯಕತೆಯ ಮಹತ್ವವನ್ನು ತಿಳಿಸುತ್ತಿತ್ತು.

ಖ್ಯಾತ ಬರಹಗಾರ, ಅಂಕಣಕಾರ, ಲೇಖಕ ಶ್ರೀವತ್ಸ ಜೋಶಿ, ಇಂದಿನ ಕಸಾಪ ರಾಜ್ಯಾಧ್ಯಕ್ಷ ಮನು ಬಳಿಗಾರ್, ವಿದ್ವಾಂಸ ಕೆ.ಎಸ್. ನಾರಾಯಣಾಚಾರ್ಯ, ಲೇಖಕಿ ಭುವನೇಶ್ವರಿ ಹೆಗಡೆ, ಹಿರಿಯ ಗಾಯಕಿ ಮಾಲತಿ ಶರ್ಮ, ಮೋಹನ ತಲಕಾಲುಕೊಪ್ಪ ಸೇರಿದಂತೆ ನೂರಾರು ಜನರ ಹಾರೈಕೆ, ಭರವಸೆಗಳು ಪತ್ರ ಹರಿತ್ತಿನ ಮೂಲಕ ಪ್ರಕಟಗೊಂಡಿದ್ದವು.

ಮಳೆಯ ಗಂಧ–ಗಾಳಿ ಎಂಬುದು ಮೊದಲ ಸಂಚಿಕೆಯ ಮುಖಪುಟ ಶೀರ್ಷಿಕೆ ಬರಹ. ಅಗ್ರ ಬರಹವನ್ನು ಹಿರಿಯ ಬರಹಗಾರ ನಾಗೇಶ ಹೆಗಡೆಯವರು ಬರೆದಿದ್ದಾರೆ. ಅದೂ ಮಳೆಗಾಲದಷ್ಟೆ ಹಿತ ಮತ್ತು ಸ್ವಾರಸ್ಯಕಾರಿ. ಮಳೆಮಂತ್ರದ ಅಸ್ತ್ರ ಎಂಬುದು ಅವರ ಬರಹದ ಶೀರ್ಷಿಕೆ. ಅದರಲ್ಲಿ ಮೋಡ ಬಿತ್ತನೆಯೇ ಮೂಢನಂಬಿಕೆಯೇ? ಎಂಬುದರ ಬಗ್ಗೆ ನಿರೂಪಿಸಿದ್ದಾರವರು. ಮೋಡ ಬಿತ್ತನೆ ಎಂಬ ಹೊಸ ತಲೆಮಾರಿನ ಆಡಳಿತದ ಹಪಾಹಪಿ ಸಾಧನೆಯ ಬಹುಮುಖಿ ಆಯಾಮಗಳ ಸುತ್ತ ಅಕ್ಷರ ಜಾಲ ಹೆಣೆದಿದ್ದಾರೆ. ಮೋಡ ಬಿತ್ತನೆಯ ಇತಿಹಾಸದಿಂದ ಹಿಡಿದು ವೈಜ್ಞಾನಿಕವಾಗಿ ಮೋಡ ಬಿತ್ತನೆ ತರವೇ ಎಂದು ವಿಮರ್ಶಿಸಿದ್ದಾರೆ.

ಮಲ್ಲಿಕಾರ್ಜುನ ಹೊಸಪಾಳ್ಯ ಅವರು ಬರೆದ ಮಳೆಯ ಸುತ್ತ ಜನಪದ ನಂಬಿಕೆ, ಗಾದೆಮಾತು, ಆಚರಣೆ, ಶಾಸ್ತ್ರ, ಒಗಟು, ಕಥೆ, ಕವನ, ಹಾಡು, ನಿಷೇಧಗಳೆಂಬ ವೈವಿಧ್ಯಮಯ ಮಳೆ ಸಂಸ್ಕೃತಿಯನ್ನು ಬೆಂಬೆತ್ತಿ ಬರೆದ ಬರಹ 'ಒಗಟಾದ ಮಳೆ ನಂಬಿಕೆ ಬೆಳೆ' ಮತ್ತು 'ಉತ್ತರೆ ಇಲ್ಲದಿರೆ ಹೆತ್ತ ತಾಯಿಗೆ ಹಿಟ್ಟಿಕ್ಕುವುದಿಲ್ಲ!' ಎಂಬ ಅವರದೇ ಮತ್ತೊಂದು ಬರಹ ಸಹ ಇದನ್ನು ಪುಷ್ಟೀಕರಿಸುತ್ತದೆ. ಮಳೆಯನ್ನು ಎಂದಾದರೂ ನಮ್ಮ ಕವಿಗಳು ಮರೆಯುವುದುಂಟೇ!? ಎಂದು ಪ್ರಶ್ನಿಸುತ್ತಲೇ ಉತ್ತರ ಹೇಳಲು ಎಂದೇ 'ಹನಿ ದನಿ' ಎಂಬ ಅಂಕಣವು ಕ್ರಮವಾಗಿ ಜಯಂತ್ ಕಾಯ್ಕಿಣಿಯವರ 'ಮಳೆಹಾಡು', ಬಿ.ಆರ್. ಲಕ್ಷ್ಮಣ ರಾಯರ 'ಮಳೆ' ಮತ್ತು ಎಸ್. ಮಂಜುನಾಥ್ ಅವರ 'ಮೂರ್ನಾಡಿನಲ್ಲಿ ಮಳೆ' ಎಂಬ ಕವಿತೆಗಳನ್ನು ಹನಿಸುತ್ತದೆ. ನಾಡಿನ ಹಲವು ಭಾಗಗಳನ್ನು ಮುಂಗಾರು ಮತ್ತು ಹಿಂಗಾರುಗಳೆರಡರಲ್ಲೂ ಕಾಡುವ ಸಿಡಿಲಿನ ಕುರಿತು ಸಿಡಿಲಾಘಾತದಿಂದ ತಪ್ಪಿಸಿಕೊಳ್ಳುವುದು ಹೇಗೆ? ಎನ್ನುತ್ತಲೆ 'ಮಿಂಚಾಗಿ ನೀನು ಬರಲು' ಎಂದು ಬರಹವೂ ಉಚಿತವಾಗಿದೆ. ಮಿಂಚು ಬಂಧಕವನ್ನು ಅಳವಡಿಸಿಕೊಳ್ಳುವ ಕುರಿತು ಸಲಹೆ ನೀಡುತ್ತಲೇ ಈ ಸಂಗ್ರಹಿತ

ಬರಹವು ಸಿಡಿಲಿನಿಂದ ಪಾರಾಗುವ ಸರಳ ಮತ್ತು ಸ್ಪಷ್ಟವಾದ ಮಾರ್ಗೋಪಾಯಗಳನ್ನು ತಿಳಿಸುತ್ತದೆ.

ಪರಿಸರದಲ್ಲಿ ನಮ್ಮ ಜೀವವಿದೆ. ಪರಿಸರದೊಂದಿಗಿನ ನಮ್ಮ ಒಡನಾಟ. ಪರಿಸರದ ಸುಸ್ಥಿರತೆಗೆ ಧಕ್ಕೆ ಬರುವಂತಿದ್ದರೆ ಮನುಷ್ಯನ ಒಳಿತಿಗೆ ಕುತ್ತು ಖಂಡಿತ ಎಂದು ಪರಿಸರವಾದಿಗಳು ಹೇಳುತ್ತಲೇ ಇದ್ದಾರೆ. ಮನುಷ್ಯನ ಪ್ರತಿ ಹೆಜ್ಜೆಗಳು ಪರಿಸರದ ಆಶ್ರಯದೊಂದಿಗೇ ಹೋಗುತ್ತವೆ. ಪರಿಸರ ಉಳಿಸುವಲ್ಲಿ ಪ್ರಾಯೋಗಿಕ ಮಾದರಿಗಳೊಂದಿಗೆ ಯಶಸ್ವಿಯಾಗಿ ನಮ್ಮೆದುರು ನಿಲ್ಲುವ ಬರಹಗಳು ಇಡಿ ನಿಯತಕಾಲಿಕದ ಜೀವಾಳವಾಗಿವೆ. ಮನುಷ್ಯನ ಜೀವನ, ಮಣ್ಣಿನ ಸತ್ವ, ಪ್ರಾಣಿಗಳ ಕೂಗು, ನೀರಿನ ಶುದ್ಧತೆ, ಮರಗಳ ಕೂಗು, ಜೀವಜಂತುಗಳ ಜೀವನ ಶೈಲಿ ಎಲ್ಲವೂ ಅವಲಂಬಿತ. ಈ ಪರಿಸರ ಕೇವಲ ಮಾನವನ ಬಳಕೆಗಳಲ್ಲ. ಎಲ್ಲ ಜೀವ ವೈವಿಧ್ಯಕ್ಕೂ ಪರಿಸರದ ಮೇಲೆ ಸಮಾನ ಹಕ್ಕಿದೆ. ಪರಿಸರದ ಸಮಾನ ಹಂಚಿಕೆ ಆಗಬೇಕಾದದ್ದು ಮುಖ್ಯ. ಆಗ ಈ ಪರಿಸರ ನಾಶ ಮಾನವನಿಂದ ಕಡಿಮೆ ಆಗಿ ಪರಿಸರದೊಂದಿಗಿನ ಜೀವಿಗಳಿಗೆ ಪರಿಸರ ದಕ್ಕುತ್ತದೆ ಹಾಗೂ ಪರಿಸರ ಉಳಿಯುತ್ತದೆ. ಈ ನಿಟ್ಟಿನಲ್ಲಿ ಶಿವಾನಂದ ಕಳವೆಯವರ ಪರಿಸರ ಕಾಳಜಿ ಅಂಕಣವು ಮುಂದಿನ ಪೀಳಿಗೆಯನ್ನು ಕೇಂದ್ರೀಕರಿಸಿಕೊಂಡು ಹಾಗೂ ಪ್ರಸ್ತುತ ಮಾನವನ ಸುಸ್ಥಿರತೆಯನ್ನು ಕಂಡುಕೊಳ್ಳಲು ವ್ಯವಸ್ಥಿತ ಮಾದರಿಗಳನ್ನು ರೂಪಿಸಿಕೊಡುವ ನಿಟ್ಟಿನಲ್ಲಿ ಹಸಿರುವಾಸಿ ಪತ್ರಿಕೆಯು ಪೂರ್ಣಪ್ರಮಾಣದಲ್ಲಿ ಕಾರ್ಯೋನ್ಮುಖವಾಗಿದೆ ಎಂಬುದು ಪ್ರತಿ ಸಂಚಿಕೆಯ ಬರಹಗಳಿಂದಲೇ ಸತ್ಯವಾಗುತ್ತದೆ.

ಕನ್ನಡ ನಾಡಿನ ಹಿರಿಯ ಕೃಷಿ–ಪರಿಸರ ಬರಹಗಾರ ಶ್ರೀಪಡ್ರೆಯವರ ಬರಹ ಸಂಚಿಕೆಗೆ ಭೂಷಣವಾಗಿದೆ. ದಿನದಿಂದ ದಿನಕ್ಕೆ ಪರಿಸರ ನಾಶದ ಪ್ರಮಾಣ ಹೆಚ್ಚಾದಂತೆ ನೈಸರ್ಗಿಕ ಅಸಮತೋಲನ ಹೆಚ್ಚಾಗಿ ಕ್ರಮೇಣ ಮಳೆ ಪ್ರಮಾಣ ಕಡಿಮೆಯಾಗುತ್ತದೆ ಎಂಬುದು ಗೊತ್ತಿರುವ ವಿಚಾರವೇ. ಆದರೆ ಗೊತ್ತಿರುವ ವಿಚಾರವನ್ನು ವಿಳಂಬ ನೀತಿಯನ್ನು ಅನುಸರಿಸಿ ಯಾರಿಗೂ ನೀರಿಲ್ಲದಂತೆ ವಸುಂಧರೆಯ ಗರ್ಭವನ್ನು ಹೀರಿ ಹೀರಿ ಬರಡಾಗುತ್ತಿದೆ. ನೀರಿನ ಮಿತ ಬಳಕೆಯಿಂದ ಅಂತರ್ಜಲ ಮಟ್ಟವನ್ನು ಕಾಯ್ದು ಕೊಳ್ಳುವುದು ಹೇಗೆ ಎಂಬುದನ್ನು ಶ್ರೀಪಡ್ರೆಯವರು ವಿಸ್ತರಿಸುತ್ತಾರೆ.

ಮುಂದಿನ ಪುಟಗಳಲ್ಲಿ 'ಮೇಘಮೇದಿನಿ'ಯಾಗಿ ಸಂಪಾದಕೀಯ ಬರೆಯುವ ಹಸಿರುವಾಸಿಯ ಸಂಪಾದಕರಾದ ರಾಧಾಕೃಷ್ಣ ಭಡ್ತಿಯವರು ತಮ್ಮ ಮನದಾಳದ ಮತ್ತು ಹಸಿರುವಾಸಿಯ ಉಗಮವಾಗಲು ಕಾರಣವಾದ ಅಂಶಗಳನ್ನು ಅಕ್ಷರ ರೂಪಕ್ಕಿಳಿಸಿದ್ದಾರೆ. ಅವರಶೀರ್ಷಿಕೆಯೇ ಇಂದಿನ ಅಗತ್ಯತೆಯನ್ನು ಒತ್ತಿ ಹೇಳುತ್ತದೆ–'ಮತ್ತೊಂದು ಚಳುವಳಿಗೆ ಒಗ್ಗೂಡೋಣ...' ಕಾಡುಗಳಿಲ್ಲದ, ಕಾಡುಪ್ರಾಣಿಗಳಿಲ್ಲದ ಪರಿಸರವು ಸ್ಮಶಾನಕ್ಕಿಂತ ಭೀಕರವಾಗಿ ಕಾಣುತ್ತದೆ ಎಂಬ ಪೂಚಂತೇಯವರ ಹೇಳಿಕೆ ಉಲ್ಲೇಖಿಸಿ ಅವರು ಮುಂದುವರೆಯುತ್ತಾರೆ. ಪರಿಸರ, ಕೃಷಿ, ಜನಪದ, ಗ್ರಾಮ್ಯ ಚಿತ್ರಣಗಳಿಲ್ಲದ ಪತ್ರಿಕೆಯೂ ಸ್ಮಶಾನ. ದಿನದ ಬೆಳಗನ್ನು ಜಿಗುಪ್ಸೆ ಮೂಡುವಂತೆ ಮಾಡುವತ್ತ ದಿನಪತ್ರಿಕೆಗಳು ಹೊರಟಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಂಪಾದಕೀಯ 'ಮಣ್ಣು–ಮಸಿ'ಯ ಬರಹಗಳು

ಪರಿಸರದ ವಿಷಯದಲ್ಲಿ ಭಾರತದ ಪಕ್ಷಗಳ ಹಕೀಕತ್ತಾದರೂ ಏನು? ಭಾರತದ ಯಾವುದೇ ಚುನಾವಣೆಯಲ್ಲಿ ಮುಖ್ಯ ವಾಹಿನಿಯ ಪ್ರಚಾರ ವಿಷಯವಾಗಿ ನೆಲೆನಿಲ್ಲದ

ಪರಿಸರದ ವಿಷಯದಲ್ಲಿ ಆಡಳಿತಗಳ ಧೋರಣೆಯನ್ನು ಪ್ರಶ್ನಿಸುತ್ತಲೆ ಅವರ ಧೋರಣೆಯನ್ನು ಸಮಾಜದ ಮುನ್ನೆಲೆಯಲ್ಲಿ ಬಿಚ್ಚಿಡುವ ಅಗತ್ಯತೆಯನ್ನು ವಿವರಿಸುವ 'ಪಕ್ಷಗಳ ವಿರುದ್ಧ ಹಸಿರು ಜಾತಿ ಸಂಘಟಿತವಾಗಲಿ' ಎಂಬ ಸಂಪಾದಕೀಯ ವಿಶ್ವದ ವಿವಿಧ ರಾಷ್ಟ್ರಗಳ ಪರಿಸರ ನಿಲುವುಗಳನ್ನು ವಿವರಿಸುತ್ತಲೇ ಚುನಾವಣಾ ಪೂರ್ವ ಮತ್ತು ಚುನಾವಣೋತ್ತರ ನಿಲುವುಗಳಲ್ಲಿ ಆಗುವ ಬದಲಾವಣೆಗಳನ್ನು ಉದಾಹರಣೆಯೊಂದಿಗೆ ತೆರೆದಿಡುತ್ತದೆ.

ಇಲ್ಲಿಯವರೆಗೆ ಯಾವುದೇ ಪಕ್ಷ, ಯಾವುದೇ ನಾಯಕ ಕೇವಲ ಪರಿಸರ ಪರ ನಿಂತ ಉದಾಹರಣೆಗಳಿಲ್ಲ. ಈ ಸಂಪಾದಕೀಯಕ್ಕೆ ವರ್ಷಗಳೇ ಕಳೆದರೂ ವರ್ತಮಾನದಲ್ಲಿಯೂ ಪ್ರಸ್ತುತವಾಗಿ ನಿಲ್ಲುವ ಘಟ್ಟಿತನ ಇದಕ್ಕಿದೆ. ವಿಶ್ವದ ಎಲ್ಲ ನಾಯಕರೂ ಸೇರಿ ಜಾಗತಿಕ ತಾಪಮಾನ ಇಳಿಕೆಯ ಕುರಿತು ಶೃಂಗಸಭೆಯನ್ನೇನೋ ನಡೆಸುತ್ತಾರೆ. ಆದರೆ ಪ್ರತಿಯೊಬ್ಬ ಮಹೋನ್ನತ ನಾಯಕನೂ ಖಾಸಗಿ ಜೆಟ್ ವಿಮಾನದಲ್ಲಿ ಬಂದಿಳಿಯುತ್ತಾನೆ. ಇದೇ ಏನು ನಿಮ್ಮ ಪರಿಸರ ಪ್ರಜ್ಞೆ? ಎಂದು ಪ್ರಶ್ನಿಸುತ್ತಿರುವ ಚಿಕ್ಕ ಬಾಲೆ ಗ್ರೆಟಾ ಥನ್‌ಬರ್ಗ್ ಇಂದು ಮಾಧ್ಯಮಗಳ ಮೊದಲ ಪುಟದಲ್ಲಿ ಸ್ಥಾನ ಗಿಟ್ಟಿಸುತ್ತಿರುವ ಹೊತ್ತಲ್ಲಿ ಸಂಪಾದಕೀಯಗಳು ಮತ್ತೆ ಮತ್ತೆ ಮುನ್ನೆಲೆಗೆ ಬರುವಂತಿವೆ.

ಸರಕಾರಗಳು ಬದಲಾಗುತ್ತಿರುತ್ತವೆ. ಆಡಳಿತಾರೂಢ ನಾಯಕರೂ ಸಹ ಬದಲಾಗುತ್ತಾರೆ. ಮುಖಂಡತ್ವ, ಮತದಾನ ಮಾಡುವ ಜನಸಮೂಹ ಎಲ್ಲವೂ ಕಾಲಾಂತರದಲ್ಲಿ ಬದಲಾವಣೆಯ ಪ್ರವಾಹದಲ್ಲಿ ಸಾಗುತ್ತಲೇ ಇರುತ್ತವೆ. ಪರಿಸರದ ವಿಷಯ ಬಂದಾಗ ಮಾತ್ರ ದೃಢವಾಗಿ ಪರವಾಗಿ ನಿಲುವು ತಾಳುವ ಓರ್ವ ಪ್ರಭಾವಿ ನಾಯಕನೂ ಕಾಣುವುದಿಲ್ಲ. ಇದೇ ಪ್ರಜಾಪ್ರಭುತ್ವಕ್ಕಿರುವ ಅರ್ಥವೇ? ಎಂಬ ಭಾವಾರ್ಥದೊಂದಿಗೆ ಮುಗಿಯುವ ಸಂಪಾದಕೀಯಗಳು ಯಾವುದೇ ವರ್ತಮಾನದಲ್ಲಿಯೂ ಪ್ರಸ್ತುತವೇ ಸರಿ.

ಉಪಸಂಹಾರ

ಇತ್ತೀಚಿನ ಸಾಮಾಜಿಕ ಮಾಧ್ಯಮಗಳ ಭರಾಟೆಯಲ್ಲಿ ಓದುಗರಿಗೆ ಒದಗಿಬರುತ್ತಿರುವ ನಿರಪೇಕ್ಷಿತ ಕೇವಲ ಸಮಯ ಕೊಲ್ಲುವ ಕಂಟೆಂಟುಗಳ ನಡುವೆ ಹಸಿರುವಾಸಿಯು ನವ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮಗಳ ಬಳಕೆದಾರರಲ್ಲಿ ಸೃಜನಶೀಲ ಚಿಂತನೆಯನ್ನು ಹೊತ್ತಿಸುವಲ್ಲಿ ಮತ್ತು ಹೆಚ್ಚಿಸುವಲ್ಲಿ ನಿರತವಾಗಿದೆ. ಕೋವಿಡ್–19ರ ಸಂದರ್ಭದಲ್ಲಿ ಕೃಷಿಗೆ ಮರಳಿದ ಯುವಜನರ ಕುರಿತ ಕಂಟೆಂಟುಗಳ ಪ್ರಮಾಣವನ್ನು ಇಲ್ಲಿ ಒತ್ತಿ ಹೇಳಲೇಬೇಕು.

ಲಾಕ್‌ಡೌನ್ ವಿಧಿಸಿದ ಕಟ್ಟಳೆಗಳಿಂದ ಚಿಂತಾಕ್ರಾಂತರಾದ ಪಟ್ಟಣ ಸೇರಿದ್ದ ಯುವಪಡೆ ಮರಳಿ ಗೂಡು ಸೇರಿದ ಕಥೆಗಳನ್ನು, ಅವರು ಕೈಗೊಂಡ ಪ್ರಯೋಗಗಳನ್ನು ಹಸಿರುವಾಸಿ ವೆಬ್‌ಸೈಟ್ ವಿವರಿಸಿದ ಪರಿ ಅನನ್ಯ. ಸದಾಕಾಲ ಮೊಬೈಲಿನಲ್ಲಿ ಮುಳುಗಿದ್ದ ಕೋವಿಡ್ ಕಾಲದಲ್ಲಿ ಪರಿಸರ ಪರ ಕಂಟೆಂಟುಗಳನ್ನು ಒದಗಿಸಿದ ಹಸಿರುವಾಸಿ ತನ್ನ ವಿಸ್ತಾರವನ್ನು ಡಿಜಿಟಲ್ ಪೀಳಿಗೆಗೆ ಸಹಜವಾಗಿ ಹೆಚ್ಚಿಸಿಕೊಂಡಿದೆ.

ಅಡಿಟಿಪ್ಪಣಿಗಳು

1. ಸಹಾಯಕ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಎಸ್.ಡಿ.ಎಂ ಕಾಲೇಜು, ಉಜಿರೆ.
2. ಸಹ ಪ್ರಾಧ್ಯಾಪಕರು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

ಗ್ರಂಥಋಣ

1. ಹೊಸ್ತೋಟ ಮಂಜುನಾಥ ಭಟ್ಟ (1989), ನಿಸರ್ಗ ಸಂಧಾನ, ಸಹ್ಯಾದ್ರಿ ಪರಿಸರವರ್ಧಿನಿ, ಎಡಹಳ್ಳಿ ಶಿರಸಿ.
2. ನಾಗೇಶ ಹೆಗಡೆ (1988), ಇರುವುದೊಂದೇ ಭೂಮಿ, ಅಭಿವೃದ್ಧಿಯ ಅಂಧಯುಗ.
3. ಮೇಧಾ ರಾಮಕುಂಜ (2019), ಡಾ. ನರೇಂದ್ರ ರೈ ದೇರ್ಲ ಅವರ ಬರಹಗಳಲ್ಲಿ ಪರಿಸರ ಪ್ರಜ್ಞೆ.
4. ಸುಶ್ಮಾ ಉಪ್ಪಿನ್ (2017), ಶಿವಾನಂದ ಕಳವೆಯವರ ಬರಹಗಳಲ್ಲಿನ ಅಭಿವೃದ್ಧಿಪರ ಚಿಂತನೆಗಳು – ಒಂದು ಅಧ್ಯಯನ.
5. ಗುರುಗಣೇಶ್ ಭಟ್ (2020), ಕನ್ನಡ ಪತ್ರಿಕೋದ್ಯಮದಲ್ಲಿ ಹಸಿರುವಾಸಿ ನಿಯತಕಾಲಿಕೆ ತೆರೆದಿಟ್ಟ ಹೊಸ ಸಾಧ್ಯತೆಗಳು, ಸಂಪ್ರಬಂಧ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಎಸ್.ಡಿ.ಎಂ ಕಾಲೇಜು, ಉಜಿರೆ.
6. ಹಸಿರುವಾಸಿ ಪತ್ರಿಕೆಯ ವಿವಿಧ ಸಂಚಿಕೆಗಳು ಮತ್ತು www.hasiruvasi.com

✠✠✠

ನೆರಳದು ಬೇರಲ್ಲ
ಅದು ಬೆಳಕಿದ್ದರೆ ಮಾತ್ರ
ಇರುಳದು ಬೇರಿಲ್ಲ
ಅದು ಹಗಲಿದ್ದರೆ ಮಾತ್ರ

ಹಾಸ್ಯ ಪರ್ಯಂಚ

ರೇಶ್ಮಾ ಭಟ್

(ಅಖಿಲ ಭಾರತ ಸಾಹಿತ್ಯ ಪರಿಷತ್ ನಡೆಸಿದ ವೆಬಿನಾರೊಂದರಲ್ಲಿ ನೀಡಿದ ಉಪನ್ಯಾಸದ ಬರಹರೂಪ)

ಮನುಷ್ಯನ ಭಾವ ಪ್ರಪಂಚ ತುಂಬಾ ವಿಶಾಲವಾದುದು. ಅಲ್ಲಿ ಅನೇಕ ಭಾವಗಳ ಮೇಳ ನೆರೆದಿರುತ್ತದೆ. ಜೀವನದ ನಾನಾ ಸಂದರ್ಭಗಳಲ್ಲಿ ಆ ಭಾವಗಳು ಸಂದರ್ಭಕ್ಕೆ ತಕ್ಕಂತೆ ತಮ್ಮ ಪಾತ್ರ ನಿರ್ವಹಿಸುತ್ತವೆ. ಅಳು, ನಗು ಪ್ರೀತಿ ಮಮತೆ ಕೋಪ, ಮತ್ಸರ, ದ್ವೇಷ ಈ ರೀತಿ ಅಸಂಖ್ಯ ಭಾವಗಳು ನಮ್ಮನ್ನು ಆವರಿಸಿಕೊಂಡಿರುತ್ತವೆ. ನಿದ್ರಾವಸ್ಥೆಯಲ್ಲೂ ಶಾಂತಶಮಭಾವವೊಂದು ನಮ್ಮಲ್ಲಿರುತ್ತದೆ ಎಂದಾದರೆ ಜೀವಂತ ಮನುಷ್ಯ ಈ ಭಾವಗಳ ಸಾಹಚರ್ಯದಲ್ಲೇ ಬದುಕುತ್ತಾನೆ ಎಂದಾಯ್ತು. ಭರತ ತನ್ನ ನಾಟ್ಯಶಾಸ್ತ್ರದಲ್ಲಿ ರಸ, ಭಾವಗಳನ್ನು ಹೇಳಿದ್ದರೆ ಅದು ಕಾವ್ಯ ನಾಟಕಗಳಿಗೆ ಸಂಬಂಧಿಸಿದುದು. ಯಾರೋ ಒಬ್ಬ ದಾರಿಹೋಕ ಕಾಲುಜಾರಿ ಬಿದ್ದದ್ದನ್ನು ನೋಡುವಾಗ ನಮ್ಮಲ್ಲಿ ನಗು ಉಕ್ಕಬಹುದು. ಅದು ಅವನು ಬಿದ್ದ ರೀತಿ, ಬೀಳುವಾಗ ಆತನ ಮುಖ ಭಾವ ಇತ್ಯಾದಿಗಳಿಂದ. ಆದರೆ ಬಿದ್ದು ಆತನ ಕಾಲು ಮುರಿದಿದೆ ಅಂತ ಗೊತ್ತಾದ ಕೂಡಲೆ ಈ ಹಾಸಭಾವ ಕರಗಿ ವಿಷಾದಭಾವ ಮೂಡಬಹುದು. ಅಯ್ಯೋ ನೋವಲ್ಲಿರುವವನನ್ನು ನೋಡಿ ನಕ್ಕೆನಲ್ಲ ಎನ್ನುವ ಪಶ್ಚಾತಾಪವೂ ನಮ್ಮಲ್ಲಿ ಮೊಳೆಯಬಹುದು.

ನಗುವಿನ ಬಗ್ಗೆ, ಆ ನಗುವನ್ನು ಉಕ್ಕಿಸುವ ಹಾಸ್ಯದ ಬಗೆಗೆ ಅನೇಕರು ಅನೇಕ ವ್ಯಾಖ್ಯಾನಗಳನ್ನು ಕೊಟ್ಟಿದ್ದರೂ ಎಲ್ಲರಿಗೂ ಗೊತ್ತಿರುವ ಒಂದು ಸತ್ಯವೆಂದರೆ ಹಾಸ್ಯದ ಮೀಮಾಂಸೆ ಕಠಿಣ ಎಂಬುದು. 'ಹಾಸ್ಯ ಎಂದರೇನು?'ಎಂಬ ಪ್ರಶ್ನೆಗೆ 'ಚಳಿ ಎಂದರೇನು?' ಎಂದು ಕೇಳಿದಾಗ ಉತ್ತರಿಸಲು ಆಗುವಷ್ಟೇ ಗಲಿಬಿಲಿ ಆಗುತ್ತದೆ. ಅದು ಮನಸ್ಸಿಗೆ ಮಾತ್ರ ವೇದ್ಯವಾಗುವ ಒಂದು ಅಮೂರ್ತ ಅನುಭವ ಎಂದು ಮಾತ್ರ ಹೇಳಬಹುದು. ಆದರೆ ಒಂದಂತೂ ಸತ್ಯ ಅದೆಂದರೆ ಹಾಸ್ಯ ಮಾನವನ ಸಹಜ ಗುಣ, ಇದು ಯಾವುದೋ ಒಂದು ದೇಶಕ್ಕೆ ಅಥವಾ ಒಂದು ಜನಾಂಗಕ್ಕೆ ಸೀಮಿತವಾದುದಲ್ಲ; ಸಾರ್ವತ್ರಿಕವಾದುದು ಎಂಬುದು. ಡಿವಿಜಿಯವರ ಪ್ರಕಾರ "ನಗುವು ಸಹಜದ ಧರ್ಮ (ತೊಟ್ಟಿಲ ಮಗುವೂ ನಗುತ್ತದೆ), ನಗಿಸುವುದು ಪರಧರ್ಮ, ನಗುವ ಕೇಳುತ ನಗುವುದತಿಶಯದ ಧರ್ಮ, (ಮಾನವ ಸಂಘಜೀವಿಯಾದ್ದರಿಂದ ಇದೂ ಸಹಜವಾದುದೇ) ನಗುವ ನಗಿಸುವ ನಗಿಸಿ ನಗುತ ಬಾಳುವ ವರವ ಮಿಗೆ ನೀನು ಬೇಡಿಕೊಳೋ ಮಂಕುತಿಮ್ಮ" ಬದುಕಿನ ಬವಣೆಗಳನ್ನು ಎದುರಿಸುವ ಶಕ್ತಿಯನ್ನು ನಗು ನೀಡುವುದರಿಂದ ಅದನ್ನೇ ಬೇಡಿಕೊಳಬೇಕಾದುದು. ಒಟ್ಟಾರೆಯಾಗಿ ನಗು ಮುಖದ ಸೌಂದರ್ಯವನ್ನು ಮಾತ್ರವಲ್ಲದೆ ಜೀವನ ಸೌಂದರ್ಯವನ್ನೂ ಹೆಚ್ಚಿಸುತ್ತದೆ ಎಂಬುದು ಇದರ ತಾತ್ಪರ್ಯ.

'ಮ್ಯಾನ್ ಈಸ್ ದ ಓನ್ಲಿ ಆನಿಮಲ್ ದಟ್ ಲಾಫ್ಸ್ ಆ್ಯಂಡ್ ವೀಪ್ಸ್' ಎಂಬುದು ವಿಲಿಯಂ ಹೆಜ್‌ಲಿಟ್ಟನ ಮಾತು.ಇದೇ ಕಾರಣಕ್ಕೆ ಮನುಷ್ಯ ಈ ಭೂಮಿಯ ಮೇಲಿನ ಶ್ರೇಷ್ಠ ಪ್ರಾಣಿ ಎಂದು ಅನ್ನಿಸಿಕೊಂಡಿದ್ದಾನೆ. ರಾಶಿಯವರ ಈ ಮಾತುಗಳನ್ನು ಕೇಳಿ ನಗದವರು

ಯಾರಿದ್ದಾರೆ ಹೇಳಿ? ವ್ಯಾಘ್ರ ಚರ್ಮದ ಮೇಲೆ ಕೂತುಕೊಂಡರೆ ಭಗವಂತನ ಧ್ಯಾನ ತಂತಾನೆ ಮೂಡುತ್ತದೆ ಎಂಬ ಯೋಗಗುರುವಿನ ಮಾತಿಗೆ ಉತ್ತರವಾಗಿ, 'ವ್ಯಾಘ್ರಗಳಿಗೂ ಭಗವಂತನ ಧ್ಯಾನ ತಂತಾನೆ ಮೂಡಬಹುದು' ಎಂದು ಸಾಮಾನ್ಯ ಮನುಷ್ಯನೊಬ್ಬ ಉತ್ತರಿಸುತ್ತಾನೆ. ಈ ರೀತಿಯ ಹಾಸ್ಯ ಸತ್ಯವನ್ನು ವಿಕೃತಗೊಳಿಸದೆ, ಅದನ್ನು ಮರೆಯಲ್ಲಿಟ್ಟು ನೋಡುವ ಒಂದು ವಿಶೇಷವಾದ ದೃಷ್ಟಿ ಎಂದು ಹೇಳಬಹುದು. ಒಂದು ಸಂಸ್ಕೃತ ಸುಭಾಷಿತದ ಕನ್ನಡ ಅನುವಾದ ಹೀಗಿದೆ.

ಗರ್ಭಸ್ಥನಿದ್ದ ಸರಕಾರಿ ಗುಮಾಸ್ತ
ತಾಯ ಕರುಳನ್ನೇ ತಾನೇಕೆ ತಿನಲಿಲ್ಲ?
ಅದಕ್ಕೆ ಕಾರಣ ನಿರಾಮಿಶದ ವೃತವಲ್ಲ
ಪಾಪ! ಆತನಿಗಾಗ ಹಲ್ಲೇ ಇರಲಿಲ್ಲ.

ಇದನ್ನು ಇಷ್ಟು ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದವರು ಪಾ.ವೆಂ. ಆಚಾರ್ಯರು. ಸರಕಾರಿ ವಲಯದಲ್ಲಿ ಭ್ರಷ್ಟಾಚಾರವೆಂಬುದು ಯಾವ ಮಟ್ಟದಲ್ಲಿ ಇರುತ್ತದೆ ಎಂಬ ಗಂಭೀರತೆಯನ್ನು ಹಾಸ್ಯದ ಮೂಲಕ ಇದು ಅರಿವಿಗೆ ತಂದುಕೊಡುತ್ತದೆ.

ವಿಡಂಬನಕಾರ ಯಾವತ್ತೂ ಜಗತ್ತನ್ನು ಗಂಭೀರವಾಗಿಯೇ ನೋಡುತ್ತಾನೆ ಹೊರತು ಸಿನಿಕತನದಿಂದಲ್ಲ. ಸಿನಿಕನಾದವನ ಬಾಯಿಯಿಂದ ಬರಿಯ ಗೊಣಗುವಿಕೆ ಮಾತ್ರ ಹೊರಟೀತಲ್ಲದೆ ಹಾಸ್ಯ ಹೊರಡಲಾರದು. ದೊಡ್ಡ ದೊಡ್ಡ ವಿಚಾರಗಳನ್ನೂ ಪುಟ್ಟ ಪುಟ್ಟ ಹನಿಗಳ ಮೂಲಕ ಕೊಡಬಹುದು ಎಂಬುದಕ್ಕೆ ಡುಂಡಿರಾಜರ ಈ ಹನಿ ಸಾಕ್ಷಿ.

ದಲಿತೋದ್ಧಾರ ಕಾರ್ಯಕ್ರಮವನ್ನು
ಸನ್ಮಾನ್ಯ ಸಚಿವರು
ದೀಪ ಬೆಳಗಿಸಿ
ಉದ್ಘಾಟಿಸಿದರು.
ಕೊನೆಯಲ್ಲಿ
ಸ್ಥಳೀಯ ಶಾಸಕರು
ನಂದಿಸಿದರು.

ಇಲ್ಲಿ, ವಂದಿಸಿದರು ಬದಲಿಗೆ ನಂದಿಸಿದರು ಬಂದು ಅದ್ಭುತವಾದ ಧ್ವನಿಯನ್ನು ಹೊರಡಿಸಲು ಸಾಧ್ಯವಾಗಿದೆ.

ಜಗತ್ತನ್ನು ತನ್ನನ್ನು ಸೇರಿಸಿಕೊಂಡೇ ವಿಡಂಬಿಸುವುದು ವಿಡಂಬನಕಾರನ ದೃಷ್ಟಿ. ತಾನು ದೂರ ನಿಂತು ಅಲ್ಲ. ಪತ್ರಕರ್ತರಾಗಿದ್ದ ವಂಡರ್‌ಕಣ್ಣಿನ ವೈಎನ್ಕೆಯವರು ಓದುಗರಿಗೆ ತಮ್ಮ ವಿಡಂಬನೆಯ ಮೂಲಕ ಕಿಕ್ ಕೊಟ್ಟು ನಗಿಸುತ್ತಿದ್ದುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಅವರು ರಾತ್ರಿ ಸ್ನೇಹಿತರ ಜೊತೆ ಸೇರಿ ಕಿಕ್ಕೇರಿಸಿ ಚಾರ್ಜ್ ಆಗುತ್ತಿದ್ದುದೂ ಎಲ್ಲರಿಗೂ ಗೊತ್ತಿದ್ದ ಸತ್ಯವೇ. ಆ ಸಮಯವನ್ನು ಅವರು ಪಿಹೆಚ್‌ಡಿ ಎಂದು ತಮಾಷೆಗಾಗಿ ಕರೆಯುತ್ತಿದ್ದರಂತೆ. ಅಂದರೆ 'ಪ್ರೆಶಿಯಸ್ಸ್ ಅವರ್ ಆಫ್ ಡ್ರಿಂಕಿಂಗ್' ಎಂದು.

ಆರೋಗ್ಯಕರ ಹಾಸ್ಯ ಎಂಬ ಮಾತಿದೆ. ಅಶ್ಲೀಲವಲ್ಲದೆ, ಯಾರ ಮನಸ್ಸನ್ನೂ ನೋಯಿಸದೆ ಮನೆ ಮಂದಿಯೆಲ್ಲ ಒಟ್ಟಿಗೆ ನಗಬಹುದಾದ ರೀತಿಯದು. ಡುಂಡಿರಾಜರ ಒಂದು ಹನಿ ನೋಡಿ,

ಪತಿಯ ಕುಡಿತಕ್ಕೆ ಸತಿಯ ವಿರೋಧ

ಇದ್ದದ್ದೇ ಬಿಡಿ ಹೊಸತಲ್ಲ
ಶಿವ ಹಾಲಾಹಲ ಕುಡಿಯಲು ಹೋದ
ಪಾರ್ವತಿ ಬಿಡಲಿಲ್ಲ.

ಪಾವೆಂ ಅವರು ಕನ್ನಡಕ್ಕೆ ಅನುವಾದಿಸಿದ ಇನ್ನೊಂದು ಸಂಸ್ಕೃತ ಸುಭಾಷಿತ ನೋಡಿ:

ಹರಿ ಬಂದನೆಂದು ಗಡಬಡಿಸಿ ಹರನು
ಉಡಿದಾರ ಬಿಗಿದು ಹಾವ
ಕರಿಚರ್ಮದಿಂದ ಲಂಗೋಟಿ ಹಾಕಿ
ಎದುರೆದ್ದು ಬಂದ ಆಗ
ಹರಿವಾಹನವನು ಕಂಡಂಜಿ ತತ್ತರಿಸಿ
ಬಿತ್ತು ಹಾವು ನೆಲಕೆ
ಕಳಚಿತ್ತು ಚರ್ಮ, ಹರನಾದ ನಗ್ನಃ
ದಯೆಗೈಯಲವನು ನಿಮಗೆ.

ಈ ರೀತಿ ಮಾನವನ ಹಾಸ್ಯಪ್ರಜ್ಞೆಗೆ ದೇವತೆಗಳೂ ಬಲಿಯಾದುದನ್ನು ಕಾಣಬಹುದು. ನಮ್ಮ ಜೀವನಪದ್ಧತಿ ಇಂಥ ಮುಕ್ತ ಸ್ವಾತಂತ್ರ್ಯವನ್ನು ನಮಗೆ ಕೊಟ್ಟಿದೆ. ಪಾವೆಂ ಅವರು ಅನುವಾದಿಸಿದ ಇನ್ನೊಂದು ಸುಭಾಷಿತವನ್ನು ನೋಡಿ,

ಲಕ್ಷ್ಮಿ ಮಲಗುವಳು ತಾವರೆಯಲ್ಲಿ
ಹರ ಮಲಗುವ ತಾ ಹಿಮಗಿರಿಯಲ್ಲಿ
ಹಾಲುಗಡಲಿನಲಿ ಮಲಗುವನು ಹರಿ
ಯಾಕೆಂದರೆ ತಗಣೆಗಳಿಗೆ ಹೆದರಿ.

ಹೀಗೆ, ಹಾಸ್ಯದ ಸಾಧ್ಯತೆಗಳ ಬಗ್ಗೆ ಚರ್ಚಿಸುವಾಗ ಅಧ್ಯಯನದ ಅನುಕೂಲಕ್ಕಾಗಿ ನಾವು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಇತ್ಯಾದಿ ವಿಭಾಗಗಳನ್ನು ಮಾಡಿಕೊಂಡರೂ ಹಾಸ್ಯ ಎಂಬುದು ಸಾರ್ವತ್ರಿಕ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಎಲ್ಲವು ಒಂದರೊಳಗೊಂದು ಮಿಳಿತವಾಗಿ ಹಾಸ್ಯ ಹುಟ್ಟುತ್ತದೆ. 1959ರಲ್ಲಿ ಪ್ರಕಟವಾದ ಎಂ.ಎಸ್.ಪುಟ್ಟಣ್ಣನವರ 'ಅವರಿಲ್ಲದೂಟ' ಎಂಬ ಕಾದಂಬರಿಯಲ್ಲಿ ನಾಗಮ್ಮ ಎಂಬ ಪಾತ್ರ ತನ್ನ ಗಂಡನ ಗೈರುಹಾಜರಿಯಲ್ಲಿ ಮಾಡಿಕೊಂಡ ಅಡಿಗೆಯ ವರ್ಣನೆಯ ಒಂದು ತುಣುಕು ಇಲ್ಲಿದೆ.

'...ಏನೋ ಅವರಿಲ್ಲದೂಟ.ಮಾಡದೆ ಇದ್ದರೆ ತೀರದು ನೋಡಿ, ಮನೆಯಲ್ಲಿ ಹಳೇ ಸಣ್ಣಕ್ಕಿ ಯಾತಕ್ಕಾದರು ಇರಲಿ ಎಂದು ಇರಿಸಿದ್ದೆ, ಅದನ್ನು ತೆಗೆದು ಒಲೆಯಲ್ಲಿ ಅಷ್ಟು ಮಾಡಲಿಟ್ಟೆ. ಎಸರನ್ನು ಯಾರು ಬೇರೆ ಮಾಡಿಕೊಂಡಾರು? ಏನೋ ಅವರಿಲ್ಲದೂಟ. ಮನೆಯಲ್ಲಿ ಎಲ್ಲೋ ಒಂದು ಮಡಿಕೆಯಲ್ಲಿ ಮಾಡಿದ ಬಿಳಿ ಹೆಸರುಬೇಳೆ ಇತ್ತು. ಅದನ್ನು ಅಷ್ಟು ತೆಗೆದು ಅನ್ನದ ಬೋಸಿಗೆ ಹಾಕಿದೆ... ಅದಕ್ಕೆ ಅಷ್ಟು ಜೀರಿಗೆ ನಾಲ್ಕು ಕಾಳು ಮೆಣಸು ಸ್ವಲ್ಪ ಉಪ್ಪು ಸಟಿಗೆ ಅರಿಸಿನ ಹಾಕಿ ಇಂಗಿನ ನೀರ ಸೋಕಿಸಿದೆ, ಇವತ್ತೇ ಮೊಸರು ಕಡೆದು ಬಂದ ಬೆಂಣೆ ತಕ್ಕಮಟ್ಟಿಗೆ ಕಿತ್ತಳೆಕಾಯಿ ತೋರ ಇತ್ತು. ಅದನು ಏನು ಮಾಡುವುದು? ಅವರಿದ್ದರೆ ಅದನ್ನು ಕರಗಿಸಿ ಕಂಡ ಹಾಗೆಯೇ ಪೂರ್ತಿಯಾಗಿ ಒಂದು ಮಿಳ್ಳೆ ತುಪ್ಪ ಅವರಿಗೆ ಹಾಕಿ, ಅಷ್ಟೋ ಇಷ್ಟೋ ಮಿಕ್ಕಿದ್ದನ್ನು ನಾನು ಹನಿಕಿಸಿಕೊಳ್ಳಬಹುದಾಗಿತ್ತು. ಅವರಿಲ್ಲದೂಟ, ಇನ್ನು ಆ ವಿಜೃಂಭಣೆ ಏನು ಹೇಳ್ಲಿ? ಏನೋ ಹೇಗಾದರೂ ಆಗಲಿ ಅಂತ ಆ ಬೆಂಣೆಯನ್ನು ಬೋಸಿಯಲ್ಲಿ ಕುದಿಯುತ್ತಾ ಇದ್ದ ಅನ್ನದ ಮೇಲೆ ಇರಿಸಿಬಿಟ್ಟೆ. ಅದೆಲ್ಲ

ಕರಗಿ ಒಳಕ್ಕೆ ಇಳಿದುಕೊಂಡಿತ್ತು. ಅನ್ನವೆಲ್ಲ ಹುಗ್ಗಿಯ ಹಾಗಾಯ್ತು... ಅವರಿಲ್ಲದೂಟ. ಸ್ವಲ್ಪ ಸ್ವಲ್ಪವಾಗಿ ಬಾಯಿಗೆ ಗಿಡಿಚಿಕೊಂಡೆ, ಕರೆದ ಹಾಲು ಕಾಯಿಸಿ ಇರಿಸಿತ್ತು. ಹಾಗೆಯೇ ಇಟ್ಟರೆ ಕೆಟ್ಟು ಹೋಗುತ್ತೆ. ಆದ್ದರಿಂದ ಅದಕ್ಕೆ ಅಷ್ಟು ಕಲ್ಲುಸಕ್ಕರೆ ಹುಡಿಮಾಡಿ ಹಾಕಿ ಬಾಯಿಗೆ ಬಸಕೊಂಡೆ. ಏನೋ ಅವರಿಲ್ಲದೂಟ. ಏನು ಹಿತವಾಗಿದ್ದೀತು ಹೇಳಿ.' ಒಂದು ಕಾದಂಬರಿಯಲ್ಲಿ ಹಾಸ್ಯವನ್ನು ಹೇಗೆ ತರಬಹುದು ಎಂಬುದಕ್ಕೆ ಇದು ನಿದರ್ಶನ.

ಪದಚಮತ್ಕಾರಗಳು ಹಾಸ್ಯಕ್ಕೆ ಮೆರುಗು ತಂದುಕೊಡುತ್ತವೆ. ಈ ರೀತಿಯ ಪನ್‌ಗಳ ಮೂಲಕವೇ ಅಂಕಣವನ್ನೋ ಲೇಖನವನ್ನೋ ತುಂಬಿಸುವ ಲೇಖಕರಿದ್ದಾರೆ. ಅಂಥವರನ್ನು ಶ್ಲೇಷಾರ್ಥ ಪನ್ ಡಿತ ಎಂದು ತಮಾಷೆಗಾಗಿ ಹೇಳುವುದುಂಟು. ವೈಯೆನ್ಕೆಯವರ ಪ್ರಕಾರ ಲೆಫ್ಟ್ ಸೈಡ್, ರೈಟ್ ಸೈಡ್, ನೇರ ಹೋದರೆ ಸುಯ್‌ಸೈಡ್ ಎಂದೂ, ನಾಲ್ಕು ಸಾಲಿನ ಪದ್ಯ ಚೌಪದಿಯಾದರೆ, ಐದು ಸಾಲಿನದು ದ್ರೌಪದಿ ಎಂದೂ ಆಗುತ್ತಿತ್ತು.

ಕನ್ನಡಕೆ ಇಂಗ್ಲಿಶು ಕಿಂಚಿತ್ತು ಬೆರೆಸಲದು
ಸಿನ್ನುಗಳ ಲಿಷ್ಟಿನಲಿ ಹೈಯೆಸ್ಟು ಅದರಿಂದ
ಫನ್ನಿಗೂ ಮಿಕ್ಸದಿರು ಸರ್ವಜ್ಞ

ನಾ. ಕಸ್ತೂರಿಯವರ ಒಂದು ಚುಟುಕು. ಇಲ್ಲಿನ ಎಲ್ಲಾ ಇಂಗ್ಲಿಶ್ ಪದಗಳೂ ಸ್ವರಾಂತ್ಯವಾಗಿ ಕನ್ನಡೀಕರಣಗೊಂಡು ಇಂಗ್ಲಿಶ್ ಕನ್ನಡ ಮಿಶ್ರಣವನ್ನು ಲೇವಡಿ ಮಾಡುವ ಪದ್ಯವಾಗಿ ಸುಂದರವಾಗಿದೆ... ಕನ್ನಡ್ ಮೆ ಬೋಲೋ, ಟಾಕ್ ಕನ್ನಡ ಎಂದು ಇದನ್ನು ವೈಯೆನ್ಕೆಯವರು ತಮಾಷೆ ಮಾಡಿದ್ದನ್ನು ನೆನಪಿಸಿಕೊಳ್ಳಬಹುದು. ಪದ ಚಮತ್ಕಾರಗಳು ನಗುವನ್ನು ಉಕ್ಕಿಸುತ್ತವಾದರೂ ಲೇಖನದ ತುಂಬ ಅದೇ ತುಂಬಿಕೊಂಡಿರಬಾರದು.

ಹಾಸ್ಯ ಲೇಖನವು ದೊಡ್ಡ ದೊಡ್ಡ ಪದಗಳ ಗದ್ದಲದಿಂದ ದೂರವಿರಬೇಕು. ಪಾಂಡಿತ್ಯ ಪ್ರದರ್ಶನಕ್ಕೆ ಇಲ್ಲಿ ಅವಕಾಶವಿಲ್ಲ. ಘೋಷಣೆಗಳು, ಮೇಜು ಕುಟ್ಟುವಂತೆ ವಿಷಯ ಮಂಡಿಸುವ ಹಠ ಇಲ್ಲಿ ನಡೆಯಲಾರದು. ನಮ್ಮ ನಮ್ಮ ಸಿದ್ಧಾಂತಗಳನ್ನು ಮೂಟೆಕಟ್ಟಿ ಬದಿಯಲ್ಲಿರಿಸಿದರೆ ಒಳ್ಳೆಯ ಲೇಖನ ಮೂಡಲು ಸಾಧ್ಯ. ಹಾಸ್ಯ ಲೇಖಕನಿಗೆ ತನ್ನ ವ್ಯಕ್ತಿತ್ವವನ್ನು ಗೇಲಿ ಮಾಡಿಕೊಳ್ಳಲು ಇಲ್ಲಿ ವಿಫುಲವಾದ ಅವಕಾಶವಿದೆ. ಮೇಲರಿಮೆ ಇರುವವರಿಗೆ ಇದು ಸಾಧ್ಯವೇ? ಎಲ್ಲಾ ಸಾಹಿತ್ಯಕ್ಕೂ ಬೇಕಾಗುವ ಸಂವೇದನಾ ಸೂಕ್ಷ್ಮತೆ ಇಲ್ಲೂ ಬೇಕಾಗುತ್ತದೆ. ಉಪದೇಶದ ಬದಲು ಟೀಕೆಯಿದ್ದರೆ ಉತ್ತಮ. ಲೇಖಕನ ಧಿಮಾಕು, ಗತ್ತು, ಗೈರತ್ತು, ವೀರಾವೇಶಗಳು ಬರವಣಿಗೆಯಲ್ಲಿ ನುಸುಳಬಾರದು. ಸಮಾಜ ಸುಧಾರಣೆಯ ಹುಚ್ಚು ಅತಿಯಾಗಬಾರದು.

ಪರಿವರ್ತನೆ ಜಗದ ನಿಯಮ. ಈ ಪರಿವರ್ತನೆಯನ್ನು ವಿಸ್ಮಯದಿಂದ ನೋಡಿದರೆ ಹೊಸ ಹಾಸ್ಯ ಹುಟ್ಟಬಹುದು. ಉದಾಹರಣೆಗೆ ನನ್ನ 'ನವೆ ನವೋನ್ಮೇಷಶಾಲಿನೀ' ಎಂಬ ಸಂಕಲನದಲ್ಲಿರುವ 'ಯೂಟ್ಯೂಬ್ಯೋ ನಮಃ' ಲೇಖನದ ಒಂದು ತುಂಡನ್ನು ನೋಡಬಹುದು. '...ಆಚೆ ಬೀದಿಯ ಪದ್ಮಾಕ್ಷಮ್ಮನ ಮನೆಯಲ್ಲಿ ವರಮಹಾಲಕ್ಷ್ಮಿಯ ವ್ರತ ತುಂಬಾ ಅದ್ದೂರಿಯಾಗಿ ನಡೆಯುತ್ತದೆ. ಈ ಸಲವೂ ವ್ರತಕ್ಕೆ ನನ್ನನ್ನು ಕರೆಯಲು ಅರಶಿನ ಕುಂಕುಮ ಕರಡಿಗೆ ಹಿಡಿದುಕೊಂಡೇ ಬಂದಿದ್ದರು. "ಪ್ರತಿವರ್ಷ ಕಲಶ ಪ್ರತಿಷ್ಠೆ ಮಾಡಿ ಅದಕ್ಕೆ ಸೀರೆ ಉಡಿಸಿ ಎಷ್ಟೇ ಅಲಂಕಾರ ಮಾಡಿದ್ರೂ ಏನೋ ಚೆನ್ನಾಗಿಲ್ಲ ಅನ್ನಿಸ್ತಿತ್ತು ಕಣೇ. ಆದ್ರೆ ಈ ಸಲ 'ಹೌ ಟು ವೇರ್ ಸಾರಿ ಫಾರ್ ಗಾಡೆಸ್ ಲಕ್ಷ್ಮಿ' ಅಂತ ಯೂಟ್ಯೂಬ್ನಲ್ಲಿ ಒಂದು ವೀಡಿಯೋ ಇತ್ತು. ಮಗಳು ಡೌನ್ಲೋಡ್ ಮಾಡಿ ಕೊಟ್ಳು. ಅದರಲ್ಲಿ ಇದ್ದಂಗೇ ಮಾಡಿದ್ದೀನಿ.

ಎಷ್ಟು ಚೆನ್ನಾಗಿ ಬಂದಿದೆ ಗೊತ್ತಾ? ನೀನೇ ನೋಡುವಿಯಂತೆ, ಸಂಜೆ ಬರ್ತೀಯಲ್ಲ" ಎಂದು ಉತ್ಸಾಹದ ಬುಗ್ಗೆಯಾಗಿ ಒಂದೇ ಉಸಿರಿನಲ್ಲಿ ಹೇಳಿ ಮುಗಿಸಿದರು. ಅರೇ!! ಮನುಷ್ಯರಿಗೆ ಮಾತ್ರವಲ್ಲ; ದೇವರಿಗೆ ಸೀರೆ ಉಡಿಸುವುದನ್ನು ಹೇಳಿಕೊಡುತ್ತಾ ಈ ಯೂಟ್ಯೂಬ್?ಎಂದು ಹಳೆಯ ಟ್ಯೂಬ್ಲೈಟ್ ಉರಿಯಲು ಸಮಯ ತೆಗೆದುಕೊಳ್ಳುವಂತೆ ಈ ಯೂಟ್ಯೂಬಿನ ವ್ಯಾಪಾರಗಳು ನನ್ನ ತಲೆಗೆ ಅರ್ಥವಾಗಲು ಕೊಂಚ ಹೊತ್ತು ತೆಗೆದುಕೊಂಡಿತು.'

ಭಾಷೆ ಹೆಚ್ಚು ಹೆಚ್ಚು ಗೊತ್ತಿದ್ದಷ್ಟೂ ಪನ್–ಡಿತರಾಗುವುದು ಸುಲಭ. ಕಲೆ, ಸಾಹಿತ್ಯ, ಸಂಸ್ಕೃತಿ, ರಾಜಕೀಯ, ಸೆಕ್ಸ್, ಅರ್ಥಶಾಸ್ತ್ರ, ಸಾಮಾಜಿಕ ರಂಗ, ವಿಜ್ಞಾನ.... ಹೀಗೆ ಹಾಸ್ಯ ವಿಶಾಲವಾದ ಪ್ರಪಂಚವನ್ನು ಒಳಗೊಳ್ಳುತ್ತದೆ. ದ್ರೋಣ್ ಪ್ರತಾಪ್ ಎಂಬ ಹುಡುಗನ ಡೋಂಗೀ ಪ್ರತಾಪವನ್ನು ಸೊಗಸಾಗಿ ಹಾಸ್ಯಕ್ಕೆ ವಸ್ತುವಾಗಿಸಿಕೊಳ್ಳಬಹುದು. ಹಾಗೆಯೇ ರಾಜಕಾರಣಿಗಳು ಕಟ್ಟುವ ವಾಚ್‌ನಿಂದ ಹಿಡಿದು, ಅವರು ಉಪಯೋಗಿಸುವ ಕೂಲಿಂಗ್ ಗ್ಲಾಸ್‌ನವರೆಗೆ ಎಲ್ಲವೂ ಹಾಸ್ಯಕ್ಕೆ ಒದಗಿ ಬರುತ್ತದೆ. ಹಾಸ್ಯ ಸಾಹಿತಿಗೆ ಜಗತ್ತಿನ ಆಗುಹೋಗುಗಳ ಅರಿವಿರಬೇಕು. ಚರಿತ್ರೆಯ ತಿಳುವಳಿಕೆಯಿರಬೇಕು. ಇದು ಅಪರಿಮಿತವಾದ ಓದನ್ನು ಬೇಡುವುದು ಇದಕ್ಕಾಗಿಯೇ. ಓದಿದ್ದನ್ನು ನೆನಪಿನಲ್ಲಿ ಇಟ್ಟುಕೊಳ್ಳುವ ಒಳ್ಳೆಯ ಸ್ಮರಣಶಕ್ತಿಯೂ ಬೇಕಾಗುತ್ತದೆ. ಗಂಭೀರವಾದದ್ದನ್ನು ಲಘುವಾಗಿಸುವ, ಲಘುವಾದದ್ದನ್ನು ಹಾಸ್ಯವಾಗಿಸುವ ಶಕ್ತಿ ಬೇಕು. ಭಾಷೆಯ ಜೊತೆಗಿನ ಈ ಕ್ರೀಡೆ ಲೈಟ್ ಆದದ್ದನ್ನು ಡಿಲೈಟ್ ಮಾಡುವ ಅಂಶಗಳು. ಜನರನ್ನು ಎಜುಕೇಟ್ ಮಾಡುವುದರ ಜೊತೆಗೆ, ಜನರೂ ಒಂದು ಮಟ್ಟಿಗೆ ಎಜುಕೇಟ್ ಆಗಿದ್ದರೆ ಸಾಹಿತಿ–ಸಹೃದಯ ಸಂಬಂಧ ಇಲ್ಲಿ ಗಟ್ಟಿಯಾಗುತ್ತದೆ.

ಉದಾಹರಣೆಗೆ ಮುಖ್ಯಮಂತ್ರಿಯೊಬ್ಬರ ಸಾಕುಮಗನ ಅದ್ದೂರಿ ಮದುವೆಯ ಬಗ್ಗೆ ದೆಹಲಿಯ ಪತ್ರಿಕೆಯೊಂದು ಪ್ರಕಟಿಸಿದ ಕಾರ್ಟೂನಿನ ಬಗ್ಗೆ ವೈಯೆನ್ಕೆಯವರು ಉಲ್ಲೇಖಿಸಿದ್ದಾರೆ.

ಜನಸಾಮಾನ್ಯನೊಬ್ಬ 'ಯುವರ್ ಮೆಜೆಸ್ಟಿ, ಪೀಪಲ್ ಹ್ಯಾವ್ ನೋ ರೋಟಿ' ಎಂದಾಗ, ಮುಖ್ಯಮಂತ್ರಿಯೆಂಬ ಆ ಚಕ್ರವರ್ತಿನಿ, 'ಲೆಟ್ ದೆಮ್ ಈಟ್ ಚಿರೋಟಿ' ಎನ್ನುತ್ತಾಳೆ.

ಇದಕ್ಕೆ ಹಿನ್ನೆಲೆಯಾಗಿ ಫ್ರೆಂಚ್ ಕ್ರಾಂತಿಗೆ ಮುನ್ನ ಫ್ರಾನ್ಸ್‌ನಲ್ಲಿ ಜನ ದಂಗೆ ಎದ್ದಾಗ ನಡೆದ ಒಂದು ಘಟನೆಯನ್ನು ನೋಡಬಹುದು. ಅಲ್ಲಿ ಆಗ ಕ್ವೀನ್ ಆ್ಯಂಟೋಯಿನೆಟ್ ಆಳುತ್ತಿರುತ್ತಾಳೆ. ಜನರು ಹಸಿವಿನಿಂದ 'ಪೀಪಲ್ ಹ್ಯಾವ್ ನೋ ಬ್ರೆಡ್' ಎಂದಾಗ ಆಕೆ, 'ಲೆಟ್ ದೆಮ್ ಈಟ್ ಕೇಕ್' ಎನ್ನುವುದು ಒಂದು ಐತಿಹಾಸಿಕ ವ್ಯಂಗ್ಯವಾಗಿ ದಾಖಲಾಗಿದೆ. ಈ ಹಿನ್ನೆಲೆ ಓದುಗರಿಗೆ ಗೊತ್ತಿದ್ದರೆ ಮೊದಲಿನ ಪಂಚ್ ಸರಿಯಾಗಿ ತಟ್ಟುತ್ತದೆ.

'ಪಂಚ್' ಎಂಬ ಇಂಗ್ಲಿಷ್ ವಿನೋದ ಸಾಪ್ತಾಹಿಕ ಸುಮಾರು ನೂರೈವತ್ತು ವರ್ಷಗಳ ಕಾಲ ಹಾಸ್ಯ ಪ್ರಪಂಚದಲ್ಲಿ ಮೆರೆದು ಮರೆಯಾಯಿತು. 1814ರಲ್ಲಿ ಈ ಪತ್ರಿಕೆಯನ್ನು ಪ್ರಾರಂಭಿಸಿದವನು ಮಾರ್ಕ್ ಲೆಮನ್. ಸಮಾಜದ ಒಳಿತಿಗೆ ಅಡ್ಡಿಯಾಗುವವರನ್ನು ಪಂಚ್ ತನ್ನ ವಿಡಂಬನೆಯ ಮೂಲಕ ಚುಚ್ಚುತ್ತಿತ್ತು.ಆ ಕಾಲದಲ್ಲಿ ಇದು ತನ್ನ ಉಗ್ರ ವಿಡಂಬನಾತ್ಮಕವಾದ ಬರೆಹಗಳಿಗೆ ಹೆಸರಾಗಿತ್ತು. ಪಂಚ್ ಎಂದರೆ ಗುದ್ದು ಎಂದರ್ಥ, ಈ ರೀತಿ ಸುದ್ದಿಗೆ ಗುದ್ದು ಕೊಟ್ಟು ಪ್ರಕಟಿಸುತ್ತಿದ್ದ ಪಂಚ್‌ನಿಂದ ನಮ್ಮ ಕನ್ನಡದ ಕೈಲಾಸಂ ಅವರು ಪ್ರೇರಿತರಾಗಿದ್ದರು. ನಂತರ ರಾ.ಶಿವರಾಂ (ರಾಶಿ) ಅವರು ಕನ್ನಡದಲ್ಲಿ 'ಕೊರವಂಜಿ' ಎಂಬ ಹಾಸ್ಯ ಪತ್ರಿಕೆಯನ್ನು ಪ್ರಾರಂಭಿಸಲು ಈ 'ಪಂಚ್' ಪತ್ರಿಕೆಯೇ ಪ್ರೇರಣೆಯನ್ನು ಒದಗಿಸಿತು.

ಸಮಕಾಲೀನ ವಿದ್ಯಮಾನಗಳಿಗೆ ಸ್ಪಂದಿಸುವುದು ಆರೋಗ್ಯವಂತ, ಜೀವಂತ

ಸಮಾಜದ ಒಂದು ಜಾಯಮಾನ. ಅದು ಹಾಸ್ಯದ ಮೂಲಕವಾದರೆ ತುಂಬಾ ಪರಿಣಾಮಕಾರಿಯಾಗಿರುತ್ತದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಉದಾಹರಣೆಗೆ ದ್ರೋಣ್ ಪ್ರತಾಪನನ್ನು ಲೇವಡಿ ಮಾಡಿದ ಒಂದು ತುಣುಕು ನೋಡಿ.

ಹೆಂಡತಿ; ಚಟ್ನಿ ರುಬ್ಬಲು ಮಿಕ್ಸಿಯಲ್ಲಿ ಬ್ಲೇಡೇ ಇಲ್ಲಾರೀ... ನೀವೇನಾದ್ರು ತೆಗೆದ್ರಾ?

ಗಂಡ; ನಿನ್ನ ಮಗ ಅದೆನೋ ಹಾರಿಸ್ತೀನಿ ಅಂತಿದ್ದ... ನೋಡು ಅವನೇ ಎಗರಿಸಿರ್ಬೇಕು.

ಬರೀ ಹಾಸ್ಯ, ವಿಡಂಬನೆ, ವ್ಯಂಗ್ಯವನ್ನೇ ಜನರಿಗೆ ಕೊಡುವ ಬದಲು ಬೇರೆಲ್ಲಾ ರಸಗಳೊಂದಿಗೆ ಸೇರಿ ಇದು ಬಂದರೆ ಚೆನ್ನಾಗಿರುತ್ತದೆ. ಈ ರೀತಿಯ ಪ್ಯಾಕೇಜಿಗೆ ಲಲಿತ ಪ್ರಬಂಧವೆಂಬ ಸಾಹಿತ್ಯ ಪ್ರಕಾರ ಉತ್ತಮ ವೇದಿಕೆಯಾಗುತ್ತದೆ. ಎಲ್ಲ ಭಾವನೆಗಳೂ ಮಿಶ್ರವಾಗಿ ಫ್ರೀ ಹ್ಯಾಂಡ್ ರೈಟಿಂಗ್ ಎನ್ನುವ ರೀತಿಯಲ್ಲಿ ಮೂಡಿಬರುವ ಸುಂದರವಾದ ಸಾಹಿತ್ಯ ಪ್ರಕಾರವದು. ಮದುವೆಯೂಟದ ಹಾಗೆ ವಿಡಂಬನೆ, ಪದಚಮತ್ಕಾರ, ವಿಷಾದ, ಬೇಸರ, ಭಯ, ಸಿಟ್ಟು, ಶೃಂಗಾರ, ತುಂಟತನ ಇವೆಲ್ಲದರೊಂದಿಗೆ ಹಾಸ್ಯ ಮುಂಚೂಣಿಯಲ್ಲಿದ್ದರೆ ಅದು ಓದುಗರ ಮುಂದೆ ಗೆಲ್ಲುತ್ತದೆ. ಅ.ರಾ. ಮಿತ್ರ ಅವರ 'ಸಾಲಾಯ ತಸ್ಮೈ ನಮಃ', 'ಬಾದರಾಯಣಿಗಳು', 'ಹಾಲಿನವಳ ಲೆಕ್ಕ' ಮುಂತಾದ ಆಕರ್ಷಕ ಶೀರ್ಷಿಕೆಗಳ ಲಲಿತ ಪ್ರಬಂಧಗಳನ್ನು ಇದಕ್ಕೆ ಉದಾಹರಿಸಬಹುದು. ಈ ರೀತಿಯ ಪ್ರಬಂಧಗಳಲ್ಲಿ ಪದ ಚಮತ್ಕಾರಗಳು ಬಂದರೆ ಪಾಯಸ ಉಣ್ಣುವಾಗ ಗೋಡಂಬಿ, ದ್ರಾಕ್ಷಿಗಳು ಸಿಕ್ಕಿದಂತೆ ಹಿತವಾಗಿರುತ್ತದೆ. ಕನ್ನಡದಲ್ಲಿ ಪನ್‌ಗಳನ್ನು ಕೈಲಾಸಂ, ಬೀಚಿ, ಡುಂಡಿರಾಜ್ ಮೊದಲಾದವರೆಲ್ಲರೂ ತುಂಬಾ ಚೆನ್ನಾಗಿ ಮಾಡಿದ್ದಾರೆ.

ಒಂದು ಸನ್ನಿವೇಶವನ್ನು ಸೃಷ್ಟಿಸಿ ಕಥೆಯಂತೆ ನೇಯ್ದುಕೊಂಡು ಮುಂದುವರಿಸುವ ಹಾಸ್ಯ ಪ್ರಬಂಧಗಳದು ಇನ್ನೊಂದು ಪ್ರಕಾರ. ಇದರಲ್ಲಿ ಹಾಸ್ಯ ಬರಹಗಾರ ಕತೆಗಾರನಿಗೆ ಬೇಕಾಗುವ ಕಲೆಗಾರಿಕೆಯನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಬಿಜಿಎಲ್ ಸ್ವಾಮಿಯವರ ಬರಹಗಳನ್ನು ನೋಡಬಹುದು.

ರಾಜಕೀಯ ಪ್ರತಿಭಟನೆಯನ್ನು ಕಲ್ಲು ಎಸೆದು ಟಯರ್ ಹೊತ್ತಿಸಿ ಮಾಡುವುದಕ್ಕಿಂತ ಹಾಸ್ಯದ ಮೂಲಕ ಮಾಡುವುದು ಹೆಚ್ಚು ಪರಿಣಾಮಕಾರಿ. 'ಮಿಣಿ ಮಿಣಿ ಪವ್ಡರ್' ಎಂಬ ಒಂದು ವಿಷಯ ಸಾರ್ವಜನಿಕವಾಗಿ ಹಾಸ್ಯಕ್ಕೆ ಒಳಗಾಗಿ ನಂತರ ಜನರನ್ನು ನಿಯಂತ್ರಣಗೊಳಿಸಲು ಸರಕಾರ ಮಧ್ಯ ಪ್ರವೇಶಿಸಿದುದು ಎಲ್ಲರಿಗೂ ನೆನಪಿರುವ ವಿಚಾರ.

ಪತ್ರೋತ್ತರಗಳ ಮೂಲಕ ಪ್ರಚಲಿತ ವಿದ್ಯಮಾನಗಳಿಗೆ ಸಂಬಂಧಿಸಿದ ಹಾಗೆ ಓದುಗರು ಕೇಳುವ ಪ್ರಶ್ನೆಗಳಿಗೆ ಜಾಣ ಉತ್ತರಗಳನ್ನು ನೀಡುವ ಅಂಕಣಗಳನ್ನು ಕೆಲವು ಪತ್ರಿಕೆಗಳು ಇರಿಸಿಕೊಂಡಿವೆ. ಉದಾಹರಣೆಗೆ, ಭುವನೇಶ್ವರಿ ಹೆಗಡೆಯವರು ನಿರ್ವಹಿಸುವ ಉತ್ತರೋಪನಿಷತ್ತು (ತುಷಾರ), ಭಟ್ಟರ ಸ್ಕಾಚ್ (ವಿಶ್ವವಾಣಿ) ಇತ್ಯಾದಿ. ಹಿಂದೆ ಸುಧಾ ಪತ್ರಿಕೆಯಲ್ಲಿ ಹೆಚ್ ಎನ್ ಆನಂದರು ಉತ್ತರಿಸುತ್ತಿದ್ದ 'ವಾರೆನೋಟ'. ನೇರನೋಟದಲ್ಲಿ ಸಿಗದ ಇಂಥ ಅನೇಕ ವಿಷಯಗಳು ವಾರೆನೋಟಕ್ಕೆ ಸಿಕ್ಕಿ ಹಾಸ್ಯದ ಮೂಲಕ ಬಹಿರಂಗಗೊಳ್ಳುತ್ತವೆ. ಎಂಥ ಗಂಭೀರ ಪತ್ರಿಕೆಗಳಲ್ಲೂ ಹಾಸ್ಯಕ್ಕೆ ಸಂಬಂಧಿಸಿದ ಒಂದು ಸಣ್ಣ ಅಂಕಣವಾದರೂ ಇರಬೇಕು. ಪುಟಗಟ್ಟಲೆ ಬರೆಯುವ ಗಂಭೀರ ಲೇಖನಗಳಿಗಿಂತ ಹೆಚ್ಚು ಪ್ರಭಾವವನ್ನು ಇದು ಬೀರಬಲ್ಲುದು.

ನಾಟಕಗಳ ಮೂಲಕ ಕೈಲಾಸಂ, ಮಾಸ್ತಿ ಹಿರಣ್ಣಯ್ಯ ಮುಂತಾದವರು ರಾಜಕೀಯ, ಸಾಮಾಜಿಕ ವಸ್ತುಸ್ಥಿತಿಗಳನ್ನು ಲೇವಡಿ ಮಾಡುತ್ತಿದ್ದುದು ಎಲ್ಲರಿಗೂ ಗೊತ್ತಿರುವ ವಿಷಯ.

ಹಾಗೆಯೇ, ಬೀಚಿಯವರು ತಮ್ಮ ಕಾದಂಬರಿಗಳ ಮೂಲಕ ಸಮಾಜದ ಓರೆಕೋರೆಗಳನ್ನು ಹಾಸ್ಯ ಮಾಡಿದ್ದಾರೆ. ವ್ಯಂಗ್ಯಚಿತ್ರಗಳಿಗೆ ಕೊಡುವ ಕ್ಯಾಪ್ಷನ್‌ಗಳು ಕೂಡ ಒಳ್ಳೆಯ ಹಾಸ್ಯ ಬರಹಗಳಿಗೆ ಉದಾಹರಣೆಗಳಾಗಬಲ್ಲವು. ಅದೇ ರೀತಿ, ಮಕ್ಕಳ ಪದ್ಯಗಳಲ್ಲೂ ಕೂಡ ಹಾಸ್ಯ ತಂದವರಿದ್ದಾರೆ. 'ಮಂಗಗಳ ಉಪವಾಸ'ದಂಥ ಪದ್ಯಗಳು ಮಕ್ಕಳ ಮನಸ್ಸನ್ನು ಬೇಗ ಸೆಳೆಯುತ್ತವೆ. ನಮ್ಮ ಪುರಾಣ, ಮಹಾಕಾವ್ಯಗಳಲ್ಲೂ ಕೂಡ ಉತ್ತರಕುಮಾರ, ಕುಂಭಕರ್ಣ, ಶೂರ್ಪನಖಿ ಮುಂತಾದವರ ಮೂಲಕ ಹಾಸ್ಯರಸ ಹರಿದಿದೆ. ಹಾಗೆಯೇ ಪ್ರಾಚೀನ ನಾಟಕಗಳ ವಿದೂಷಕರು, ಯಕ್ಷಗಾನದ ಹಾಸ್ಯಗಾರರು ಸಿನೆಮಾದ ಹಾಸ್ಯನಟರು ಇವರೆಲ್ಲರೂ ವೀಕ್ಷಕರಿಗೆ ಹಾಸ್ಯರಸವನ್ನು ಹರಿಸಲೆಂದೇ ಸೃಷ್ಟಿಗೊಂಡವರು.

ಕೇಫ ಅವರ ಪಾಂಡು–ಶೌರಿಯರು, ವೈಎನ್ಕೆಯವರ ಮಿಸ್ಟರ್ ಫಾ, ಎಂ.ಎಸ್. ನರಸಿಂಹಮೂರ್ತಿಯವರ ವಿಶ್ವ– ವಿಶಾಲೂ, ಬೀಚಿಯವರ ತಿಂಮ, ಟಿ. ಸುನಂದಮ್ಮ ಅವರ ಸರಸು– ಮೈಲಾರಯ್ಯ ಇವರೆಲ್ಲರೂ ಓದುಗರ ಮನಸ್ಸಿನಲ್ಲಿ ಉಳಿದಿರುವ ಪಾತ್ರಗಳು. ವಚನಗಳು ಕೀರ್ತನೆಗಳ ಧಾಟಿಯಲ್ಲಿ ಅಣಕವಾಡುಗಳನ್ನು ರಚಿಸುವುದು ಹಾಸ್ಯ ಸಾಹಿತ್ಯದ ಒಂದು ಭಾಗ. ಉದಾಹರಣೆಗೆ, ಹೆಲ್ಮೆಟ್ ಕಡ್ಡಾಯ ಕಾನೂನನ್ನು ಲೇವಡಿ ಮಾಡುವ ಕೀರ್ತನೆಯ ಧಾಟಿಯ ಒಂದು ಅಣಕವಾಡು:

ಬುರುಡೆಯು ತಲೆಗಳ ಒಳಗೋ
ತಲೆಯು ಬುರುಡೆಯ ಒಳಗೋ
ಬುರುಡೆ ತಲೆಗಳು ಎರಡೂ
ನಿನ್ನೊಳಗೋ ಅರಿಯೇ॥ (ನವೆ ನವೋನ್ಮೇಷಶಾಲಿನೀ)

ನಮ್ಮ ರಸ್ತೆಗಳಲ್ಲಿ ಇರುವ ಹೊಂಡಗಳನ್ನು ನೋಡಿದಾಗಹುಟ್ಟಿದ ವಚನದ ಧಾಟಿಯ ಒಂದು ಅಣಕವಾಡು:

ಬ್ರಹ್ಮಾಂಡದೊಳಗೊಂದು ಮನೆಯ ಮಾಡಿ
ಹೊಂಡಗಳಿಗಂಜಿದೊಡೆ ಎಂತಯ್ಯ। (ನವೆ ನವೋನ್ಮೇಷಶಾಲಿನೀ)

ಬಹಳ ಬಾರಿ ಹಾಸ್ಯ ಲೇಖಕರು ತಮ್ಮ ಕೃತಿಗಳಿಗೆ ಇಡುವ ಹೆಸರುಗಳು ಕೂಡ ಮುಖದಲ್ಲಿ ನಗುವನ್ನು ಮೂಡಿಸುವಂತಿರುತ್ತವೆ. ಉದಾಹರಣೆಗೆ ನಾ. ಕಸ್ತೂರಿಯವರ 'ಗೃಹದಾರಣ್ಯಕ', ನಾಡಿಗೇರ ಕೃಷ್ಣರಾಯರ 'ಮೆಲ್ಲೋಗರ', ಬೀಚಿಯವರ 'ನನ್ನ ಭಯಾಗ್ರಫಿ', ಬಿಜಿಎಲ್ ಸ್ವಾಮಿಯವರ 'ದೌರ್ಗಂಧಿಕಾಪಹರಣ' ಡುಂಡಿರಾಜರ 'ಪಂಚ್ ಕ ಜಾಯ್' ಇತ್ಯಾದಿ.

✠✠✠

ಎಲ್ಲವನು ಹತ್ತಿಕ್ಕ ಹೊರಟವರು
ದಡದಲ್ಲೆ ಕುಸಿದರು
ತೀರದ ತೀರವನು ಮುತ್ತಿಕ್ಕುವ
ಸ್ವಚ್ಛಂದ ಅಲೆಗಳ ಕಂಡು

ಕನ್ನಡ ಕಾದಂಬರಿಗಳಲ್ಲಿ ಸಂಗೀತ

ಚೈತನ್ಯ ಮಜಲುಕೋಡಿ
ನಂ.8D, ಸೆಕ್ಟರ್23, ರಿಲಯನ್ಸ್ ಗ್ರೀನ್ ಟೌನ್‌ಶಿಪ್ – 361 142
ಜಾಮ್ ನಗರ, ಗುಜರಾತ್

(ಹಿಂದಿನ ಸಂಚಿಕೆಯಿಂದ...)

ಹೇಮಾವತಿ

ಹೇಮಾವತಿಯಲ್ಲಿ ರಾಮಣ್ಣ ಪೆರುಮಾಳರ ಮನೆತನವೇ ಸಂಗೀತ ಸಾಹಿತ್ಯಕ್ಕೆ ಹೆಸರಾದದ್ದು. ಅವು ಕುಟುಂಬಕ್ಕೆ ದೈವದತ್ತವಾಗಿತ್ತು. ರಾಮಣ್ಣರ ಅಜ್ಜ ಶ್ರೀನಿವಾಸ ಪೆರುಮಾಳರ ಜಮೀನನ್ನು ಶಕ್ತಿಯಿಂದ ಗೆದ್ದುಕೊಳ್ಳಲು ಹೋಗಿ ಪಂಥ ಕಟ್ಟಿದ್ದ ಸಾಹುಕಾರ ಶಠಾರಿಯನ್ನು ಕ್ರೋಧಗೊಂಡ ಜನಸಂದಣಿಯನ್ನು ತನ್ನ ಸಂಗೀತದಿಂದಲೇ ಪಾರುಮಾಡಿದ್ದರು. ಇಂತಹ ಪೆರುಮಾಳರ ಮೊಮ್ಮಕ್ಕಳಾದ ರಾಮಣ್ಣ ಆನಂದರಲ್ಲಿಯೂ ಸಂಗೀತವು ಸಮಾವೇಶಗೊಂಡಿದ್ದರೂ, ಆನಂದನಲ್ಲಿ ಅದು ಹೆಚ್ಚು ಪ್ರಕಾಶಿಸುತ್ತಿತ್ತು. ಯಾವ ಬಂಧನವನ್ನೂ ಹಚ್ಚಿಕೊಳ್ಳದ ಆನಂದನು ಪ್ರಕೃತಿಯ ಮಡಿಲಿನಲ್ಲೇ ತನ್ನ ದಿನದ ಬಹುಕಾಲ ಕಳೆಯುತ್ತಿದ್ದನು. ಆನಂದನು ಒಂದು ಗಂಧರ್ವ ಕಂಠಕ್ಕಾಗಿ ಹುಡುಕುತ್ತಿರುವಾಗ, ಅದು 6 ವರ್ಷದ ಬಾಲಕಿ ಹೊಲತಿ ಚೆನ್ನಿಯಲ್ಲಿ ಮೂಡಿರುವುದನ್ನು ಕಂಡುಕೊಂಡನು. ಮೊದಲೇ ಅಲೆಮಾರಿಯಾಗಿದ್ದ ಅವನು ಸಮಾಜದ ವಿರೋಧದ ನಡುವೆಯೂ ಚೆನ್ನಿಗೆ ಕಲಿಸುವುದನ್ನು ಮುಂದುವರೆಸಿದಾಗ ಹೊಲೆಯರ ಮೇಲೆ ಶೋಷಣೆ ಹೆಚ್ಚಾದುದನ್ನು ಕಂಡು ಗುಟ್ಟಿನಲ್ಲಿ ಅವಳನ್ನೂ ಕರೆದುಕೊಂಡು ಊರುಬಿಟ್ಟನು. ಅನಂತರದ ಕತೆಯೆಲ್ಲಾ ಮೃದು ಸ್ವಭಾವದ ಹೇಮಾವತಿಯ ಮತ್ತು ರಾಮಣ್ಣರಿಗೆ ಮನೆಯವರಿಂದ ಮತ್ತು ಸುತ್ತಲ ಸಮಾಜದವರಿಂದಾದ ಶೋಷಣೆಯ ದಾರುಣ ಕಥನ. ಅಲ್ಲಿನ ದುಸ್ಸಹವಾದ ಸಂಕಷ್ಟ ಪರಂಪರೆಯಿಂದ ರಾಮಣ್ಣನನ್ನು ಸಂತೈಸುವುದು ಭಜನೆ ಮತ್ತು ಹೇಮಾವತಿಗೆ ಸಣ್ಣಂದಿನಲ್ಲಿ ಆನಂದನಿಂದ ಕಲಿತ ಸಂಗೀತ. ಹೇಮಾವತಿಯ ಮದುವೆಯ ನಂತರ ರಾಮೋತ್ಸವದಲ್ಲಿ ಆದ ವರ್ಣದ್ವೇಷದ ಗದ್ದಲದಿಂದ ಜಿಗುಪ್ಸೆಗೊಂಡ ರಾಮಣ್ಣ ದೇಶಾಂತರ ಹೊರಟರು. ರಾಮಣ್ಣ ಮದ್ರಾಸಿನ ಕಡೆ ಹೋಗುತ್ತಿದ್ದಾಗ ಒಂದು ಪಟ್ಟಣದಲ್ಲಿ ಅವರ ಹಳೆಯ ಸ್ನೇಹಿತ ತಿಮ್ಮಪ್ಪ ಸಿಕ್ಕನು. ತಿಮ್ಮಪ್ಪ ತಾನೀಗ ಸಿನೆಮಾ ನಟನೆಂದೂ ತನ್ನ ಹೆಸರೀಗ ತಿಮ್ಮಪ್ಪ ಭಾಗವತರ್ ಎಂದೂ ಹೇಳಿದನು. ಭಾಗವತರ್ ಎಂಬ ಹೆಸರಿಗೇ ಪ್ರಸಿದ್ಧಿ ಎಂದು ಹೇಳುವುದರ ಹಿಂದೆ ಆಗಿನ ಕಾಲದ ಸಿನೆಮಾಯಾನ, ನಟನಟಿಯರಿಗಿರಬೇಕಾದ ಶಾರೀರ ಸೌಷ್ಠವ ಮತ್ತು ಲೋಕಪ್ರಸಿದ್ಧಿಯ ಅವಶ್ಯಕತೆಯ ಕುರಿತು ಹೇಳುತ್ತದೆ. ರಾಮಣ್ಣನವರ ಗಾಯನ ಕೇಳಿದ ಸಿನೆಮಾ ಯಜಮಾನನು ನಿಮಗೆ ಹದಿನೈದು ಸಾವಿರ ಕೊಡುವೆನೆಂದು ಹೇಳಿದರೂ, ತನಗೆ ಇದು ಅನೌಚಿತ್ಯವೆಂದೂ ಸಂಗೀತದಂತಹ ಘನವಿದ್ಯೆ ಹೀಗೆ ತನ್ನ ಕಾಲಿನ ಮೇಲೆ ತಾನು ನಿಲ್ಲಲಾರದೆ ಕೆಳಮಟ್ಟಕ್ಕೆ ಇಳಿಯುತ್ತಿರುವುದನ್ನು ಕಂಡು ಪಶ್ಚಾತ್ತಾಪವಾಯಿತು. ಸುಲಭದಲ್ಲಿ ಹಣಗಾರರಾಗುವ ಆಸೆ, ಇಂತಹ ಘನ ರಾಜಮಾನ್ಯ ಲೋಕಮಾನ್ಯ ಗಾಯಕರನ್ನು ಈ

ಅಲ್ಪತೆಗೆ ಎಳೆಯುತ್ತಿದೆ ಎಂದುಕೊಂಡರು. (ಪುಟ 196) ಇದು ಚಲನಚಿತ್ರ ಸಂಗೀತದ ಕುರಿತು ಆಗ ಇದ್ದ ಒಂದು ಸಾಂಪ್ರದಾಯಿಕ ಅಭಿಪ್ರಾಯ.

ಇತ್ತ ಬಾಲಕಿ ಚೆನ್ನಿಯನ್ನು ಕರೆದೊಯ್ದ ಆನಂದನು ಅವಳಿಗೆ ಕಠಿಣ ಅಭ್ಯಾಸವನ್ನಿತ್ತು ಅತ್ಯುತ್ತಮ ಗಾಯನ ಕಲಾವಿದೆಯನ್ನಾಗಿ ಮಾಡಿದನು. ಅವಳ ಹೆಸರನ್ನೂ ಬದಲಿಸಿ ಗಾನಶಾರದೆ ಎಂದಾಗಿಸಿದನು. ಸಿನೆಮಾದವರು ಎಷ್ಟು ಆಸೆ ತೋರಿಸಿದರೂ ಅಲ್ಲಿಗೆ ಮರುಳಾಗದೇ ಕಛೇರಿಗಳನ್ನಷ್ಟೇ ಕೊಟ್ಟಳು. ನಂತರ ವಾಪಸ್ಸು ಊರಿಗೆ ಆನಂದನೊಡನೆ ಊರಿಗೆ ಮರಳಿ ಮಹಾತ್ಮಾ ಗಾಂಧಿಯವರ ಆದೇಶದಂತೆ ಹಳ್ಳಿಯಲ್ಲಿಯೇ ಸೇವಾಶ್ರಮವೊಂದನ್ನು ತೆರೆದರು. ಆನಂದನು ಕೆಳವರ್ಗದವರಿಗೆ ಒತ್ತಾಸೆಯಾದನು. ಹಳ್ಳಿಗರೆಲ್ಲ ಸೇರಿ ದೇವಾಲಯ ಪ್ರವೇಶ ಮಾಡಬೇಕೆಂದು ಆವೇಶದಲ್ಲಿ ಹೊರಟು, ನಡುವೆ ಮದ್ಯವನ್ನೂ ಸೇವಿಸಿ ಬಂದಿದ್ದ ಪರಿಣಾಮ ದೊಡ್ಡ ಕೋಲಾಹಲವಾಗುವುದರಲ್ಲಿತ್ತು. ಆಗ ಆನಂದನು ಹಿಂದೆ ತಾತ ಶ್ರೀನಿವಾಸ ಪೆರುಮಾಳರಂತೆಯೇ ಗಾನಾಮೃತವನ್ನು ಹರಿಸಿ, ಅವರ ಆವೇಶವನ್ನು ತಹಬದಿಗೆ ತಂದನು. ಅಲ್ಲಿಗೆ ಕತೆ ಸಮಾಪ್ತವಾಗುತ್ತದೆ. ಹೀಗೆ ಸಂಗೀತದಿಂದ ಆದಿ ಅಂತ್ಯಗಳನ್ನು ಕಂಡರೂ ಜೀವನದ ಸಂಕಷ್ಟಗಳನ್ನು ತಾಳುವ ದುಃಖ ಬಹುಪಾಲನ್ನಾಕ್ರಮಿಸಿ ಹೇಮಾವತಿಯು ಸಾಹಿತ್ಯಾಸಕ್ತರನ್ನು ಸೆಳೆಯುತ್ತದೆ.

ಊರ್ವಶಿ

ಊರ್ವಶಿ ಕಾದಂಬರಿಯ ಎಳೆ ವಿಲಕ್ಷಣವಾದುದು. ಅಪೂರ್ವ ಲಾವಣ್ಯವತಿಯೂ ಸುಸಂಸ್ಕೃತೆಯೂ ಆದ ಸೀತಾಲಕ್ಷ್ಮಿಯು ಆಗ ತಾನೇ ಮದುವೆಯಾಗಿದ್ದಳು. ಪಿಟೀಲು ವಾದನ ಮತ್ತು ಬಾಯಿ ಹಾಡುಗಾರಿಕೆ ಕಲಿತಿದ್ದ ಅವಳು, ಗಂಡನಾಗುವ ಸುಂದರರಾಜನನ್ನು ಆಕರ್ಷಿಸಿದ್ದೂ ಸಂಗೀತದಿಂದಲೇ. ಅವಳು ಸಂಗೀತವನ್ನು ಕಲಿತದ್ದು ಶಿಕ್ಷಕಿ ಕಮಲಮ್ಮನಿಂದ. ವಿಧವೆಯಾದ ಆಕೆ, ತನ್ನ ಜೀವನದ ಘೋರ ದುಃಖವನ್ನು ನಿರಂತರ ಪಿಟೀಲಿನ ಸಾಹಚರ್ಯದಿಂದ ನೀಗಿಕೊಂಡವಳು. ಆತ್ಮಹತ್ಯೆ ಮಾಡಿಕೊಳ್ಳ ಬಯಸಿದರೂ ಅದು ನಿಂತದ್ದು ಈ ಸಂಗೀತ ಪ್ರೇಮದಿಂದಲೇ. ಜಗತ್ತಿನಿಂದ ದೊರೆತ ಸಮಸ್ತ ದುಃಖದಿಂದಲೂ ಕಾರ್ಪಣ್ಯದಿಂದಲೂ ಆಕೆ ಪಾರಾಗಿದ್ದು ಈ ಗಾನತಪಸ್ಸಿನಿಂದ. ನಂತರ ಅವಳಿಗೆ ಸೀತಾಲಕ್ಷ್ಮಿಯು ದೊರೆತು ಅವಳಿಗೆ ತನ್ನ ವಿದ್ಯೆಯ ಸರ್ವಸ್ವವನ್ನೂ ಧಾರೆಯೆರೆದಳು. ಮದುವೆ ಸಮಯದ ಅವಳ ಪಿಟೀಲು ವಾದನ ಮತ್ತು ಸಂಬಂಧಿಕ ಸಂಗೀತ ವಿದ್ವಾಂಸರೊಬ್ಬರ ಗಾಯನ ಸಂದರ್ಭಗಳು ಮನಮುಟ್ಟುವಂತಿವೆ. ಪ್ರಥಮ ದರ್ಜೆಯವನಲ್ಲದಿದ್ದರೂ ನುರಿತ ಗಾಯಕನಾದ ಆತ "ಮದುವೆಗೆಬಂದ ಈ ಹಳ್ಳಿಯ ಜನಗಳದ್ದುನಿಜವಾದ ಆನಂದ, ನಿಜವಾದಭಕ್ತಿ. ತಪ್ಪು ಕಂಡುಹಿಡಿಯುವಭಾವವಿಲ್ಲ. ನಿಜವಾದ ಆನಂದಾನುಭವಮಾತ್ರ. ಇವರಮುಂದೆ ನಾನು ಹಾಡುವುದು ಇವರಿಗೆಸುಖವನ್ನುಂಟು ಮಾಡುವುದೇ ಹೊರತು ನನ್ನ ಪಾಂಡಿತ್ಯಪ್ರದರ್ಶನಕ್ಕಲ್ಲ ಎಂದುಕೊಂಡು ಹಾಡತೊಡಗಿದರು. ಸ್ವಾಭಾವಿಕವಾಗಿ ಹೀಗೆ ಹಾಡತೊಡಗಿದುದರಿಂದ ಅವರ ಸಂಗೀತ ಹಿಂದೆಂದೂ ಆಗದಷ್ಟು ಚೆನ್ನಾಗಿ ಆದುದು ಅವರಿಗೇ ಅನುಭವಕ್ಕೆ ಬಂತು"(ಪುಟ 23) ಹೀಗೆ ಗಾಯನವಾದ ಮೇಲೆ ಸೀತೆಯ ಪಿಟೀಲಿನ ಗಾನಸುಧೆಯೂ ಆಯಿತು. ಮದುವೆಯ ಸಂದರ್ಭಹೀಗೆ ಸಂತೋಷದಾಯಕವಾಗಿ ಕಳೆಯಿತು.

ಸೀತಾಲಕ್ಷ್ಮಿಯ ಅಕ್ಕ ಜಲಜಾಕ್ಷಿಗೆ ಎರಡನೇ ಗರ್ಭ ನಡೆಯುತ್ತಿತ್ತು. ಒರಟನೂ ಮಂದಬುದ್ಧಿಯವನೂ ಆದ ಗಂಡ ನರಸಿಂಹನಿಗೆ ಅವಳಿಗೆ ಎಂಟು ತಿಂಗಳು ತುಂಬಿದರೂ

ಮನೆಯಲ್ಲಿ ಯಾರಿಲ್ಲದ ಕಾರಣ, ಹೆರಿಗೆಯ ವ್ಯವಸ್ಥೆ ಹೇಗೆಂಬುವ ಯೋಚನೆಯೇ ಬರಲಿಲ್ಲ. ಕೊನೆಗೆ ಹೆಂಡತಿಯೇ ಬುದ್ಧಿ ಹೇಳಿ ಇನ್ನೂ ತವರುಮನೆಯಲ್ಲೇ ಇದ್ದ ಸೀತಾಲಕ್ಷ್ಮಿಯನ್ನು ಕರೆಸಿದಳು. ಬಾಣಂತನವೇನೋ ಆಯಿತು; ಆದರೆ, ಮುಟ್ಟಾಳನಾದ ಅಸಂಸ್ಕೃತನಾದ ಭಾವ ನರಸಿಂಹನಿಂದ ಒಂದು ವಿಷಗಳಿಗೆಯಲ್ಲಿ ಅತ್ಯಾಚಾರಕ್ಕೊಳಗಾಗಿ ಸೀತಾಲಕ್ಷ್ಮಿಯು ಬಸುರಾಗಿಬಿಟ್ಟಳು! ಅಲ್ಲಿಂದ ತೊಡಗುವ ಅವಳ ಕರುಣ ಕಥನಕ್ಕೆ ಕೊನೆಯೇ ಇಲ್ಲ. ಅವಳು ಬಸುರಾದ ನಂತರ ಹೆರಿಗೆಯಲ್ಲಿ ಮಗು ಹೋಗಿಬಿಟ್ಟಿತು. ಆದರೆ ಜೀವಂತ ಉಳಿದ ಈಕೆ ಜೀವಚ್ಛವವಾದಳು. ಆಶ್ರಯಕ್ಕಾಗಿ ಅಣ್ಣಂದಿರ ಮನೆಯನ್ನೇ ಹಿಡಿದಿದ್ದ ಆಕೆ, ಒಂದು ದಿನ ತನ್ನ ವಿಚಾರವಾಗಿ ಅಣ್ಣಂದಿರು ಜಗಳವಾಡುವುದು ನೋಡಿ ರೋಸಿಹೋಗಿ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದಳು. ಸಾಯುವ ಮುನ್ನ ಒಮ್ಮೆ ನಾದಸೇವೆಯನ್ನು ಮಾಡಿಬಿಡೋಣವೆಂದು ಪಿಟೀಲನ್ನು ಕೈಗೆತ್ತಿಕೊಂಡಳು. "ರಾತ್ರಿಯ ಅಂಧಕಾರದಲ್ಲಿಮಲಗಿದ್ದ ಅಣ್ಣಶ್ರೀನಿವಾಸನಿಗೆ ಎಲ್ಲ ಕರ್ಕಶ ಧ್ವನಿಗಳನ್ನೂ ಬೇಧಿಸಿಕೊಂಡು ಅವಳ ಪಿಟೀಲಿನ ಧ್ವನಿ ಕೇಳಿತು. ಅದು ಅತ್ಯಂತ ದೀನವಾದ ದುಃಖ ಗಾನ. ಆ ಪಿಟೀಲಿನ ಧ್ವನಿ ಅದನ್ನು ನುಡಿಸುತ್ತಿರುವವರು ತಮ್ಮ ಎದೆಯ ದುಃಖವನ್ನು ಮೊಗೆ ಮೊಗೆದು ಹೊರಕ್ಕೆ ತೋಡಿಕೊಳ್ಳುತ್ತಿರುವಂತೆ ತೋರಿತು. ಅದು ದುಃಖದ ಗಾನವೇ ಆದರೂ ರಸಾನುಭವವುಂಟಾಗಿ ಗಂಗಾಸ್ನಾನ ಮಾಡಿದಂತೆ ಮೈ ಮನ ಶುದ್ಧವಾಯಿತು. ಬಿಸಿಲಿನ ಬೇಗೆಯಿಂದ ಬಳಲಿ ಬೆಂಡಾದ ರಸಾಲವೃಕ್ಷ ಸಂಜೆಯ ತಂಪಿನ ತಂಗಾಳಿಗೆ ಮೈಯ್ಯೊಡ್ಡಿ ಚಿಗುರುಗಳಿಂದ ಅಮೃತ ಬಿಂದುಗಳನ್ನು ಹೀರಿ ಗೆಲುವಾಗುವಂತೆ, ಶ್ರೀನಿವಾಸ ದುಃಖದಗ್ಧವಾದ ಮೈಮನಗಳನ್ನು ಆ ಗಾನದ ತಂಗಾಳಿಗೆ ಒಡ್ಡಿ ಮೀನು ನೀರಿನಲ್ಲಿ ನೆಮ್ಮದಿಯಾದಂತೆ ನೆಮ್ಮದಿಯಾಂತನು. ಹೂವು ಇಲ್ಲದಿದ್ದರೂ ಅದು ಇದ್ದಿದ್ದ ಸ್ಥಳದಿಂದ ಇಂಪಾದ ಕಂಪು ಹೊರಹೊಮ್ಮುವಂತೆ, ಮಹಾತ್ಮರು ಒಂದೆಡೆಯಿಂದ ಮರೆಯಾದರೂ ಅವರ ಅಡಿಗಳು ಹಿಂದೆ ಬಿಟ್ಟು ಹೋದ ಪಾವಿತ್ರ್ಯತೆ ಅಲ್ಲಿಯೇ ನುಸುಳಿರುವಂತೆ, ಸ್ವಲ್ಪ ಹೊತ್ತಿನಲ್ಲಿಯೇ ಗಾನವು ನಿಂತು ಹೋದರೂ ಶ್ರೀನಿವಾಸನಿಗೆ ಅದು ನಿಂತುದರ ಅರಿವೇ ಆಗದೆ, ಅವನು ಇನ್ನೂ ಗಾನದ ಅಂತರಿಕ್ಷದಲ್ಲಿ ವಿಹರಿಸುತ್ತಲೇ ಇದ್ದನು."(ಪುಟ 103) ಅನಂತರ ಅವಳು ಹೊಳೆಯಲ್ಲಿ ಹಾರಿಕೊಂಡದ್ದು ಗೊತ್ತಾಗಿ ಸಕಾಲದಲ್ಲಿ ಶ್ರೀನಿವಾಸ ಅವಳನ್ನು ಬದುಕಿಸಿದ. ಆಮೇಲೆ ನಿರ್ವಾಹವಿಲ್ಲದೆ ಗಂಡನ ಮನೆ ಸೇರಿದಾಗ ಅಲ್ಲಿಯೂ ಅವಳಿಗೆ ಸಂತಸವಿರಲಿಲ್ಲ. ಗಂಡಸುಂದರರಾಜನೂ ಜಿಗುಪ್ಸೆಯಿಂದ ಊರು ತೊರೆದು ಅಲೆಮಾರಿಯಾಗಿದ್ದ. ಹೀಗಿರುವಾಗ ಒಮ್ಮೆ ಆಕೆಯ ಸೋದರಮಾವ ಆಯುರ್ವೇದ ಪಂಡಿತರಾದ ಪ್ರಾಣಾಚಾರ್ಯರು ಬೆಂಗಳೂರಿನಿಂದ ಮಲ್ಲಿಗೆ ಹಳ್ಳಿಗೆ ಬಂದು ಸೀತೆಯನ್ನು ಮಗಳಾದ ಲಕ್ಷ್ಮಿಯ ಸಂಗೀತ ಕಲಿಕೆಗೆಂದು ಕರೆದೊಯ್ದರು. ಅಲ್ಲಿ ಅವಳ ಬದುಕು ಮತ್ತೆ ಪ್ರಫುಲ್ಲವಾಯಿತು. ವೈದ್ಯಸೇವೆಯಿಂದ ಮನಸ್ಸು ಪ್ರಶಾಂತಿಯನ್ನು ಪಡೆಯಿತು. ಲಕ್ಷ್ಮಿಯ ಮದುವೆಯಲ್ಲಿ ಪಿಟೀಲು ನುಡಿಸಿದ್ದನ್ನು ನೋಡಿದ್ದ ಗಾಯನ ಸಮಾಜದ ಶಂಕರಯ್ಯರ್ ಅವರಿಗೆ ಒಂದು ದಿನ ಪಿಟೀಲಿನ ಮುತ್ತಣ್ಣನು ಕಛೇರಿಗೆ ಬಾರದ ಕಾರಣ ಚಡಪಡಿಕೆಯಾಗಿ, ಆ ಸಮಯಕ್ಕೆ ಸೀತಾಲಕ್ಷ್ಮಿ ನೆನಪಾದಳು. ಅವಳನ್ನು ಒಪ್ಪಿಸಿ ಕಛೇರಿಯಲ್ಲಿ ಉಜ್ಜುಗಿಸಿದ ಮೇಲೆ, ಘಟಾನುಘಟಿಗಳ ನಡುವೆ ಸೀತಾಲಕ್ಷ್ಮಿ ತನ್ನ ಸಂಗೀತ ಸುಧೆಯನ್ನು ಪ್ರೇಕ್ಷಕರಿಗೆ ಉಣಬಡಿಸಿದಳು. (ಪುಟ 287–301) ಸಂಗೀತ ಕಛೇರಿಯ ವರ್ಣನೆಗಳು ಸೊಗಸಾಗಿ ಚಿತ್ರಿಸಲ್ಪಟ್ಟಿವೆ. ಆಕೆ ದಾಕ್ಷಿಣ್ಯಕ್ಕೆ ಸಿಕ್ಕಿ ಸಂಗೀತ ಪ್ರದರ್ಶನಕ್ಕೆ ಒಪ್ಪಿದಳು ಬಿಟ್ಟರೆ, ಅವಳ ಸಹಜ ಸ್ವಭಾವವು ತೃಪ್ತಿ ಪಡೆಯುವುದು ಸೇವೆಯಲ್ಲೇ. "ಮನಸ್ಸು ಶಾಂತವಾಗಿದ್ದರೆ, ಗೆಲುವಾಗಿದ್ದರೆ,

ಹಗುರವಾಗಿದ್ದರೆ ಮಾತ್ರ ಸಂಗೀತ ಹೇಳುವುದಕ್ಕೂ ಕೇಳುವುದಕ್ಕೂ ಸುಖ; ಆದರೆ ಈಗ ನನ್ನ ಮನಕ್ಕೆ ಶಾಂತಿಯಿಲ್ಲ, ಹಗುರವಾಗಿಲ್ಲ"(ಪುಟ 304) ಎನ್ನುವಳು. ಹೀಗೆ ವೈದ್ಯಕೀಯ ವಿದ್ಯೆ ಕಲಿತು ವಾಪಸ್ಸು ಹಳ್ಳಿಗೇ ಬಂದಳು. ಸುಂದರರಾಜನ ನಿದ್ರಾಹೀನತೆಯ ಭಯಂಕರ ರೋಗವನ್ನು ತನ್ನ ವಾದನ ವೈಖರಿಯಿಂದ ಪಳಗಿಸಿಬಿಟ್ಟಳು. ಕೊನೆಯಲ್ಲಿ ಎಲ್ಲರೂ ದಕ್ಷಿಣದೇಶದ ತೀರ್ಥಯಾತ್ರೆಗೆ ಹೊರಟು, ಮಾಯಾವರವನ್ನು ಸೇರಿದರು. ಪುಣ್ಯತೀರ್ಥಗಳಲ್ಲಿ ಮಿಂದರು. ಸೀತಾಲಕ್ಷ್ಮಿಯು ಅಲ್ಲಿನ ಸಂಗೀತ ಪರಿಸರದಲ್ಲಿ ತಲ್ಲೀನಳಾಗಿದ್ದಳು. ಪತಿಯೂ ಅತ್ತೆ ಮಾವಂದಿರೂ ತನ್ನನ್ನು ತ್ರಿಕರಣಪೂರ್ವಕ ಸ್ವೀಕರಿಸಿದ್ದನ್ನು ನೋಡಿ, ಆನಂದದಿಂದ ಅನೇಕ ಕೃತಿಗಳನ್ನು ನುಡಿಸಿದಳು. ಜೀವನವಿನ್ನು ಸಾಕು ಎಂಬ ಸಾರ್ಥಕಭಾವದಿಂದ, ನನ್ನ ಸರ್ವಾಪರಾಧವನ್ನೂ ಮನ್ನಿಸು ಎನ್ನುವಂತೆ ತ್ಯಾಗರಾಜರ ಶೋಕರಸ ಪ್ರಧಾನವಾದ ಅಸಾವೇರಿ ರಾಗದ ಸಾರೆ ವೆಡಲಿನ ಕಾವೇರಿಯನ್ನೂ ಗಂಡನೊಮ್ಮೆ ಆನಂದದಿಂದ ನಕ್ಕಾಗ ಸೀತಾಪತೆಯನ್ನೂ ನುಡಿಸಿದಳು. ಆದರೆ ಅವಳ ಈ ದಿವ್ಯಾನಂದಕಾಲವು ಅತ್ಯಂತ ಅಲ್ಪವಾಗಿತ್ತು. ದುರ್ವಿಧಿಯು ಸುಂದರರಾಜನನ್ನು ನದಿಯ ಸೆಳೆತದಲ್ಲಿ ಹೊತ್ತೊಯ್ದಿತು. ಅವನನ್ನು ಹಿಡಿಯಲು ಹೋಗಿ ಸೀತೆಯೂ ನದಿಯ ಪಾಲಾದಳು. ಹೀಗೆ ಕತೆಯು ದುರಂತ ಅಂತ್ಯ ಕಂಡದ್ದಕ್ಕಾಗಿ ಮನಸ್ಸು ನಿಡುಸುಯ್ದು ಅವಳಿಗಾದ ಅನ್ಯಾಯಗಳ ಸರಣಿಯನ್ನು ನೆನೆದು, ಈ ದುರುಳ ಸಮಾಜದಿಂದ ಅವಳಿಗೆ ದೊರಕಿದ್ದು ಹೆಚ್ಚೇನೂ ಇಲ್ಲ ಎಂಬ ನಿರಾಶಾಭಾವ ತುಂಬಿಕೊಳ್ಳುತ್ತದೆ. ಸಾಯಲು ಹೊರಟ ಕಮಲಮ್ಮನನ್ನು ಸಂಗೀತವು ತಡೆದು ನಿಲ್ಲಿಸಿದರೆ, ಸಾಯುವ ಮೊದಲೊಮ್ಮೆ ಸೀತಾಲಕ್ಷ್ಮಿಯು ಪಿಟೀಲು ನುಡಿಸಿ ಸಂಗೀತವನ್ನು ಮನತುಂಬಿಕೊಂಡು ಹೊರಡುವುದೊಂದು ವಿಪರ್ಯಾಸ. ಇಂತಹ ಅಪರಿಹಾರ್ಯ ವಿಷಮ ಸ್ಥಿತಿಗಳನ್ನು ಗೊರೂರರು ಚೆನ್ನಾಗಿ ಕಟ್ಟಿಕೊಟ್ಟಿದ್ದಾರೆ.

ಮೈ ಮನಗಳ ಸುಳಿಯಲ್ಲಿ

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಮೈ ಮನಗಳ ಸುಳಿಯಲ್ಲಿ ಮತ್ತು ಮರಳಿ ಮಣ್ಣಿಗೆ ಕಾದಂಬರಿಯಲ್ಲಿ ಸಂಗೀತದ ಅಂಶಗಳನ್ನು ಕಾಣಬಹುದು. ಮೈ ಮನಗಳ ಸುಳಿಯಲ್ಲಿ ಕಾದಂಬರಿಯ ಮಂಜುಳೆ ಎಂಬ ವೇಶ್ಯೆಯ ಆತ್ಮಕತೆಎಂಬಂತೆ ನಿರೂಪಿತವಾಗಿದೆ. ಮಂಜುಳೆ ಉತ್ತಮ ಗಾಯಕಿಯಾಗಿ ಚಿತ್ರಿಸಲ್ಪಟ್ಟಿದ್ದಾಳೆ. ಮನೆಯ ವ್ಯಾಜ್ಯಗಳಿಗಾಗಿ ಮೊಮ್ಮಗಳು ಚಂದ್ರಿ ಕಡತಗಳನ್ನು ಹುಡುಕುತ್ತಿದ್ದಾಗ ಈ ಆತ್ಮವೃತ್ತಾಂತ ಸಿಗುತ್ತದೆ. ಅವಳ ಅಮ್ಮ ಶಾರಿಯು ತಾನೂ ಹಾಡುಗಾರ್ತಿಯೆಂಬ ಭ್ರಮೆಗೊಳಗಾಗಿ ನಾಟಕ ಕಂಪನಿಯ ಪಾರ್ಟು/ಆಸಕ್ತಿ ತೋರಲು ಹೋಗಿ ಆಸ್ತಿಗಳನ್ನು ಕಳೆದುಕೊಂಡವಳು. ಆ ಭಾಗದಲ್ಲಿ ಅಂತಹ ಸಂಗೀತದ ಸುದ್ದಿಗಳೇನೂ ಕಾಣುವುದಿಲ್ಲ. ಈ ಮಂಜುಳೆ ಸುಸಂಸ್ಕೃತೆ. ನಾರಾಯಣ ಅಡಿಗರಲ್ಲಿ ಸಂಸ್ಕೃತ ಕಾವ್ಯಗಳನ್ನು ತಾಯಿಯಲ್ಲಿ ಸಾಕಷ್ಟು ದಕ್ಷಿಣಾದಿ ಸಂಗೀತ ಮತ್ತು ನೃತ್ಯವನ್ನು ಕಲಿತವಳು.ನಂತರ ರಾಧಾಕೃಷ್ಣ ಬುವಾರಿಂದ ಆರೆಂಟು ವರ್ಷ ಹಿಂದೂಸ್ತಾನೀ ಸಂಗೀತ ಕಲಿತವಳು. ಜೊತೆಗೆ ಪಿಟೀಲುವಾದಕನಾದ ಪದ್ಮನಾಭನೂ ಅವರಿಂದ ಕಲಿತ. ಆದರೂ ಆಕೆಯ ಗಾಯನವು ಯಾವುದೋ ಸಮಾರಂಭದಲ್ಲಿ ಕಳೆಗಟ್ಟಲೆಂದು ತೊಡಗುವುದೇ ಹೊರತು, ಕೇವಲ ಕಲಾರಸಿಕರ ಆತ್ಮಸಂತೋಷಕ್ಕಲ್ಲ. ವೇಶ್ಯಾವೃತ್ತಿಯಾದ ಕಾರಣ, ಆಯ್ಕೆಗಳೂ ಹೆಚ್ಚಿಲ್ಲ. ಆಕೆ ಆರಿಸಿಕೊಂಡ ಕಂಡಲೂರು ವಾಸುದೇವ ಪೈಗಳು ಆರ್ಥಿಕವಾಗಿ ಸ್ಥಿತಿವಂತರಾದರೂ ಸಾಂಸ್ಕೃತಿಕವಾಗಿ ಬಡವ. ವಿಲಾಸಗಳಲ್ಲೂ ಆಡಂಬರವೇ ಹೊರತು, ಸಮರ್ಪಣಾ ಸ್ವಭಾವವಿಲ್ಲ. ಆಕ್ರಮಣಶೀಲ.

ಹೀಗೆ ಜೀವನದ ಗೋಳ್ಕರೆಗಳಲ್ಲಿ ಸಿಲುಕಿಕೊಂಡ ಮಂಜುಳೆಗೆ ಸಮಾಧಾನ ಸಿಗುವುದು ಸ್ವಾಂತಃಸುಖಕ್ಕಾಗಿ ಹಾಡಿಕೊಳ್ಳುವ ಸಂಗೀತದಲ್ಲಿ. ಕಾದಂಬರಿಯುದ್ದಕ್ಕೂ ಆಕೆಯ ನೋವಿನ ಕ್ಷಣಗಳನ್ನು ಮರೆಯಲು, ಸಂತಸದ ಕಾಲವನ್ನು ಮೆರೆಯಲು ಸಂಗೀತವೇ ಸಾಧನ. "ಮನಸ್ಸು ದಿಕ್ಕುಗಾಣದೆ, ಬೇಸರ ತುಂಬಿದಾಗ ನನ್ನ ಅಂತರಂಗವನ್ನು ತೋಡಿಕೊಳ್ಳುವುದಕ್ಕೆ ಹತ್ತೆಂಟು ಅಲ್ಲ, ಇನ್ನೂ ಹೆಚ್ಚು, ವಿವಿಧ ರಾಗಗಳಲ್ಲಿ ವಿವಿಧ ಭಾವಗಳ ಹಾಡು ಹೇಳಿಕೊಟ್ಟಿದ್ದಿದ್ದರೆ, ಅದು ನನ್ನ ರಾಧಾಕೃಷ್ಣ ಬುವಾ. ಕಲಿಯುವಾಗಲಾದರೂ ಸರಿಯೇ, ಆಮೇಲಾದರೂ ಸರಿಯೆ, ಮನಸ್ಸನ್ನು ತುಂಬಿಕೊಳ್ಳುವುದಕ್ಕೆ ಹಲವಾರು ಚೀಸುಗಳನ್ನು ಹೇಳಿಕೊಟ್ಟಿದ್ದಾರೆ. ದುಃಖ, ಉಕ್ಕು, ಸಂತಸ, ವಿರಹ, ವೇದನೆ ಯಾವುದು ಬೇಕೋ ಅದನ್ನು ಒದಗಿಸುವ ಬೊಕ್ಕಸ ಬೇಕೋ ಅದು ಅವರಿಂದ ದೊರೆಯಿತೆಂದೇ ನಾನು ತಿಳಿದುಕೊಂಡೆ."(ಪುಟ 102) "ಒಂದು ದಿವಸ ಪದ್ಮನಾಭ ನನ್ನ ಮನೆಗೆ ಬಂದು ಕುಳಿತಿದ್ದ. ಯಾವಾವ ರಾಯನದೋ ಕತೆಯನ್ನು ಹೇಳುತ್ತ, ತುಸುಹೊತ್ತು ಕಳೆದಾದಮೇಲೆ, ಅಕ್ಕ, ಒಂದಿಷ್ಟು ಹಾಡುತ್ತೀಯಾದರೆ ಕೇಳಿಕೊಂಡು ಹೋಗುತ್ತೇನೆ" ಎಂದ. ನನ್ನಮನಸ್ಸಿನಲ್ಲಿ ಕರಕರೆ ತುಂಬಿತ್ತಾದರೂ, ನಾನು ತಂಬೂರಿಯನ್ನು ಹಿಡಿದು ಸ್ವರ ಹೊರಡಿಸಿದೆ. ಎತ್ತಿಕೊಂಡ ಮಾರವಾ ರಾಗ ಬಾಯಿಯಿಂದ ಸುಖವಾಗಿ ನುಡಿಯದಂತೆ ಕಾಣಿಸಿತು. "ಮನಸ್ಸು ಉದಾಸೀನಗೊಂಡಿದೆ. ನೀನೆಹೇಳು, ಯಾವ ಚೀಸು ಆಗಬುದೆಂದು ಅಥವಾ ರಾಗವನ್ನಾದರೂ" ಎಂದೆ. "ಈ ಹೊತ್ತಿಗೆ ಪೂರ್ವಿ ಚೆನ್ನಾಗಿ ಒಪ್ಪುತ್ತದೆ. ನಾನು ಪಿಟೀಲು ತಂದಿಲ್ಲ. ನನಗೂ ಅದು ಇಷ್ಟವಾದ ರಾಗ; 'ಖಗುವಾ ಬೋಲೆಮೋರೆ ಹಟರಿಯಾ' ತೆಗೆದುಕೋ" ಎಂದ. ನಾನು ತೆಗೆದುಕೊಳ್ಳುವುದಕ್ಕೂ ನಾಲಕು ನಿಮಿಷ ಹಿಡಿಯಿತು. ಮೆಲ್ಲನೆ ರಾಗಾಲಾಪವನ್ನು ತೊಡಗಿ ಶ್ರುತಿಯಲ್ಲಿ ಲೀನಳಾಗಲು ಪ್ರಯತ್ನಿಸುತ್ತ ಖ...ಗು...ವಾ...ಬೋ...ಲೆ...! ಮೋ...ರೆ... ಹ...ಟ...ರಿ...ಯಾ... ಎಂದು ವಿಲಂಬ ಗತಿಯಲ್ಲಿ ತೊಡಗಿದೆ. ಪಲ್ಲವಿಯನ್ನೇ ತಿರುತಿರುಗಿ ಮೆಲುಕಾಡಿದೆ. ಅಷ್ಟೊಂದು ತಿಳಿದ ಹಾಡಿನ ಅಂತರಾ ನೆನಪಿಗೆ ಬರಲೊಲ್ಲದೆ, ಪದ್ಮನಾಭನ ಗೊಣಗುವಿಕೆಯಿಂದ ಅದನ್ನು ನೆನವರಿಸಿ ಅದನ್ನು ಹಾಡಬೇಕಾಯಿತು. ಸಂಜೆಯ ಹೊತ್ತಿನಲ್ಲಿ ಸೂರ್ಯ ಕಂತುತ್ತಿದ್ದ ವೇಳೆ, ನನ್ನ ಗಂಟಲನ್ನು ಯಾವುದೋ ಸುಪ್ತ ವ್ಯಥೆ ಕಾಡುತ್ತಿತ್ತು. ಅದನ್ನೇ ನಾನು ತೋಡಿಕೊಳ್ಳುತ್ತಿದ್ದೆನೋ ಏನೋ. ಅಂತು ಹಾಡನ್ನು ಪೂರ್ಣ ಮುಗಿಸಲು ಆಗಲಾರದೆ ತಂಬೂರಿಯನ್ನು ಕೆಳಕ್ಕಿರಿಸಿದೆ."(ಪುಟ 116) "ಹುಲಿಯಬಾಯಿಂದ ತಪ್ಪಿಸಿಕೊಂಡು, ಗುಬ್ಬಚ್ಚಿಯ ಸ್ನೇಹ ಮಾಡಿದರೆ, ಯಾವ ತೃಪ್ತಿ ಬಂದೀತು? ಅಸಹ್ಯ ಹುಟ್ಟಿತು; ವ್ಯಥೆ ಕಾಣಿಸಿತು. ತಂಬೂರಿಯನ್ನು ಹಿಡಿದುಕೊಂಡು ಭಾಗೇಶ್ರಿ ರಾಗದಲ್ಲಿ ಆಲಾಪಿಸತೊಡಗಿದೆ. "ಚೈನನಹೀಮೈತೊಪಿಯಾಬಿನ! ರಾತನಹಿನೀಂದಿಯದಿನನಹಿ ಚೈನ" ಎಂದು ಗೋಳುಗರೆದೆ. ಅದರಿಂದೇನುಬಂತು? ನಾನು ರಾಧೆಯಾಗಿದ್ದರೆ, ನನ್ನ ಅಂತರಂಗವನ್ನು ತಿಳಿದು ಆ ಕೃಷ್ಣ ನನಗೆ ಸಂತೃಪ್ತಿ ಕೊಡುತ್ತಿದ್ದನೋ ಏನೋ."(ಪುಟ 126)

ಹೀಗಿರುವ ಮಂಜುಳೆಗುರುಗಳ ಶಿಷ್ಯ ವೆಂಕಟು ಮನೆಗೆ ಬಂದಾಗ ಮನಸ್ಫೂರ್ತಿಯಾಗಿ ಹಾಡಿದಳು, ಸಂತೋಷಿಸಿದಳು. "ಶ್ರುತಿಯವಿಚಾರದಲ್ಲಿ ಅವನ ಕಿವಿಬಹಳಸೂಕ್ಷ್ಮವಾಗಿತ್ತು. ನಾನು ಸೋಹನಿ ರಾಗವನ್ನು ವಿಲಂಬಿತ ಗತಿಯಲ್ಲಿ ಎತ್ತಿಕೊಂಡೆ..... ಹಾಡನ್ನು ನಿಲ್ಲಿಸುವ ಆಲೋಚನೆ ಬರುವ ಮುಂಚೆಯೇ ವೆಂಕಟು ಗಂಡುದನಿಯಲ್ಲಿ ಮಂದ್ರ ಸ್ಥಾಯಿಯಲ್ಲಿ ತೇಲತೊಡಗಿದ. ನನ್ನದು ಮಧ್ಯಮ, ತಾರಕಗಳಿಗೆ ಒಲಿದ ಕಂಠ. ಕರುಳಿನ ಬುಡದಿಂದ ಹೊರಡುವ ದನಿ ಅವನದು. ಆ ಕಂಠದಲ್ಲಿ ಝೇಂಕಾರ, ಅತಿ ವಿಲಂಬಿತ ಸ್ವರಗಳ

ಮೇಲಿರುವ ಹಿಡಿತ ನನ್ನನ್ನು ಬೆರಗು ಮಾಡಿತು....”(ಪುಟ 134) ಹೀಗೆ ವೆಂಕಟುವಿನ ಗಾಯನದಿಂದ ಅಂತೆಯೇ ಅವನ ಅಂಗಸುಖದಿಂದ ಬಹುಕಾಲದ ನಂತರ ಆನಂದ ಪಡೆದಳು. ಕಾದಂಬರಿಯಲ್ಲಿ ಒಂದು ಸೂಕ್ಷ್ಮವನ್ನು ಗಮನಿಸಬಹುದು. ಸಂಗೀತದಲ್ಲಿನ ಅಭಿರುಚಿಯ ಮಟ್ಟಕ್ಕೆ ತಕ್ಕ ಹಾಗೆ ಅವರಿಂದ ಪಡೆದ ಸುಖದ ಸ್ವರೂಪವೂ ಇದೆ ಎಂಬಂತೆ ಸೂಕ್ಷ್ಮವಾಗಿ ಚಿತ್ರಿತವಾಗಿದೆ. ಸಂಗೀತದ ಗಾಳಿ ಗಂಧವಿಲ್ಲದೆ ಬರಿಯ ಆಡಂಬರ ಮಾಡುವ ಪೈಗಳಿಗೆ ಮಂಜುಳೆಯನ್ನ ಹುರಿದು ಮುಕ್ಕುವುದಷ್ಟೇ ಗೊತ್ತು. ನಂತರ ಬಾಳಿನಲ್ಲಿ ಬಂದ ಉಳ್ಳೂರರು ಅವಳ ಹಾಡನ್ನು ಸಾಂದರ್ಭಿಕ ಕಾರಣಾಂತರಗಳಿಂದ ಹೆಚ್ಚುಕಾಲ ಕೇಳಲಾರರು, ಅಂತೆಯೇ ದೈಹಿಕ ಕಾರಣದಿಂದ ಅವಳ ಬಳಿ ಏಕಾಂತದಲ್ಲಿ ಹೆಚ್ಚು ಸುಖಿಸಲಾರರು. ಹಾಗೆ ಹಾಡಿ ತಣಿಸಬಲ್ಲ ವೆಂಕಟು ಜೊತೆ ಅವಳು ಕಳೆದದ್ದು ಕೆಲಕಾಲ ಮಾತ್ರ. ಹೀಗೆ ಸಂಕೀರ್ಣವಾದ ಕತೆಯನ್ನು ರಚಿಸಿದ ಕಾರಂತರಿಗೆ ಅಲ್ಲಿನ ಭಾವಸಂವೇದೀ ಭಾಗಗಳಿಗೆ ತಕ್ಕನಾಗಿ ಸಂಗೀತದ ಚಿಕ್ಕ ವಿವರಣೆಗಳು ಒದಗಿಬಂದಿವೆ.

ಮರಳಿ ಮಣ್ಣಿಗೆ

ಅವರ ಪ್ರಸಿದ್ಧ ಕಾದಂಬರಿ ಮರಳಿ ಮಣ್ಣಿಗೆಯಲ್ಲೂ ಹೀಗೆ ಸಂತಾಪಶಮನಕ್ಕಾಗಿ ಸಂಗೀತವು ಉಪಯೋಗಕ್ಕೆ ಬರುತ್ತದೆ. ಬದುಕಿನ ದುಸ್ಸಹವಾದ ದುಃಖದ ಉಪಶಮನ ಸಂಗೀತದಿಂದಲೂ ಅಸಾಧ್ಯವೆಂಬ ಚಿತ್ರಣವೂ ಸಿಗುತ್ತದೆ. ಕಷ್ಟಕೋಟಲೆಗಳಿಂದ ಅನಿವಾರ್ಯ ಹಂಗಿನ ಜೀವನವನ್ನು ಸಾಗಿಸುತ್ತಿರುವ ನಾಗವೇಣಿ ಎಳವೆಯಲ್ಲಿ ಪಿಟೀಲು ವಾದನ ಕಲಿತವಳು. ನಂತರ ಬದುಕಿನ ದುಷ್ಕಾಲದಲ್ಲಿ ವಾಪಸ್ಸು ತಂದೆಯ ಮನೆಯಲ್ಲಿಉಳಿಯುವ ಪರಿಸ್ಥಿತಿ ಉಂಟಾದಾಗ, ಒಂದು ದಿನ ಅವಳ ಅಣ್ಣ ಸದಾಶಿವನು ಆತನ ಸ್ನೇಹಿತರೊಬ್ಬರು ಸುಮ್ಮನೆ ಖುಷಿಗಾಗಿ ಕಲಿತು ಏರ್ಪಡಿಸಿದ ಸಂಗೀತದ ಕಛೇರಿಗೆ ಅವಳನ್ನು ಕರೆದುಕೊಂಡು ಹೋದ. ಅದನ್ನು ಕೇಳುತ್ತ ಆ ರಾಗಾಲಾಪದಲ್ಲಿ ಮನಸ್ಸು ಕೊಟ್ಟ ನಾಗವೇಣಿಯ ಒಡಲು ಸಂದ ಬಾಳ್ವೆಯ ವಿವಿಧ ಸಂಗತಿ, ಪ್ರಸ್ತಾರಗಳನ್ನು ನೆನೆಯುತ್ತಿತ್ತು. ಬಾಳಿನ ಸಾವು ಸಂಕಟ ಬಯಕೆ ಬೇನೆಗಳನ್ನು ರಾಗಾಲಾಪವು ಮೆಲಕು ಹಾಕುವಂತೆ ಮಾಡಿತ್ತು. ತಂಗಿಯ ಬೇಸರವು ಇದರ ಅಭ್ಯಾಸದಿಂದ ದೂರ ಹೋಗಬಹುದೆಂದು ಅಣ್ಣ ಯೋಚಿಸಿದರೆ, ಭಜನೆಯಲ್ಲಿ ಮನಸ್ಸು ಕೊಟ್ಟರೆ ಆಕೆಯ ಮನಸ್ಸು ತಿಳಿಯಾಗಬಹುದೆಂದು ತಂದೆ ಯೋಚಿಸುವರು. ಭಜನೆಯ ತಾಳ ಹಿಡಿಯಲು ಮನಸ್ಸು ಸ್ಥಿರವಿಲ್ಲವೆಂದು ಹೇಳಿದ್ದ ನಾಗವೇಣಿಗೆ ತಾಳ ಹಿಡಿದಾಗ ಬಾರದ ಶಾಂತಿಯು ತಂತಿ ಹಿಡಿದಾಗ ಬಂದೀತೇ ಎಂಬ ಅನುಮಾನವಿತ್ತು. ಆದರೂ ಒಂದು ಹೊಸಬಗೆಯ ಪ್ರಯತ್ನವಾಗಿ ಅದರಲ್ಲಿ ತೊಡಗಿಸಿಕೊಂಡಳು. ಸಣ್ಣವಳಲ್ಲಿ ಕಲಿತಿದ್ದ ಸುಬ್ರಾಯ ಗುರುಗಳ ಬಳಿಯೇ ಶಿಷ್ಯತ್ವ ಮುಂದುವರೆಸಿದಳು. ಸುಬ್ರಾಯರದು ಇನ್ನೊಂದು ಬಗೆಯ ದುಃಖ. ಅವರು ಅಂತರಂಗದ ದುಗುಡ ಕಳೆಯಲು ಹಾಡಿಕೊಳ್ಳುವವರಲ್ಲ. ಅದೇ ಅವರ ಉದ್ಯೋಗ. ಅವರನ್ನು ಸಂಸಾರ ತಾಪತ್ರಯಗಳು ಹಣ್ಣು ಮಾಡಿಬಿಟ್ಟಿವೆ. ನಾಗವೇಣಿಗೆ ಒಮ್ಮೊಮ್ಮೆ: ‘ಮಗು ಒಂದೊಂದು ಸಾರಿ ಈ ಸಂಸಾರದ ಕರಕರೆ ಬಂತೆಂದರೆ ಪಿಟೀಲು ಕಮಾನು ಎರಡನ್ನೂ ಮುರಿದು ಒಲೆಗೆ ಹಾಕಿ ಎಲ್ಲಾದರೂ ಹೋಗುವ ಎನ್ನಿಸುತ್ತದೆ’ ಎನ್ನುವರು. (ಪುಟ 289) ನಾಗವೇಣಿಯು ಇಂತಹ ಮಾತುಗಳನ್ನು ಕೇಳಿ ಸಂಗೀತವು ನಿರರ್ಥಕವೆಂಬ ತರ್ಕ ಸರಣಿಗೆ ಸಿಲುಕಿದರೂ, ಅಂದಿನ ಸಂಗೀತವು ನೀಡಿದ ಚಿತ್ತಶಾಂತಿಯನ್ನು ಮರೆಯಲಾರಳು. ಅದನ್ನು ನೆನೆದು ಕಠಿಣ ಅಭ್ಯಾಸದಲ್ಲಿ ಒಮ್ಮೊಮ್ಮೆ ತೊಡಗುವಳು. ಹೀಗೆ

ಐದುವರ್ಷಗಳು ಕಳೆದವು. ಅಣ್ಣ ಸದಾಶಿವನು ತಂಗಿಯ ಸಂಗೀತ ಪ್ರಗತಿಯನ್ನು ಕಂಡು ಸ್ನೇಹಿತರಿಗೆ ಋಣಬಡಿಸಬೇಕೆಂದು ನಿಶ್ಚಯಿಸಿ ಒಂದು ದಿನ ಕಲೆಹಾಕಿದನು. ಆಕೆಯ ವಾದನ ವೈಖರಿಯನ್ನು ಆಲಿಸಿ ಹಿಂದೆ ಪಿಟೀಲು ನುಡಿಸಿದ್ದ ರಾಘವೇಂದ್ರರಾಯರು ಸಂತೋಷಿಸಿದರು. ಒಂದು ಜೀವವು ವ್ಯಥೆಯನ್ನು ನುಂಗಿಕೊಳ್ಳಲು ಸಂಗೀತವು ನೆರವಾಯಿತೆಂದು ಹಿಗ್ಗಿದರು. ಅವಳ ನೆರಳಲ್ಲೇ ಬೆಳೆದ ಮಗ ರಾಮನೂ ಆಕೆಯಿಂದ ಅಷ್ಟಿಷ್ಟು ಕಲಿತನು. ತಂದೆಯು ಹಠಾತ್ ಮರಣಿಸಿದ ತರುವಾಯ ನಾಗವೇಣಿಯು ಅಣ್ಣನ ಮನೆಯಲ್ಲೇ ಉಳಿಯಬೇಕಾಗಿ ಬಂತು. ಅಲ್ಲಿ ಅವನ ಮನೆಯವರ ಅಸಮಾಧಾನದ ಮೆಲುನುಡಿಗಳು ಅವಳ ಜೀವವನ್ನು ಹಿಡಿಯಾಗಿಸಿತು. ಅವಳ ಆ ವೇದನೆಯನ್ನು ನಿತ್ಯವೂ ದೂರ ಮಾಡಿದ್ದು ಪಿಟೀಲು ಕಮಾನು.

ಕಾದಂಬರಿಯಲ್ಲಿ ಬದುಕಿನ ವೇದನೆಗಳನ್ನು ಸಂಗೀತವು ಶಮನ ಮಾಡುವುದೆಂಬ ಭರವಸೆಯನ್ನೂ ಮೀರಿದ ದುಃಖವು ಹರಿಯುತ್ತದೆ. ಜೀವನದ ದುರ್ಭರ ಸನ್ನಿವೇಶಗಳು ಸಂಗೀತವನ್ನೂ ಅಣಕಿಸುತ್ತವೆ. ಗುರು ಸುಬ್ರಾಯರು ಸಂಸಾರದ ದುಃಖ ನೆನೆದು ಪಿಟೀಲು ಮುರಿಯಬೇಕೆಂದರೆ ಇನ್ನೊಮ್ಮೆ ರಾಮನು ಪಿಟೀಲಿನ ತಂತಿಗಳನ್ನು ತಂದಾಗ ನಾಗವೇಣಿಯು **"ಮಗು ಇದರ ಬದಲು ಒಂದು ಸೀರೆಯ ತುಂಡನ್ನು, ಹಾಳಾದರೂ ಹಾಳು ತಂದಿದ್ದರೆ ಎಷ್ಟು ಉಪಕಾರವಾಗುತ್ತಿತ್ತು! ಆಯಿತಲ್ಲ–ಪಿಟೀಲಿನ ತಂತಿ ಕಡಿದು ಆರು ತಿಂಗಳ ಮೇಲಾಯಿತು; ಹೊಟ್ಟೆಗಿಲ್ಲದವರಿಗೆ ಏಕೆ ಸಂಗೀತ!"** ಎಂದಳು. (ಪುಟ 351). ಹೊರಗೆ ತಿರುಗಾಡಲು ಸರಿಯಾದದ್ದೊಂದು ಸೀರೆಯೂ ಇಲ್ಲದ ಬದುಕಿಗೆ ಸಂಗೀತದ ದನಿಯು ಬಟ್ಟೆಯನ್ನೀಯುವುದೇ ಎಂಬುವ ಅವಳ ಆರ್ತತೆಯು ಪರಿಸ್ಥಿತಿಯ ತೀವ್ರತೆಯನ್ನು ತಿಳಿಸುತ್ತದೆ. ಆಮೇಲೆ ಅವಳಿಗೆ ಹೊಸ ಸೀರೆ ದೊರೆತದ್ದು ರಾಮನು ರಜೆಯಲ್ಲಿ ಮಯ್ಯರ ಮಗಳಿಗೆ ಸಂಗೀತ ಪಾಠ ಹೇಳಿದ್ದರಿಂದಲೇ! ಅಂದರೆ, ಸಂಗೀತವು ಸಂಪಾದನೆಯ ಮೂಲವಾಗಿ ಬಟ್ಟೆ ದೊರೆಯಿತೇ ಹೊರತು, ಬಟ್ಟೆಯಿಲ್ಲದ ದುಃಖ ಸಂಗೀತದಿಂದ ಶಮನಗೊಳ್ಳಲಿಲ್ಲ. ಹಸಿದವನಿಗಲ್ಲ ವೇದಾಂತ ಎಂಬ ವಿವೇಕಾನಂದರ ಮಾತಿನಂತೆ, ವೇದಾಂತವು ಎಲ್ಲರ ಬುದ್ಧಿಯಲ್ಲೂ ತಕ್ಕಮಟ್ಟಿಗೆ ಇರುವುದಾದರೂ, ಬದುಕಿನ ಅವಶ್ಯಕತೆಗೆ ವೇದಾಂತ ಅನ್ನ ನೀಡದು, ವೇದಾಂತವನ್ನ ಬೋಧಿಸಿ ಅನ್ನ ಗಿಟ್ಟಿಸಬಹುದು ಎಂಬ ಕಟುಸತ್ಯವನ್ನ ಇಲ್ಲಿ ಕಾಣಬಹುದು. ರಾಮನು ಪದವೀಧರನಾಗಿ ನಂತರ ಮಯ್ಯರ ಹೋಟೆಲು ನೌಕರನಾಗಿ ಜೀವನವು ಬಿಡುವಿಲ್ಲದ ಚಾಕರಿಯಲ್ಲಿ ವ್ಯಸ್ತವಾದ ಮೇಲೆ ಬೇರೆಯ ನೌಕರಿ ಹುಡುಕಿ ಮುಂಬಯಿಗೆ ಬಂದನು. ಅಲ್ಲಿಯೂ ಕೆಲಸಗಳು ದೊರಕದೆ ಕೊನೆಗೆ ಧನಿಕರ ಮನೆಗಳಲ್ಲಿ ಸಂಗೀತ ಶಿಕ್ಷಕರು ಬೇಕೇ ಎಂದು ಕೇಳಿ ಎರಡು ಮನೆಗಳಲ್ಲಿ ಅವಕಾಶ ಗಿಟ್ಟಿಸಿದನು. ಅವನಿಗೆ ಮೊದಲಿನಿಂದಲೂ ಚಿತ್ರಕಲೆ ಕಲಿಯುವ ಆಸಕ್ತಿಯನ್ನು ಅಲ್ಲಿನ ಪ್ರದರ್ಶನವೊಂದು ತೀವ್ರಗೊಳಿಸಿತು. ಅದನ್ನು ತಾಯಿಗೆ ಹೇಳಿದಾಗ, **"ನೀನು ಚಿತ್ರಕಲೆ ಕಲಿಯಬಾರದೆನ್ನಲಾರೆ. ನಿನ್ನ ಸಣ್ಣತನದ ಆ ಮರುಳು ಇಷ್ಟು ವರ್ಷ ಹುದುಗಿಕೊಂಡಿದ್ದದ್ದೇ ಆಶ್ಚರ್ಯ! ಆದರೆ ಅದರಿಂದಾಗಲಿ, ಸಂಗೀತದಿಂದಾಗಲಿ ನಿನಗೆ ಅನ್ನ ದೊರೆಯಲಾರದು. ಬೇಗ ಮುಂಬಯಿ ವಾಸ ಮುಗಿಸಿ ಮನೆಗೆ ಬಾ ಮಗು"** ಎಂದು ಬರೆದಳು. ಕಲೆಗೆ ಯಾಂತ್ರಿಕ ಜಗತ್ತಿನಲ್ಲಿರುವ ನಿರಾಸಕ್ತಿಯ ಕುರಿತು ನಿಟ್ಟುಸಿರೇ ಮತ್ತೆ ಅವಳಲ್ಲಿ ಪ್ರಕಟವಾಗಿದೆ. ಮುಂದೆ ಅವನು ನೋವಾ ಎಂಬಾಕೆಯನ್ನು ತನ್ನ ವಯಲಿನ್ ವಾದನದಿಂದ ಮನವೊಲಿಸಿ ಚಿತ್ರಕಲಾ ವ್ಯಾಸಂಗಿಯಾದ. ಆಕೆ ಯಹೂದಿ. ಹಿಟ್ಲರನ ವರ್ಣದ್ವೇಷಕ್ಕೆ ಬಲಿಯಾಗಿ ಮುಂಬಯಿಗೆ ಓಡಿ ಬಂದ ಕುಟುಂಬದವಳು. ಬದುಕಿನ ಈ ಅಸಾಧ್ಯ ನೋವನ್ನು ಆಕೆ

ಚಿತ್ರಕಲೆಯಲ್ಲಿ ಮರೆಯುತ್ತಿದ್ದಳು. ಬದುಕಿನ ದುರಂತಗಳನ್ನು ಹೀಗೆ ಹಿಡಿದಿಟ್ಟು ಅದನ್ನು ಕಲೆಯ ತಲ್ಲೀನತೆಯಲ್ಲಿ ಮರೆಯುವುದನ್ನೂ, ಬದುಕಿನ ದುರಂತಗಳು ದುಸ್ಸಹವಾದಾಗ ಕಲೆಯೂ ಅಪಥ್ಯವಾಗುವ ವೈರುಧ್ಯವನ್ನು ಕಾರಂತರು ತುಂಬ ಚೆನ್ನಾಗಿ ಹಿಡಿದಿಟ್ಟಿದ್ದಾರೆ. ಕೊನೆಯಲ್ಲಿ ಒಂದು ಮುಖ್ಯ ಅಂಶ ಗಮನಿಸಬೇಕು. ರಾಮನು ಸೃಷ್ಟಿಶೀಲ ಕಲಾವಿದ. ಪಾಠ ಹೇಳಿಕೊಡುವ ಸಿದ್ಧ ಪಠ್ಯದ ಮೂಲಕ ಸಂಗೀತ ಅರಿತವನಲ್ಲ. "ಅವನ ಎಲ್ಲ ರಾಗಾಲಾಪಗಳು ಅವನ ಸೃಷ್ಟಿಯ ನೆಲೆಯ ಮೇಲೆ ನಿಂತವು. ನಿನ್ನೆ ಬಾರಿಸಿದಂತೆ ಇಂದು ಅವನೇ ಬಾರಿಸಲಾರನೆಂದ ಮೇಲೆ ಶಿಕ್ಷಣದ ವಿಷಯದಲ್ಲಿ ಅವನು ಹಿಂದೆಯೇ ಸರಿ" (ಪುಟ 389) 'ಐರೋಪ್ಯ ಸಂಗೀತದಲ್ಲಿ ಸೃಷ್ಟಿಶೀಲತೆಗಿಂತಲೂ ನೈಪುಣ್ಯಕ್ಕೆ ಆದರ ಹೆಚ್ಚು'[8] ಆದರೆ ಬದಲಾದ ಭಾರತೀಯ ಪ್ರಜ್ಞೆಯು ಅದನ್ನೇ ಅನುಸರಿಸಲು ಹೊರಡುವುದರಿಂದ ರಾಮನ ಸೃಷ್ಟಿಶೀಲ ಗುಣಕ್ಕೆ ಅಲ್ಲಿ ಬೆಲೆಯಿಲ್ಲ. ಇಂತಿಂತಹ ರಾಗ ಕಲಿಸಿ ಎಂದು ಆಜ್ಞೆ ಮಾಡುವವರಿಂದ ಯಾವ ಔನ್ನತ್ಯವನ್ನ ನಿರೀಕ್ಷಿಸಬಹುದು?! ಕಾದಂಬರಿಯು ಇಂತಹ ಸಂಗೀತದ ಮತ್ತು ಸಂಗೀತಗಾರನ ಹಲವು ಸಮಸ್ಯೆಗಳನ್ನು ಮೇಲೆತ್ತಿ ತೋರಿಸಿ ನಮ್ಮ ಮನಸ್ಸನ್ನು ಆರ್ದ್ರಗೊಳಿಸುತ್ತದೆ.

ಸುಬ್ಬಣ್ಣ

ಮಾಸ್ತಿಯವರ ನೀಳ್ಗತೆ/ ಕಿರುಕಾದಂಬರಿ ಸುಬ್ಬಣ್ಣ ಬಹು ಪ್ರಸಿದ್ಧವಾದ ಕೃತಿ. ಗಾತ್ರದಲ್ಲಿ ಕಿರಿದಾದರೂ ಅದು ನೀಡಿರುವ ಪ್ರಶಾಂತ ಜೀವನದರ್ಶನದ ನೆಲೆಯಿಂದ ಕನ್ನಡದಲ್ಲಿ ಒಂದು ಮುಖ್ಯಕೃತಿಯೆಂದು ಪರಿಗಣಿತವಾಗಿದೆ. ಅದು ಸಂಗೀತಗಾರನೊಬ್ಬನ ಜೀವನದ ಸಂಕಷ್ಟಗಳ ಕತೆಯಾಗಿಸಂಗೀತದ ದೃಷ್ಟಿಯಿಂದ ಅದು ನೀಡಿರುವ ಕೊಡುಗೆ ಅಲ್ಪವೆಂದು ಮೇಲ್ನೋಟಕ್ಕೆ ತೋರುತ್ತದೆ. ಆದರೆ ಆ ಸರಳತೆಯಲ್ಲೇ ಇರುವ ನಿರಹಂಕಾರ ಗುಣವು ಸಂಗೀತಗಾರನು ಕಲೆಗೆ ತೋರಿಸಬೇಕಾದ ಗೌರವವನ್ನು ಕುರಿತು ಸುಬ್ಬಣ್ಣನ ಜೀವನದ ಮೂಲಕ ತಿಳಿಸುತ್ತದೆ.ಸಂಸ್ಕೃತ ವಿದ್ವಾಂಸರ ಕುಟುಂಬದವನಾದ ಸುಬ್ಬಣ್ಣನಿಗೆ ಸಂಗೀತದಲ್ಲಿ ಅತೀವ ಆಸಕ್ತಿ. ಸಂಸ್ಕೃತದ ಕಡೆ ಗಮನ ಹೋಗಲಿಲ್ಲ. ಒಮ್ಮೆ ಯೋಗಾಯೋಗದಿಂದ 8ನೇ ವಯಸ್ಸಿನಲ್ಲಿ ಮಹಾರಾಜರೆದುರು ಸ್ತೋತ್ರವನ್ನು ಹಾಡುವ ಅವಕಾಶ ಒದಗಿಬಂತು. ಅವನ ಹಾಡಿಕೆ ನೋಡಿ ದೊರೆಗಳು ಸಂತೋಷಿಸಿ, ಚೆನ್ನಾಗಿ ಕಲಿ; ಸನ್ಮಾನ ಮಾಡುತ್ತೇನೆ ಎಂದರು. ಮೊದಲೇ ಆಸಕ್ತನಿದ್ದ ಸುಬ್ಬಣ್ಣನಿಗೆ ಈ ಮಾತು ಹೆಚ್ಚಿನ ಉತ್ಸಾಹ ಕೊಟ್ಟಿತು. ಮನೆಯಲ್ಲಿ ಸಂಗೀತ ಕಲಿಕೆಗೆ ಮುಕ್ತ ವಾತಾವರಣ ಇರಲಿಲ್ಲ. ಅಸಲಿಗೆ ಸುಬ್ಬಣ್ಣನ ಸಂಗೀತ ಅಭ್ಯಾಸವೇ ಮನೆಯಲ್ಲಿ ತಿಳಿದಿರಲಿಲ್ಲ.ಸಂಗೀತ ವಿದ್ವಾಂಸರ ಮನೆಯಲ್ಲಿ, ವಾರಸ್ತ್ರೀಯರ ಮನೆಯಲ್ಲಿ ನಡೆಯುತ್ತಿದ್ದ ಕಛೇರಿಗಳಿಗೆ ನಿರಂತರ ಹೋಗುತ್ತಿದ್ದ ಸುಬ್ಬಣ್ಣನು, ನೀಲಾಸಾನಿ ಎಂಬುವಳ ಮನೆಯಲ್ಲಿ ಕಠಿಣ ಅಭ್ಯಾಸವನ್ನೂ ನಡೆಸಿದ್ದ. ಮೃದಂಗ ಪಿಟೀಲಿನಲ್ಲಿ ನಿಪುಣನಾಗಿದ್ದ. ಸುಬ್ಬಣ್ಣನಲ್ಲಿ ಶ್ರದ್ಧಾ ಭಕ್ತಿಯನ್ನಿಟ್ಟ ನೀಲಾಸಾನಿ ಅವನಿಗಾಗಿ ಮನೆಯ ಒಂದು ಕೊಠಡಿಯನ್ನೇ ಬಿಟ್ಟುಕೊಟ್ಟಿದ್ದಳು. ತಂದೆಗೆ ತಾನು ಸಂಗೀತ ಕಲಿಯುತ್ತಿರುವೆನೆಂದು, ಅದರಲ್ಲೇ ಜೀವನೋಪಾಯ ಕಂಡುಕೊಳ್ಳುವುದಾಗಿ ಹೇಳಿದಾಗ ಬಹಳ ನೊಂದುಕೊಂಡರು, "ಒಬ್ಬನೇ ಮಗ ಸಂಸ್ಕೃತದಲ್ಲಿ ಪಂಡಿತನಾಗದೆ ಹಾಡುಗಾರಿಕೆ ಮನುಷ್ಯನಾದನಲ್ಲಾ ಎಂದು ಅವರಿಗೆ ಬಹಳ ವ್ಯಥೆಯಾಯಿತು. ಸಭೆಯಲ್ಲಿ ವೈದಿಕ ಮಂಡಲಿಯಲ್ಲಿ ಕುಳಿತು ಸ್ವಸ್ತಿಯನ್ನುಹೇಳಿಮಹಾರಾಜರಿಗೆ ಆಶೀರ್ವಾದ ಮಾಡುವುದು ಹೇಗೆ? ಎಲ್ಲರೆದುರಿಗೆ ಕಿಂಕರನಂತೆ ಕುಳಿತು ಹಾ ಹೂ ಎಂದು ಹಾಡುವುದು ಹೇಗೆ?"

(ಪುಟ 21) ಎಂಬುದು ಅವರ ತರ್ಕಶೈಲಿ. ತಾಯಿಗೂ "ತಾನುಹೆತ್ತ ಒಬ್ಬ ಮಗ ಸೂಳೆಯಂತೆ ಸಭೆಯಮುಂದೆ ಕುಳಿತು ಹಾಡುವುದೇ ಎಂದು ಅವರಿಗೆಬಹಳಹೀನಾಯ" (ಪುಟ 21). "ಸಂಸ್ಕೃತ ಕಲಿತವರು ಮಹಾರಾಜರಿಗೆ ಆಶೀರ್ವಾದ ಮಾಡುತ್ತಾರೆ; ಹಾಡು ಕಲಿಯುವವಳು ಮುಖ್ಯವಾಗಿ ಸೂಳೆ; ಆದ್ದರಿಂದ ಸಂಸ್ಕೃತ ಹೆಚ್ಚು, ಹಾಡುಗಾರಿಕೆ ಕಡಿಮೆ. ಹೀಗಾದ ಹೊಣೆಗಾರಿಕೆಯನ್ನು ಅತ್ತೆಯು ಹೊಸದಾಗಿ ಮದುವೆಯಾಗಿ ಬಂದಿದ್ದ ಸೊಸೆ ಲಲಿತೆಯ ಮೇಲೇ ಹಾಕಿದಳು. ಸುಬ್ಬಣ್ಣ ಸಂಗೀತ ಕಲಿತನೆಂದೊಡನೆ ಅವನು ಸೂಳೆಯ ಮನೆಗೆ ಹೋಗುತ್ತಾನೆಂದು ಅವರು ಗೊತ್ತು ಮಾಡಿದರು. 'ಈಗಿನ ಹುಡುಗಿಯರಿಗೆ ಗಂಡನನ್ನುಸರಿಯಾಗಿಟ್ಟುಕೊಳ್ಳುವುದಕ್ಕೆ ಬರುವುದಿಲ್ಲ. ಹೆಂಗಸು ಗಂಡನನ್ನಸರಿಯಾಗಿ ಕಂಡರೆ ಅವನು ಇನ್ನೊಂದು ಕಡೆ ಏಕೆಹೋಗುತ್ತಾನೆ' ಅಂದರು" (ಪುಟ 21).

ಅಂದಿನ ಕಾಲಕ್ಕೆ ಸಾಂಪ್ರದಾಯಿಕ ವೈದಿಕ ಮನೆಗಳಲ್ಲಿ ಇಂತಹ ಕಟು ಅಭಿಪ್ರಾಯವಿದ್ದದ್ದನ್ನು ವಾಗ್ಗೇಯಕಾರರಾದ ಶ್ರೀ ಮೈಸೂರು ವಾಸುದೇವಾಚಾರ್ಯರೂ ನೆನಪಿಸಿಕೊಂಡಿದ್ದಾರೆ. ಅವರ ತಂದೆಯೂ ಪ್ರಸಿದ್ಧ ಪುರಾಣ ವಿದ್ವಾಂಸರು. ಮೂರು ವರ್ಷವಿದ್ದಾಗಲೇ ತಂದೆ ತೀರಿಹೋದ ಕಾರಣ ಅವರು ತಾತನ ನೆರಳಲ್ಲಿ ಬೆಳೆದರು. "ಸಂಗೀತವೆಂದರೆ ಅವರಿಗೆಸೇರದು. ಸಂಗೀತಗಾರರಿಗೆ ನೀತಿಯಿಲ್ಲ ನಿಯಮವಿಲ್ಲ; ಆಚಾರವಿಲ್ಲ ಅಧ್ಯಯನವಿಲ್ಲ. ಆದ್ದರಿಂದ ಸದ್ಬ್ರಾಹ್ಮಣ ವಂಶದಲ್ಲಿ ಹುಟ್ಟಿದವರಿಗೆ ಸಂಗೀತ ವಿದ್ಯಾಭ್ಯಾಸ ಖಂಡಿತ ಸಲ್ಲದು ಸಲ್ಲದು ಎಂಬುದು ಅವರ ನಿಶ್ಚಿತಾಭಿಪ್ರಾಯವಾಗಿತ್ತು. ಆಸ್ಥಾನ ವಿದ್ವಾನ್ ಸುಬ್ಬರಾಯರಲ್ಲಿ ಸಂಗೀತಾಭ್ಯಾಸ ಮಾಡುತ್ತಿದ್ದ ವಿಚಾರ ತಿಳಿದೊಡನೆಯೇ 'ವಂಶಕ್ಕೇ ಕಳಂಕ ತರುವಂಥ ಕೆಲಸಕ್ಕೆ ಮನಸ್ಸು ಹಾಕಿದನಲ್ಲ ವಾಸು!' ಎನಿಸಿತು ಅವರಿಗೆ! ಈ ದುಶ್ಚಟವನ್ನು ಮೊಳಕೆಯಲ್ಲಿಯೇ ಮುರಿಯದಿದ್ದರೆ ಸರ್ವನಾಶವಾದೀತೆಂದು ಹೆದರಿದರು. ಅಂದಿನಿಂದ ಸುಬ್ಬರಾಯರ ಮನೆಗೆ ಪಾಠಕ್ಕಾಗಲೀ ಕಛೇರಿಗಳನ್ನು ಕೇಳುವುದಕ್ಕಾಗಲೀ ಹೋಗ ಕೂಡದೆಂದು ನನಗೆ ಕಟ್ಟಪ್ಪಣೆ ಮಾಡಿದರು. ಆದರೂ ಕಣ್ಣು ತಪ್ಪಿಸಿ ಸಂಗೀತಪಾಠಕ್ಕೆ ಹೋಗುತ್ತಿದ್ದದ್ದು ಗೊತ್ತಾಗಿ ಒಂದು ದಿನ ತಾತನಿಗೆ ಕೋಪ ನೆತ್ತಿಗೇರಿತು. ತತ್ಕಾಲಕ್ಕೆ ಕೈಗೆ ಸಿಕ್ಕ ನೀರು ಸೇದುವ ಹಗ್ಗದಿಂದಲೇ ಚೆನ್ನಾಗಿ ಹೊಡೆತಕೊಟ್ಟು ಸಂಸ್ಕೃತಪಾಠಶಾಲೆಯ ಪ್ರೌಢಶಿಕ್ಷಣದ ಪಾಠಗಳನ್ನು ಬಿಟ್ಟು ಮತ್ತಿನ್ನಾವ ವಿಚಾರಕ್ಕಾದರೂ, ಅದರಲ್ಲೂ ಸಂಗೀತಕ್ಕೆ ಗಮನಕೊಟ್ಟರೆ ಅಂದೇ ಮನೆಬಿಟ್ಟು ಓಡಿಸುವುದಾಗಿ ಬಲವಾಗಿ ಬೆದರಿಕೆ ಹಾಕಿದರು. ನನ್ನ ಮೇಲೆ ತಮ್ಮ ಕಾವಲನ್ನು ಬಲಪಡಿಸಿದರು"[9]

ಇಂತಹ ಸಮಕಾಲೀನ ಉದಾಹರಣೆಗಳು ಆ ಕಾಲಕ್ಕೆ ಬಹುವಾಗಿ ಸಿಗುವ ಕಾರಣ, ಸುಬ್ಬಣ್ಣನ ಸಂಗೀತ ಕಲಿಕೆಯ ಮತ್ತು ಅಂದಿನ ವಸ್ತುಸ್ಥಿತಿಯ ಚಿತ್ರಣದಲ್ಲಿಯಾವುದೇ ಅತಿಶಯವಿಲ್ಲ. ಅವನು ತನ್ನ ಸಂಗೀತದ ಒಲವಿಗೆ ಸಾಂಸಾರಿಕ ಒತ್ತಡಗಳ ನಡುವೆಯೂ ತೆತ್ತುಕೊಂಡ ಎಂಬುದನ್ನು ಮಾಸ್ತಿ ಬಹಳ ಸರಳ ರೀತಿಯಲ್ಲೇ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾರೆ. ಅಸೂಯಾಪರರಿಂದಾಗಿ ಅವನಿಗೆ ನವರಾತ್ರಿ ಸಂದರ್ಭದಲ್ಲಿ ಹಾಡಲು ಅವಕಾಶವಾಗಲಿಲ್ಲ. ನಂತರ ಮುಮ್ಮಡಿ ಒಡೆಯರ್ ಅವರು ತೀರಿಕೊಂಡ ಪರಿಣಾಮ ರಾಜಾಶ್ರಯದ ಔದಾರ್ಯ ತುಂಬ ಕಡಿಮೆಯಾಯಿತು. ಮನೆಯಲ್ಲಿಯೂ ಸಂಸಾರದಲ್ಲಿ ವಿರಸಗಳು ಹೆಚ್ಚಿದವು. ಇಲ್ಲಿ ಕಂಡುಬರುವ ಇನ್ನೊಂದು ವೈರುಧ್ಯ ಎಂದರೆ ಧನಸಂಪಾದನೆಯ ವಿಚಾರ. "ಕಛೇರಿಗಳಲ್ಲಿಹಾಡುವುದಕ್ಕೆ ಅವನು ಹಿಂತೆಗೆಯುತ್ತಿದ್ದನು. ಆದ್ದದ್ದರಿಂದ ಸಂಪಾದನೆಯಿಲ್ಲ. ಸೂಳೆಯರಿಗೆ ಪಾಠ ಹೇಳುವುದಾದರೆ ಅವರು ಹಣ

ಕೊಡುವುದಕ್ಕೆ ಸಿದ್ಧವಾಗಿದ್ದರು. ಆದರೆ ಅದು ನೀಚಾನ್ನ. ತಂದೆಯ ಪರಿಶುದ್ಧವಾದ ಜೀವನಕ್ಕೆ ಅವನು ಇಂಥ ಕಲುಷಿತವಾದ ಸಂಪಾದನೆಯನ್ನು ತಂದು ಸೇರಿಸಲೇ ಎಂದು ಸಮ್ಮತಿಸಲಿಲ್ಲ"(ಪುಟ 28) ಎಂದುಕೊಂಡ. ಹೀಗೆ ಹಲವು ಸಂಪ್ರದಾಯದ ಬೇಡಿಗಳಿಂದ, ಸುತ್ತಲ ಜನರ ಸಂಕುಚಿತತೆಯಿಂದ ಅವನ ಸಂಗೀತ ಅಲ್ಲಿ ಬಾಳದೇ ಹೋಯಿತು. ಮನೆಯಲ್ಲಿ ತಾಯಿಯೊಡನೆ ವಿರಸ ಅತಿಯಾಗಿ, ಹೇಳದೇ ಕೇಳದೇ ಹೆಂಡತಿ ಮಗುವಿನ ಸಮೇತ ಮನೆ ಬಿಟ್ಟು ದೇಶಾಂತರ ಹೋದ. ಹೋಗುವಾಗ ಅದೇ ನೀಲಾಸಾನಿಯ ಬಳಿ ಸಾಲ ಪಡೆದಿದ್ದ! ಹೋಗಿ ಕಲಕತ್ತೆಯಲ್ಲಿ ನೆಲೆಸಿದ. ಅಲ್ಲಿಯೂ ಅವನಿಗೆ ಹೇಳಿಕೊಳ್ಳುವ ಶ್ರೀಮಂತಿಕೆ ಬರದೇ ಹೋದರೂ ಜೀವನಕ್ಕೆ ಯೋಚನೆಯಿಲ್ಲವಾಯಿತು. ಆದರೆ ವಿಧಿ ಅವನಿಗೆ ದೀರ್ಘ ಸುಖವನ್ನು ಬರೆದಿರಲಿಲ್ಲ. ಮಗ, ಮಗಳು ಮತ್ತು ಹೆಂಡತಿಯು ಅಕಾಲದಲ್ಲಿ ತೀರಿಕೊಂಡರು. ಇಂತಹ ಸಂಕಷ್ಟ ಪರಂಪರೆಯಿಂದ ಜರ್ಜರಿತನಾದ ಸುಬ್ಬಣ್ಣ ಜೀವನದಲ್ಲಿ ಅನಾಸಕ್ತನಾದ. ಕಲಕತ್ತೆಯ ಮನೆಯು ಭಯಾವಹವಾಗಿ, ಎಲ್ಲಿಗಾದರೂ ಹೋಗಿ ಜೀವಿಸಿದರಾಯ್ತೆಂದು ಕಡೆಗೆ ಮುಂಬಯಿಗೆ ಬಂದ. ಅಲ್ಲಿ ಸಾಹುಕಾರನೊಬ್ಬನ ಕೋರಿಕೆಯಂತೆ ಅವನ ಮನೆಯಲ್ಲಿದ್ದು ಪಿಟೀಲು ಬಾರಿಸುತ್ತಿದ್ದ. ನಂತರ ಊರಿಗೆ ಮರಳಬೇಕೆಂಬ ಆಸೆಯಾಗಿ ಮೈಸೂರು ಭಾಗ ಸೇರಿದ. ತೊರೆಯಪುರದಲ್ಲಿ ಜೀವಿಸಿ ಕೆಲ ಆಸಕ್ತಿಕರ ಘಟನೆಗಳೊಡನೆ ಜೀವನ್ಮುಕ್ತನಾದ ಎಂಬಲ್ಲಿಗೆ ಕತೆ ಮುಗಿಯುತ್ತದೆ. ಜೀವನದಲ್ಲಿ ಸಮದರ್ಶಿಯಾಗಿ ಬದುಕಬೇಕಾದ ಬಹುದೊಡ್ಡ ತತ್ತ್ವದರ್ಶನವನ್ನು ಕಟ್ಟಿಕೊಡುವ ಕೃತಿಯು, ಅದನ್ನು ವ್ಯಕ್ತಪಡಿಸಲು ಸುಬ್ಬಣ್ಣನ ಕಾಲಕ್ರಮೇಣ ಮಾಗುವ ವ್ಯಕ್ತಿತ್ವ ಮತ್ತು ಅವನ ಸಂಗೀತವನ್ನು ಅಡಿಪಾಯವಾಗಿ ತೆಗೆದುಕೊಂಡಿದೆ. ಲೇಖಕರಿಗೆ ಆದಷ್ಟೂ ಅದನ್ನು ಹದವಾಗಿ ನಿರೂಪಿಸುವಲ್ಲೇಹೆಚ್ಚು ಆಸಕ್ತಿ. ಅದಕ್ಕೆ ಸಂಗೀತವು ಒಂದು ಆಧಾರ ಮಾತ್ರ. ಆದರೂ ಸುಬ್ಬಣ್ಣನ ಸಂಗೀತದ ಕುರಿತು ಅವರ ಪ್ರಾಮಾಣಿಕ ಅಭಿಪ್ರಾಯವು ತುಂಬ ಹೃದಯಸ್ಪರ್ಶಿಯಾಗಿದೆ."ಸುಬ್ಬಣ್ಣನವರು ಪಿಟೀಲು ನುಡಿಸುವುದರ ಸೊಗಸನ್ನು ಹೀಗೆಂದು ಹೇಳಲಾರೆ. ಅವರು ತೊರೆಯಪುರದಲ್ಲಿ ದೇವಸ್ಥಾನದಲ್ಲಿ ನುಡಿಸುವಾಗ ನಾನು ಅದನ್ನು ಕೇಳಿದ್ದೇನೆ. ಇತರರು ಪಿಟೀಲು ಬಾರಿಸುವುದನ್ನೂ ಕೇಳಿದ್ದೇನೆ. ಎರಡಕ್ಕೂ ವ್ಯತ್ಯಾಸವನ್ನು ಒಮದು ಮಾತಿನಲ್ಲಿಹೇಳಬಹುದು. ಅವರು ನುಡಿಸುವುದು ಆಪ್ತನಲ್ಲಿ ಹೇಳುವ ಮನಸ್ಸಿನೊಳಗಣ ಮಾತಿನಂತೆ; ಇತರರು ಬಾರಿಸುವುದು ಸಭೆಯಲ್ಲಿ ಕೊಡುವ ಉಪನ್ಯಾಸದಂತೆ. ಇತರರು ಪಿಟೀಲನ್ನು ತಮ್ಮ ಕೌಶಲವನ್ನು ತೋರಿಸುವುದಕ್ಕಾಗಿ ಇರುವ ಒಂದು ಸಾಧನೆವೆಂಬಂತೆ ಉಪಯೋಗಿಸುವರು. ಇವರು ಅದು ತಮ್ಮ ದೇಹದ ಹೊರಗಣ ಧ್ವನಿಯೆಂಬಂತೆ ಉಪಯೋಗಿಸುವರು. ಸ್ವಾರಸ್ಯ ಹುಟ್ಟಿದಾಗ ಇವರು ನುಡಿಸಿದ ರೀತಿಯಲ್ಲಂತೂ ನಮಗೆ ಪಿಟೀಲು ಬೇರೆಯ ವಸ್ತು, ಅದನ್ನು ಇವರು ಹಿಡಿದುಕೊಂಡು ಕೈಯ್ಯಲ್ಲಿ ನುಡಿಸುತ್ತಿದ್ದಾರೆ, ಎಂಬ ಭಾವನೆಯೇ ಬರುತ್ತಿರಲಿಲ್ಲ. ಇತರರು ಸ್ವರವನ್ನು ಹುಡುಕಿಕೊಂಡು ಹೋಗುವರು. ಇವರನ್ನು ಸ್ವರವು ತಾನೇ ಹುಡುಕಿಕೊಂಡು ಬರುವಂತಿತ್ತು. ಅವರ ಮುಖದ ಮೇಲೆ ಒಂದು ಭಾವವು ಕಾಣುತ್ತಿರುವುದು; ಪಿಟೀಲಿನಲ್ಲಿ ಆ ಭಾವವು ಹೊರಹೊಮ್ಮುತ್ತಿರುವುದು. 'ರಾಧೆನಿನ್ನವಿರಹದಿಂದದೀನಳಾಗಿದಾಳೆ' ಎಂಬಮಾತನ್ನು ದೇಶೀತೋಡಿಯಲ್ಲಿನುಡಿಸುತ್ತಿರಬೇಕಾದರೆ ಅವರಮನಸ್ಸಿನಲ್ಲಿ ಅತಿಶಯವಾದ ದೈನ್ಯವು ತೋರುವುದು; ಆ ಸ್ವರವು ಕನಿಕರವನ್ನುಂಟುಮಾಡುವಂತೆ ಅಯ್ಯೋ ಎಂದು ನುಡಿಯುವುದು. ಮುಖ್ಯ ಅವರು ಪಿಟೀಲು ನುಡಿಸುತ್ತಿದ್ದ ಹಾಗೆ ನಾನು ಈಚೆಗೆ ಯಾರಿಂದಲೂ ಕೇಳಿಲ್ಲ. ಯಾವ ಸಂಗೀತಗಾರನು ಆಂತರ್ಯದಲ್ಲಿ ದೇವರ ಪೂಜೆಗೆಂದು ಉಪಯೋಗಿಸುವನೋ,

ತನ್ನ ಬುದ್ಧಿಶಕ್ತಿಯ ಪ್ರದರ್ಶನಕ್ಕೆಂದು ಉಪಯೋಗಿಸುವುದಿಲ್ಲವೋ, ಅವನಿಗೆ ಮಾತ್ರ ಈ ರೀತಿಯ ಸೊಗಸು ಲಭ್ಯ. ಯಾವನು ಗಾವು ದೊಡ್ಡದು ತಾನು ಅಲ್ಪನೆಂದು ತಿಳಿದಿರುವನೋ, ತಾನು ದೊಡ್ಡ ವಿದ್ವಾಂಸ ತನ್ನ ವಿದ್ಯೆಯನ್ನು ತೋರಿಸುವುದಕ್ಕೆ ಗಾನವು ಸಾಧನ ಎಂದು ಇರುವುದಿಲ್ಲವೋ, ಅವನಿಗೆ ಮಾತ್ರ ಈ ರಸವು ಸಾಧ್ಯ. ಸಂಗೀತಗಾರರಿಗೆ ಸಂಗೀತದ ಮಾತನ್ನು ಹೇಳುವುದಕ್ಕೆ ನಾನು ಯಾವೂರ ದಾಸಯ್ಯ? ಆದರೆ ಸುಬ್ಬಣ್ಣನವರು ಬಾರಿಸಿದ್ದನ್ನು ಕೇಳಿದಾಗ ಸಭೆಯ ಪಂಡಿತರೂ ಪಾಮರರೂ ಮೈಮರೆಯುತ್ತಿದ್ದ ಹಾಗೆ ಈಚೆಗೆ ಇತರರು ಬಾರಿಸಿದಾಗ ಮೈಮರೆತದ್ದನ್ನು ನಾನು ನೋಡಿಲ್ಲ"(ಪುಟ53–54)

ಒಮ್ಮೆ ಲೇಖಕರು ಶಿವ ಹೆಚ್ಚೋ ವಿಷ್ಣು ಹೆಚ್ಚೋ ಎಂದು ಸುಬ್ಬಣ್ಣನಲ್ಲಿ ಕೇಳಿದಾಗ ಶಂಕರಾಭರಣ ಮತ್ತು ಭೈರವಿ ಎರಡನ್ನೂ ಗಂಟೆಗಳ ಕಾಲ ಬಾರಿಸಿ ಇವುಗಳಲ್ಲಿ ಯಾವುದು ಹೆಚ್ಚು ಎಂದು ಕೇಳಿದ ಭಾವವು ಇಡೀ ಕಾದಂಬರಿಯ ತಾತ್ತ್ವಿಕ ಸಾರವನ್ನು ಹಿಡಿದಿಟ್ಟಿದೆ ಎನ್ನಬಹುದು. ಯಾವರಾಗವನ್ನೂ ಕೀಳಾಗಿ ಕಾಣದೆ ಅದರ ಪ್ರಸ್ತುತಿಯನ್ನು ಔಚಿತ್ಯಪೂರ್ಣವಾಗಿ ನೀಡುವುದೇ ಸಂಗೀತಗಾರನ ಮುಖ್ಯಗುಣವಾಗಬೇಕು. ಪ್ರತಿಭೆಯಲ್ಲಿ ಪರಂಪರೆಯೂ ವಿನೀತಭಾವವೂ ಮಿಳಿತವಾಗಬೇಕಾದ್ದು ಅವಶ್ಯಗುಣ ಎಂಬುದನ್ನು ಈ ಕಾದಂಬರಿಯು ಸಾರಿ ಸಾರಿ ಹೇಳುತ್ತದೆ.

ಕಲಾಸಕ್ತರೂ ವಿಮರ್ಶಕರೂ ಸಂಗೀತದ ಪ್ರೋತ್ಸಾಹಿಗಳೂ ಆಗಿದ್ದ ಖ್ಯಾತ ಸಾಹಿತಿ ಅನಕೃ ಅವರ ನಾಲ್ಕು ಕಾದಂಬರಿಗಳನ್ನು ಸಂಗೀತದ ವಿಷಯವಾಗಿ ಚರ್ಚಿಸಲು ತೆಗೆದುಕೊಳ್ಳಬಹುದು. ಸಂಗ್ರಾಮ, ಸಂಧ್ಯಾರಾಗ, ನಟಸಾರ್ವಭೌಮ ಮತ್ತು ಮಿಯಾ ಮಲ್ಹಾರ್. ಸಂಧ್ಯಾರಾಗವು ಅವರ ಜನಪ್ರಿಯ ಕೃತಿ. ಚಲನಚಿತ್ರವಾಗಿಯೂ ಅದು ಪ್ರಸಿದ್ಧವಾಗಿದೆ. ನಟಸಾರ್ವಭೌಮ ಅವರ ಮಹತ್ವಾಕಾಂಕ್ಷೆಯ ಬೃಹತ್ ಕಾದಂಬರಿ. ನಾಟಕೋದ್ಯಮದ ಸರ್ವ ಸುಖದುಃಖಗಳೂ ಅಲ್ಲಿ ತೋರಿಬಂದಿದೆ. ಸಂಗ್ರಾಮವು ಶಿಲ್ಪಿಯ ಜೀವನವನ್ನು ಕುರಿತ ಕಾದಂಬರಿ. ಮಿಯಾ ಮಲ್ಹಾರ ಹಿಂದೂಸ್ತಾನಿ ಸಂಗೀತಕ್ಕೆ ಸಂಬಂಧಿಸಿದ ಸಂಗೀತಕ್ಕೇ ಹೆಚ್ಚು ಒತ್ತು ಕೊಟ್ಟ ಕೃತಿ. ಇದರಲ್ಲದೆ, ಸಾಹಿತ್ಯ ರತ್ನ ಎಂಬ ಸಾಹಿತಿಯ ಜೀವನದ ಕಾದಂಬರಿಯನ್ನೂ ಮತ್ತು ಬಣ್ಣದ ಬದುಕು ಎಂಬ ನೃತ್ಯ ಕಲಾವಿದರ ಬದುಕಿನ ಕಾದಂಬರಿಯೂ ಇದೆ. ಆರಂಭದಿಶೆಯಲ್ಲಿ ಬರೆದ ಉದಯರಾಗವು ಚಿತ್ರಕಲಾವಿದನೊಬ್ಬನ ಬದುಕಿನ ಕತೆ. ಹೀಗೆ ಎಲ್ಲ ಕಲಾಪ್ರಕಾರದ ಕಲಾವಿದರ ಏಳುಬೀಳುಗಳನ್ನು ಕುರಿತು ಒಂದೊಂದು ಕಾದಂಬರಿ ರಚಿಸಿ ಉತ್ತಮವಾದ ಅಸ್ತಿವಾರ ಹಾಕಿದ್ದಾರೆ. ಸಂಗೀತದ ಉಲ್ಲೇಖವಿರುವ ಎಲ್ಲವನ್ನೂ ಎರಡನೇ ಪ್ರಕಾರದ ವ್ಯಾಪ್ತಿಯಲ್ಲೇ ಪರಿಗಣಿಸಬಹುದು.

ಸಂಗ್ರಾಮ

ಸಂಗ್ರಾಮ ಕಾದಂಬರಿಯು ಶ್ರೀಕಂಠನೆಂಬ ಶಿಲ್ಪಿಯ ಜೀವನಚಿತ್ರ. ಬಾಲ್ಯದಲ್ಲಿ ಅವನ ಸಾಂಪ್ರದಾಯಿಕ ಶಿಲ್ಪಶಾಸ್ತ್ರದ ಕಲಿಕೆಗೆ ಪ್ರೋತ್ಸಾಹ ನೀಡಿದ ಸ್ಕೂಲ್ ಇನ್ಸ್‌ಪೆಕ್ಟರ್ ರಾಮನಾಥಯ್ಯನ ಹಿನ್ನೆಲೆಯನ್ನು ಹೇಳುವ ತುಣುಕು ಮಾತ್ರ ಈ ಕಾದಂಬರಿಯಲ್ಲಿ ಸಂಗೀತಕ್ಕೆ ಸಂಬಂಧಿಸಿದ್ದು. ಆತ ಕಲಾಭಿಮಾನಿ ಯಾಕೆ ಎಂದರುಹುವ ವಿಷಯ. ಅವನು ರುದ್ರಪಟ್ಟಣ ಸಂಗೀತ ವಿದ್ವಾಂಸರ ಮನೆತನದವನು. "ರುದ್ರಪಟ್ಟಣದಲ್ಲಿ ಆಗುತ್ತಿದ್ದ ಸಂಗೀತೋತ್ಸವದಲ್ಲಿ ಪಾಲ್ಗೊಂಡು ಅಲ್ಲಿನ ಜನರ ಬಳಿ ಸೈ ಎನ್ನಿಸಿಕೊಳ್ಳಲು ಎಲ್ಲ ಸಂಗೀತ ವಿದ್ವಾಂಸರು ತವಕ ಪಡುತ್ತಿದ್ದರು. ರುದ್ರಪಟ್ಟಣದಲ್ಲಿ ಪಾರಾಗಿ ಬಂದವನು, ವಿಶ್ವದಲ್ಲಿ ಎಲ್ಲಿಯಾದರೂ

ಪಾರಾಗಬಲ್ಲ ಎನ್ನುವ ನಂಬಿಕೆಗೆ ಊರಿನವರ ವಿದ್ವತ್ತೌಢಿಮೆಯೇ ಕಾರಣವಾಗಿತ್ತು."(ಪುಟ 42) ಆ ಕಾಲದಿಂದಲೂ ಇದ್ದ ತಮಿಳುಭಾಷಿಕ ಸಂಗೀತ ವಿದ್ವಾಂಸರ ಧಾರ್ಷ್ಟ್ಯಗಳನ್ನು ಮುಂದಿನ ಸಂದರ್ಭ ನಿರೂಪಣೆಯು ಚೆನ್ನಾಗಿ ತೋರಿಸಿದೆ. ಅಲೆಕ್ಕಾಡ್ ರಾಮನಾರಾಯಣ ಅಯ್ಯರ್ ಎಂಬ ವೀಣಾವಿದ್ವಾಂಸ ರುದ್ರಪಟ್ಟಣದ ಮಹೋತ್ಸವಕ್ಕೆ ಬಂದು ವಿನಿಕೆಯಲ್ಲಿ ಜೀವಂತಿಕೆ ಇಲ್ಲದ ಹಾಗೆ ನುಡಿಸುತ್ತಾನೆ. ಜೊತೆಯಲ್ಲಿ ವಸ್ತ್ರಾಡಂಬರ ಬೇರೆ. ಪ್ರೇಕ್ಷಕರಲ್ಲಿ ಪಿಸುಮಾತುಗಳು ಆರಂಭವಾಗಿ ಕೊನೆಗೆ ಯುವಕನಾದ ಶ್ರೀನಿವಾಸಮೂರ್ತಿಯು ಇದೇನು ಸಂಗೀತವೋ ಭತ್ತ ಕುಟ್ಟುವ ಕೊಟ್ಟಣೆಯೋ ಎಂದು ತಕರಾರು ತೆಗೆಯುತ್ತಾನೆ. ಅಯ್ಯರ್, ಮೈಸೂರಿನ ಜನಗಳಿಗೆ ಸಂಗೀತ ಬರುವುದಿಲ್ಲವೆಂದು ನನಗೆ ಮೊದಲೇ ಗೊತ್ತಿತ್ತು. ಒಪ್ಪಿಕೊಂಡದ್ದು ನನ್ನ ತಪ್ಪು ಎಂದು ಮೂದಲಿಸುತ್ತಾನೆ. ಇದರಿಂದ ರೋಷಗೊಂಡ ಮೂರ್ತಿ ಮನೆಯಿಂದ ತನ್ನ ವೀಣೆ ತರಿಸಿ ಅವರನ್ನು ದ್ವಂದ್ವವಾದನದಲ್ಲಿ ಮೂರ್ತಿ ದಯನೀಯವಾಗಿ ಸೋಲಿಸುತ್ತಾನೆ. ಅವನ ಸಮಕ್ಕೆ ನುಡಿಸಲಾಗದೆ ಅಂತ್ಯಕ್ಕೆ ಕೈಮುಗಿದು ತನ್ನ ಮಾತನ್ನು ಹಿಂಪಡೆಯುತ್ತಾನೆ. ರಾಮನಾಥಯ್ಯ ಈ ಶ್ರೀನಿವಾಸಮೂರ್ತಿಯ ಸಂಬಂಧಿಯೇ. ಅವನೂ ಅಷ್ಟೇ ಪರಿಣತನಾಗಿದ್ದರೂ, ಬದುಕಿನ ಹಾದಿಗಳು ಬೇರೆಯಾಗಿ ಶಿಕ್ಷಣ ಕ್ಷೇತ್ರದಲ್ಲಿ ಮುಂದುವರೆದಿರುತ್ತಾನೆ. ಘಟನೆ ಸಣ್ಣದಾಗಿದ್ದರೂ ಸ್ವಾರಸ್ಯಕರವಾಗಿ ನಿರೂಪಿತವಾಗಿದೆ.

ಸಂಧ್ಯಾರಾಗ

ಸಂಧ್ಯಾರಾಗ ಕಾದಂಬರಿಯು ಸಂಗೀತಗಾರನೊಬ್ಬನ ಜೀವನಗಾಥೆ ಅನ್ನುವುದಕ್ಕಿಂತ ಅದೊಂದು ಕೌಟುಂಬಿಕ ಕತೆ. ಶ್ರೀನಿವಾಸರಾಯರ ಲೋಕೋಪಕಾರ, ಔದಾರ್ಯ, ಸಜ್ಜನಿಕೆಗಳ ಜೊತೆ ಹೆಂಡತಿಯರಾದ ಮೀನಾಕ್ಷಮ್ಮ ಸಾವಿತ್ರಮ್ಮನವರ ಹೃದಯ ವೈಶಾಲ್ಯಗಳು ಸೇರಿ ಆದರ್ಶ ಭೂಮಿಕೆಯನ್ನು ಪಡೆಯುತ್ತದೆ. ಅದರಲ್ಲಿ ಎರಡನೇ ಹೆಂಡತಿ ಸಾವಿತ್ರಿಯ ಮಗ ರಾಮು ಮತ್ತು ಮೊದಲನೆಯ ಹೆಂಡತಿ ಮೀನಾಕ್ಷಿಯ ಮಗ ಲಕ್ಷ್ಮಣ, ಅನಾಥನಾಗಿದ್ದು ಮನೆಯ ಮಗನೇಆಗಿ ಬೆಳೆದ ವೆಂಕಟೇಶನ ಬೆಳವಣಿಗೆಗಳು ಸೇರಿಕೊಂಡು ಕಾದಂಬರಿಯ ದಡಗಳು ಅಗಲವಾಗುತ್ತದೆ. ಹಾಗೆ ನೋಡಿದರೆ ಇಂದು ಈ ಕಾದಂಬರಿಯಲ್ಲಿ ತುಂಬ ವಿಶೇಷವಾದ ಅಂಶಗಳು ಏನಾದರೂ ಇದೆಯೇ ಎಂದು ಹುಡುಕಿದರೆ ಹೆಚ್ಚೇನೂ ಕಾಣಸಿಗುವುದಿಲ್ಲ. ಆದರೆ ಅನಕೃ ಅವರ ಆರಂಭಕಾಲದ ಕೃತಿಯಾಗಿದ್ದು, ಆ ಕಾಲದಲ್ಲಿ ತುಂಬ ವೇಗವಾಗಿದ್ದ ಸಾಮಾಜಿಕ ಪರಿವರ್ತನೆಗಳನ್ನು ಒಗ್ಗೂಡಿಸಿಕೊಂಡು ಮೈದಳೆದಿರುವ ಕಾರಣ, ಬರವಣಿಗೆಯಲ್ಲಿನ ನಾವೀನ್ಯತೆಯೂ ಸೇರಿ ಅಪಾರ ಸಾಹಿತ್ಯಾಸಕ್ತರನ್ನು ಸೆಳೆಯಿತು. ಸಂಗೀತದ ವಿಚಾರವಾಗಿ, ಆ ಕಾಲದಲ್ಲಿದ್ದವರ ಹೆಸರುಗಳನ್ನೂ ಜೊತೆಯಲ್ಲಿ ತೆಗೆದುಕೊಳ್ಳುವುದರಿಂದ ಸಮಕಾಲೀನತೆಯೂ ಬಂದು ಕತೆಯು ವಾಸ್ತವದ ಪಾತಳಿಯನ್ನು ಹೊಂದಿರುವ ಭ್ರಮೆ ಮೂಡಿಸಿ, ಓದುಗನು ತನ್ನ ಅನುಭವ ಅದರಲ್ಲಿ ಹುಡುಕುವ ಮನಸ್ಥಿತಿ ಉಂಟಾಗುತ್ತದೆ. ಅನಕೃರವರ ಸಂದರ್ಭ ಚಿತ್ರಣಗಳ ಲವಲವಿಕೆಯ ಶೈಲಿ ಆ ಕಾಲಕ್ಕೆ ಹೊಸದಾಗಿತ್ತು. ಇಂದಿಗೂ ಅದರ ಲವಲವಿಕೆ ತನ್ನ ಕಳೆಯನ್ನು ಕಳೆದುಕೊಂಡಿಲ್ಲದ ಕಾರಣ, ಕನ್ನಡಿಗರಿಗೆ ಅದೊಂದು ಅಚ್ಚುಮೆಚ್ಚಿನ ಕೃತಿಯಾಗಿಯೇ ಉಳಿದಿದೆ. ಯಾವುದೇ ಕಲೆ/ಶಾಸ್ತ್ರಗಳ ವಿವರಣ ಭಾರವು ಕೃತಿಯಲ್ಲಿಲ್ಲದೆ ಅದೊಂದು ಪೋಷಣ ಭಾವವಾಗಿ ಬಂದರೆ ಸಾಹಿತ್ಯಾಭಿಮಾನಿಗಳು ಅದನ್ನು ತೆರೆದ ಬಾಹುಗಳಿಂದ ಸ್ವೀಕರಿಸುತ್ತಾರೆಂಬುದಕ್ಕೆ ಸಂಧ್ಯಾರಾಗವು ಉತ್ತಮ ಉದಾಹರಣೆ.

ಲಕ್ಷ್ಮಣ ಬಾಲ್ಯದಿಂದಲೇ ಅನ್ಯಮನಸ್ಕನಾಗಿದ್ದು, ಒಮ್ಮೆ ಅವಧೂತನಂತಿದ್ದ ಮುಳಬಾಗಿಲ ಚೆನ್ನಪ್ಪನು ಇವನು ಭಜನೆಯಲ್ಲಿ ಹಾಡುತ್ತಿದ್ದಾಗ ಕೇಳಿ ಸಂತೋಷಿಸಿ, ಸರಸ್ವತಿ ನಿನ್ನ ನಾಲಗೆಯಲ್ಲಿ ಬೀಜಾಕ್ಷರ ಬರೆದಿದ್ದಾಳೆ ಎಂದು ಹರಸಿ ಹಾಡಿದ್ದು ಇವನ ಮನದಲ್ಲಿ ಅಚ್ಚೊತ್ತಿತು. ಚೆನ್ನಪ್ಪ ಹಾಡಿದ ಪೂರ್ವಿಕಲ್ಯಾಣಿ ಅವನ ಹೃದಯಕ್ಕೆ ಅಪೂರ್ವ ಪರಿಣಾಮವನ್ನುಂಟು ಮಾಡಿ, ಕಲಿಕೆಯ ತಳಮಳವನ್ನು ಸದಾ ಜಾಗೃತವಾಗಿರಿಸಿತು. ರಾಯರ ತಾಯಿಯ ಕಾಲಾನಂತರ ಕುಟುಂಬವು ಬೆಂಗಳೂರಿಗೆ ಸ್ಥಳಾಂತರವಾಗಿ, ಅಲ್ಲಿ ಲಕ್ಷ್ಮಣನಿಗೆ ಅನಂತಾಚಾರ್ಯರೆಂಬ ಒಳ್ಳೆಯ ಗುರುಗಳು ದೊರೆತರು. ರಾಮ–ಲಕ್ಷ್ಮಣನಿಗೆ ಮದುವೆಗಳಾದವು. ವೆಂಕಟೇಶನಿಗೆ ಮನೆ ಮಗಳಾದ ಶಾಂತಾಳನ್ನೇ ಕೊಟ್ಟು ಮದುವೆ ಮಾಡಿದರು. ಲಕ್ಷ್ಮಣನ ಹೆಂಡತಿ ಜಯಾ ಅನುರೂಪ ಸತಿಯಾಗಿದ್ದಳು. ತಾಯಿಯು ತೀರಿಕೊಂಡ ನಂತರ ತೀರಾ ಅಂತರ್ಮುಖಿಯಾದ ಲಕ್ಷ್ಮಣನು, ಹೆಂಡತಿ ಹೆರಿಗೆಯಲ್ಲಿ ತೀರಿಕೊಂಡ ಮೇಲೆ ಹುಚ್ಚನಂತಾದನು. ಅಲೆಮಾರಿಯಾಗಿ ತಿರುಗುತ್ತಾ ಮದ್ರಾಸು ತಲುಪಿದನು. ಕರ್ನಾಟಕ ಸಂಗೀತದ ಕುರಿತು ಹೆಚ್ಚು ವಿವರಕೊಡಲು ಹೋದಾಗ, ಸಾಹಿತಿಗಳು ತಮಿಳುನಾಡನ್ನು ಅವಲಂಬಿಸುವುದು ಅನಿವಾರ್ಯ. ಇದೊಂದು ಭಾಷಿಕ ಸಮಸ್ಯೆ/ಪ್ರಾದೇಶಿಕ ಅಸ್ಮಿತೆಯ ಸಮಸ್ಯೆಯೂ ಆಗಿ, ಕರ್ನಾಟಕ ಸಂಗೀತಕ್ಕೆ ಕನ್ನಡದ್ದೇ ಕೃತಿಗಳು ಸಾಕು/ಬೇಕು ಎಂಬ ಸಾಂಸ್ಕೃತಿಕ ಹೋರಾಟದ ಮುಂಚೂಣಿಯಲ್ಲಿ ನಿಂತವರು ಅನಕೃ. ಅದರ ಮೊಳಕೆ/ಧೋರಣೆ ಇದರಲ್ಲಿ ಜೀವತಳೆದಿದೆ. ಮದ್ರಾಸಿಗೆ ಹೋದ ಲಕ್ಷ್ಮಣನಿಗೆ ಮನೋರೋಗವು ಗುಣವಾಗಿ, ಅದೃಷ್ಟವಶಾತ್ ತಂಜಾವೂರು ಕೃಷ್ಣಯ್ಯರ್ ಎಂಬ ಮಹಾವಿದ್ವಾಂಸರ ಶಿಷ್ಯತ್ವ ಲಭಿಸುತ್ತದೆ. ಅವರು ತ್ರಿಕರಣಪೂರ್ವಾಕವಾಗಿ ಶಿಷ್ಯನಿಗೆ ವಿದ್ಯೆಯನ್ನು ಧಾರೆಯೆರೆದು ತಯಾರು ಮಾಡುತ್ತಾರೆ. ನಂತರ ಅವನು ಮತ್ತೆ ಊರಿಗೆ ಮರಳಿ, ಮೈಸೂರಿನಲ್ಲಿ ವೀಣಾ ಭಕ್ಷಿ ಶೇಷಣ್ಣನವರ ಮನೆಗೆ ಪಾಲ್ಘಾಟ್ ವೆಂಕಟರಾಮ ಭಾಗವತರ್ ಎಂಬುವರ ಗಾಯನ ಕೇಳಲು ಹೋದಾಗ, ಅಲ್ಲಿ ಅವರ ಜೊತೆ ರಾಗಪ್ರಯೋಗದ ಸಂಬಂಧವಾಗಿ ಮಾತಿನ ಚಕಮಕಿ ನಡೆದು ತನ್ನ ದಿವ್ಯ ಗಾಯನದಿಂದ ಅವರ ಜಂಭ ಮುರಿಯುತ್ತಾನೆ. ಲಕ್ಷ್ಮಣನ ಗಾಯನದಿಂದ ಸಂತೃಪ್ತರಾದ ಶೇಷಣ್ಣ ಮಹಾರಾಜರೆದುರು ಆಸ್ಥಾನದಲ್ಲಿ ಕಛೇರಿ ಏರ್ಪಡಿಸಿದಾಗ, ಅಲ್ಲಿಯೂ ಅವನು ಸೈ ಎನ್ನಿಸಿಕೊಂಡು ನಂತರ ಬೆಂಗಳೂರಿಗೆ ಮರಳುತ್ತಾನೆ. ಕಛೇರಿಗಳನ್ನು ಕನ್ನಡ ಸಾಹಿತ್ಯದ ಪದ, ಕೀರ್ತನೆಗಳಿಂದಲೇ ನಡೆಸಬೇಕೆಂದು ಹಟತೊಟ್ಟು,ಸೂಕ್ತವಾದ ವಚನ ಕೀರ್ತನೆಗಳನ್ನು ಸಂಗ್ರಹಿಸಿ, ರಾಗ ಸಂಯೋಜನೆ ಮಾಡಿ ಹಾಡಿ ಪ್ರಸಿದ್ಧನಾಗುತ್ತಾನೆ. ಅವನಿಗೆ ಸಾರ್ವಜನಿಕ ಸನ್ಮಾನ ಮಾಡಬೇಕೆಂದು ಪುರಜನರು ತೀರ್ಮಾನಿಸಿ, ಸಮಾರಂಭ ಏರ್ಪಡಿಸಿದಾಗ, ಅಲ್ಲಿ ಅವನು ಹಾಡುತ್ತ ಹಾಡುತ್ತ ಪೂರ್ವಿಕಲ್ಯಾಣಿ ಯನ್ನೆತ್ತಿಕೊಳ್ಳುತ್ತಾನೆ. ರಾಗವನ್ನ ದ್ರುತ ಕಾಲದಲ್ಲಿ ಹಾಡುವ ಸಮಯಕ್ಕೆ ಅವನ ಮನಸ್ಸು ತೀವ್ರ ಉದ್ವೇಗವನ್ನು ಪಡೆದು ಗಾಯನ ಮುಗಿಯುತ್ತಿದ್ದಂತೆ ದೇಹಾಂತವಾಗಿಬಿಡುತ್ತದೆ. ಇಲ್ಲಿಗೆ ಕಾದಂಬರಿಯು ಅಂತ್ಯವಾಗುತ್ತದೆ. ಕಾದಂಬರಿಯು ತನ್ನ ಚಲನಶೀಲ ಶೈಲಿಯಿಂದ ಓದುಗನಿಗೆ ಬೇಸರ ತರಿಸದಿದ್ದರೂ, ಅದರಲ್ಲಿನ ಸಂಗೀತದ ವಿಚಾರಗಳು ಅನೇಕ ಬಾರಿ ನಾಟಕೀಯ/ಅತಿಶಯವೆನ್ನಿಸುತ್ತದೆ. ಕೆಲವೊಮ್ಮೆ ಕೊಂಡಿ ಕಳಚಿಕೊಂಡಂತೆ ಕಾಣುತ್ತದೆ. ಕೊನೆಯಲ್ಲಿ ತ್ವರಿತವಾಗಿ ಓಡುವ ಕತೆಯು, ಅರ್ಥಪೂರ್ಣವಾದ ಶಾಂತವಾದ ಅಂತ್ಯವನ್ನು ಕಾಣದೆ ಅವಸರದಲ್ಲಿ ಪೂರ್ಣಗೊಂಡಂತೆ ಅನ್ನಿಸುತ್ತದೆ.

ಪೂರ್ವಿಕಲ್ಯಾಣಿ ರಾಗದ ಕುರಿತು ಕಾದಂಬರಿಯಲ್ಲಿ ವಿಶೇಷ ಪ್ರಸ್ತಾಪ ಬರುತ್ತದೆ. ಲಕ್ಷ್ಮಣ

ಸಣ್ಣವನಿದ್ದಾಗ, ಚೆನ್ನಪ್ಪ ಅದನ್ನು ಹಾಡಿ ಅವನ ಮನದಲ್ಲಿ ಪ್ರಭಾವ ಬೀರುತ್ತಾನೆ. ಮುಂದೆ ಕೃಷ್ಣಯ್ಯರ್ ಹೆಸರು ಪೂರ್ವಿ ಕೃಷ್ಣಯ್ಯರ್ ಅಂತಲೇ ಪ್ರಸಿದ್ಧಿ ಎಂದೂ, ಅವರಂತೆ ಬೇರೆಯವರು ಹಾಡುತ್ತಿರಲಿಲ್ಲವೆಂದೂ ಲೇಖಕರು ನಿರೂಪಿಸುತ್ತಾರೆ. ಆದರೆ ಲಕ್ಷ್ಮಣನು ಮನೆಗೆ ಬಂದ ಲಾಗಾಯ್ತು ಅವರು ಹಾಡುವುದನ್ನು ನಿಲ್ಲಿಸಿಬಿಡುತ್ತಾರೆ. ಅವನಿಗೆ ಆ ಹಾಡಿಕೆಯ ನ್ಯೂನತೆ ತಿಳಿದರೆ ಎಂಬ ಭಾವವೋ ಗೊತ್ತಿಲ್ಲ. ಕಡೆಗೆ ಲಕ್ಷ್ಮಣನ ಬಹು ಒತ್ತಾಯದ ಮೇರೆಗೆಅವನು ವಿದ್ಯಾಭ್ಯಾಸ ಮುಗಿಸಿ ಹೋಗುವ ದಿನ ಅದನ್ನು ವಿಸ್ತಾರವಾಗಿ ಹಾಡುತ್ತಾರೆ. ಹಾಡಿದ ಮೇಲೆ,"ಲಕ್ಷ್ಮಣಾ, ಇದು ಪೂರ್ವಿ–ಆದರೆ ಸಂಧ್ಯಾರಾಗ ಪೂರ್ವಿಯಲ್ಲ. ನನಗೆ ನಿಜವಾಗಿಯೂ ಈ ರಾಗವನ್ನು ಹಾಡುವುದಕ್ಕೆ ಬರುವುದಿಲ್ಲ. ಭೂಮಿಯನ್ನು ಭೇದಿಸಿಕೊಂಡು ರಾಗ ಬರಬೇಕು. ನನ್ನ ಪೂರ್ವಿ ಹೃದಯದಿಂದ ಬರುವುದಿಲ್ಲ, ತಲೆಯಿಂದ ಬರುತ್ತದೆ. ನಿನಗೆ ಪೂರ್ವಿಯ ದತ್ತಿ ಕೊಟ್ಟಿದ್ದೇನೆ. ನಾನು ಆಸೆಪಟ್ಟುಕೊಂಡಿದ್ದ ಹಾಗೆ ಎಂದಾದರೂ ನೀನು ಹಾಡಿಬಿಡು. ಅಂದು ನಾನು ಋಣವಿಮುಕ್ತನಾಗುತ್ತೇನೆ. ನಿನ್ನಿಂದ ನಾನು ನಿರೀಕ್ಷಿಸುವ ಗುರುದಕ್ಷಿಣೆ ಅದೇ ಕಣಪ್ಪಾ" ಎಂದರು. (ಪುಟ 117) ಇದರಲ್ಲಿ ಭಾವಗ್ರಹಣ ಮಾಡೋದಾದ್ರೆ ಅಯ್ಯರ್ ಅವರಿಗೆ ಪೂರ್ವಿಕಲ್ಯಾಣಿ ರಾಗ ಶಾಸ್ತ್ರೀತ್ಯಾ ಹಾಡಲು ಗೊತ್ತು. ಆದರೆ ಅದರ ಪ್ರಸ್ತುತಿ ಸ್ವತಃ ಅವರಿಗೇ ಸಮಾಧಾನ ತಂದಿಲ್ಲ. ಆ ಕಾರಣದಿಂದ ಲಕ್ಷ್ಮಣನಿಗೆ ರಾಗದ ಶಾಸ್ತ್ರಪರಿಚಯ ಮಾಡಿಕೊಟ್ಟು, ಮುಂದುವರಿ ಅಂದಿರಬಹುದು. ಅವನು ಮುಂದೆ ಮನೆಯ ಬಳಿಯ ಆರಾಮಧಾಮ(ಬಸವನಗುಡಿ?)ದಲ್ಲಿ ಕುಳಿತುಕೊಂಡು ರಾಗದರ್ಶನಕ್ಕಾಗಿ ಸಾಧನೆ ಮಾಡುತ್ತಿದ್ದ. ಆದರೆ ಸಂಧ್ಯಾರಾಗ ಪೂರ್ವಿ ಅಲ್ಲ ಅನ್ನುವ ಮಾತಿನ ಅರ್ಥ ಏನೆಂಬುದು ಗೊತ್ತಾಗಿಲ್ಲ. ಶಾಸ್ತ್ರಗ್ರಂಥ ಪ್ರಕಾರ ನೋಡಿದಾಗ, ಪೂರ್ವಿಕಲ್ಯಾಣಿ ಸಂಜೆಯ ರಾಗ. ಆದರೆ ಲೇಖಕರು ಸಂಧ್ಯಾಕಾಲದ ರಾಗ ಪೂರ್ವಿ ಅಲ್ಲ ಎಂದು ಹೇಳಿಸಿದ್ದಾರೆ. ಇದು ಮೇಲ್ನೋಟಕ್ಕೆ ಸಂಧ್ಯಾರಾಗ ಎಂಬ ಕಾದಂಬರಿಯ ಶಿರೋನಾಮೆಗೆ ಹೊಂದಿಸುವ ವಿವರಣೆಯಂತೆ ಇದೆ, ಆದರೆ ವಿಸಂಗತಿಯಿಂದ ಕೂಡಿದೆ.

ಇನ್ನು ವೀಣೆ ಶೇಷಣ್ಣನವರ ಮನೆಯಲ್ಲಿ ಭಾಗವತರ್ ಹಾಡುವಾಗಿನ ಪ್ರಸಂಗ ಆಸಕ್ತಿಕರವಾಗಿದೆ. ಅಲ್ಲಿ ತೋಡಿ ರಾಗವನ್ನು ಆಲಾಪಿಸುತ್ತಾ ಅವರು ಪಂಚಮವನ್ನು ಸೇರಿಸಿಕೊಳ್ಳದೆ ಮಧ್ಯಮ ಮತ್ತು ದೈವತಗಳನ್ನು ಜೀವಸ್ವರ/ಅಂಶವಾಗಿ ಬಳಸಿಕೊಂಡು ಹಾಡಿದಾಗ, ಕೇಳುಗರಲ್ಲೊಬ್ಬರು, ಅವರೋಹಣದಲ್ಲಿ ಪಂಚಮ ಹಚ್ಚಬಹುದಲ್ಲವೇ ಎಂದರು. ಅದಕ್ಕೆ ಭಾಗವತರು ಇದನ್ನ ಹೀಗೇ ಹಾಡಬೇಕು, ಇಲ್ಲವೆಂದರೆ ಬೇರೆ ರಾಗವಾಗುತ್ತದೆ ಎಂದು ವ್ಯಗ್ರವಾಗಿ ನುಡಿದರು. ಅಲ್ಲೇ ಇದ್ದ ಲಕ್ಷ್ಮಣನು ನೀವು ಹಾಡಿದ್ದು ಅದ್ಭುತ ರಸವಾಗಿದೆ. ಆದರೆ ಅಲ್ಲಿ ಬೇಕಾದ ಶೋಕ ಮತ್ತು ಕರುಣಾರಸವಿಲ್ಲ ಎಂದು ಹೇಳಿ, ಅಪ್ಪಣೆ ಪಡೆದು ಅವರೋಹದಲ್ಲಿ ಪಂಚಮ ಹಚ್ಚಿ ಒಂದು ಗಂಟೆ ಹಾಡಿದ. ಅವನ ಹಾಡಿಗೆ ಎಲ್ಲರೂ ಬೆರಗಾದರು. ಭಾಗವತರ ಸಮೇತ. ಇದು ಸ್ಥೂಲವಾದ ವಿವರಣೆ. (ಪುಟ130–131) ಆದರೆ ಶಾಸ್ತ್ರಗ್ರಂಥದಲ್ಲಿ ಹುಡುಕಿದಾಗ, "ಗಾಂಧಾರಮಧ್ಯಮಮತ್ತು ದೈವತಗಳು ಜೀವಸ್ವರಗಳು. ಪಂಚಮವರ್ಜಿತವಾದ ಸಂಚಾರಗಳು ಈ ರಾಗಕ್ಕೆ ಪೋಷಕವಾಗಿರುತ್ತವೆ"[10], "ಪಂಚಮ–ಷಡ್ಜ ವರ್ಜ್ಯ ಮಾಡಿ ಹಾಡಿದಾಗಈ ರಾಗ ಗ್ರಹಬೇಧದಂತೆ ಶೋಭಾಯಮಾನವನ್ನುಂಟು ಮಾಡುತ್ತದೆ"[11] ಎಂಬ ವಿವರ ಸಿಗುತ್ತದೆ. ವಿದ್ವಾಂಸ ಸ್ನೇಹಿತರನ್ನು ಸಂಪರ್ಕಿಸಿದಾಗ ಅವರೂ ಸೋದಾಹರಣವಾಗಿ ಪಂಚಮ ವರ್ಜ್ಯವು ತೋಡಿಯ ರಾಗಪ್ರಕಾಶಕ್ಕೆ ಹೇಗೆ ಸಹಕಾರಿ ಎಂಬುದನ್ನು ಹಾಡಿ ವಿವರಿಸಿದರು. ಅನಕೃ ಹೀಗೆ ಜಿಜ್ಞಾಸೆಯ ವಿಷಯ

ಎತ್ತಿಕೊಂಡದ್ದರಿಂದ ಪಾಮರ ಓದುಗರಿಗೇನೂ ವ್ಯತ್ಯಾಸವಾಗಲಾರದು. ಏಕೆಂದರೆ ಅಲ್ಲಿ ವ್ಯಕ್ತಿತ್ವ ಪ್ರಕಾಶಕ್ಕೆ ಆಸ್ಪದವಾದ ಘಟನೆಯೊಂದು ನಡೆಯಿತು ಎನ್ನಲಷ್ಟೇ ಈ ಪ್ರಕರಣವನ್ನು ತರಲಾಗಿದೆ. ಆದರೆ, ಶಾಸ್ತ್ರವನ್ನು ಸಾಹಿತ್ಯದಲ್ಲಿ ಬಳಸುವಾಗ, ಅದಕ್ಕೆ ಸಮ್ಮತವಾದ ಎಚ್ಚರಿಕೆ ಬೇಕು. ಅನಕೃ ಅವರು 15 ದಿನಗಳಲ್ಲಿ ಈ ಕಾದಂಬರಿ ಬರೆದರಂತೆ! ಈ ಅವಸರವೂ ಇಂತಹ ಪ್ರಮಾದಕ್ಕೆ ಕಾರಣವಾಗಿರಬಹುದು. ಸಂಗೀತದ ಕುರಿತ ವಿಷಯ ಪ್ರಸ್ತುತಿಯಲ್ಲಿ ಆ ಕಾದಂಬರಿಯು ವಾಸ್ತವದ ಹದಕ್ಕೆ ಬಂದೇ ಇಲ್ಲ. ಲಕ್ಷ್ಮಣನು ಕೃಷ್ಣಯ್ಯರ್ ಮನೆಗೆ ಹೋದ ಬಳಿಕದ ವಿವರಣೆಯನ್ನು ಒಂದೇ ಪೇಜಿನಲ್ಲಿ ಮುಗಿಸಿಬಿಟ್ಟಿದ್ದಾರೆ! ಮುಂದೆಯೂ ಅವನು ಕೊನೆಯದಾಗಿ ಪೂರ್ವಿ ಹಾಡಿ ಬದುಕೇ ಅಂತ್ಯವಾಗಿ ಬಿಡುವುದು ಅವಸರದ ಅಂತ್ಯವಾಗಿ ತೋರುತ್ತದೆ. ಎಲ್ಲೆಡೆ ಕಾರ್ಯಕ್ಷೇತ್ರ ಪರಿಚಯವಿದೆಯೆಂಬ ವಿಶ್ವಾಸದಲ್ಲಿ ಹೆಣೆದ ಕತೆಯಂತೆ ತೋರಿ, ಹೂರಣದಲ್ಲಿ ತೂಕವು ಕಡಿಮೆಯಾದಂತೆ ತೋರುತ್ತದೆ. ಕಾದಂಬರಿಯಾಗಿ ಜೀವನ ವಿವರಗಳನ್ನು ಸಮೃದ್ಧವಾಗಿ ಕೊಟ್ಟಿರುವ ಕಾರಣ ಅದು ತನ್ನ ಜನಪ್ರಿಯತೆ ಉಳಿಸಿಕೊಳ್ಳುವಲ್ಲಿ ಸಫಲವಾಗಿದೆ.

ನಟಸಾರ್ವಭೌಮ

ನಟಸಾರ್ವಭೌಮವು ಪ್ರಧಾನವಾಗಿ ನಾಟಕದ ಬದುಕನ್ನು ಹೇಳುವುದಾದರೂ ನಾಯಕಿ ನೀಲಾಸಾನಿ ಮತ್ತು ನಾಯಕ ರಾಜಾಚಾರ್ಯ ಇಬ್ಬರೂ ಸಂಗೀತದಲ್ಲಿ ಪರಿಶ್ರಮ ಉಳ್ಳವರು ಎಂದು ತೋರಿಸುತ್ತಾರೆ. ಕಾದಂಬರಿ ರಚನೆಯಲ್ಲಿ ಪಳಗಿದ ಕೈಯ್ಯಾದ ಅನಕೃ ಪಾತ್ರಗಳನ್ನು ಕಟ್ಟುವಲ್ಲಿ, ಅದಕ್ಕೆ ಬೇಕಾದ ಪೋಷಣೆಗಳನ್ನು ಕೊಡುವಲ್ಲಿ ನಿಸ್ಸೀಮರು. ಉದಾಹರಣೆಗೆ "ಶ್ರೀನಿವಾಸಯ್ಯಂಗಾರ್ಯರು ಒಂದು ಕಾಲದಲ್ಲಿ ಹೆಸರುವಾಸಿಯಾದ ಹಾಡುಗಾರರಾಗಿದ್ದರು. ತ್ರಿಕಾಲದಲ್ಲಿ ಪಲ್ಲವಿ ಹಾಡುವಷ್ಟು ಚೈತನ್ಯ. ಒಳ್ಳೆ ಬಿಕ್ಕಟ್ಟಾದ ಹಾಡುಗಾರಿಕೆ. ಕೀರ್ತನೆಗಳನ್ನು ಅನಾಗತದಲ್ಲಿ ಎತ್ತಿಕೊಂಡು ಮೃದಂಗದವನನ್ನು ಕಕ್ಕುಬಿಕ್ಕಿ ಹಿಡಿಸಿ ಬಿಡುತ್ತಿದ್ದರು. ಅವರನ್ನು ಕಂಡರೆ ಪಕ್ಕವಾದ್ಯಗಾರರು ಗಡಗಡನೆ ನಡುಗುತ್ತಿದ್ದರು"(ಪುಟ 17) ಹೀಗೆ ಒಂದು ಸಂಕ್ಷಿಪ್ತ ಸಂಗೀತಾತ್ಮಕ ವಿವರಣೆಯಲ್ಲಿ ಅವರ ವ್ಯಕ್ತಿತ್ವವನ್ನೂ ಕಟ್ಟಿಕೊಡುತ್ತಾರೆ. ಹೀಗೆ ಬರವಣಿಗೆಯು ಕರತಲಾಮಲಕವಾದ ಅನಕೃ ಅವರ ಕೃತಿಗಳಲ್ಲಿ ಅತಿಯಾದ ವಿಶ್ವಾಸವು ಕಾಣಸಿಗುತ್ತದೆ. ಅದರ ಕಾರಣದಿಂದಲೇ ಅವರ ಕಾದಂಬರಿಗಳಲ್ಲಿ ಕಾಣುವ ಲೀಲಾಜಾಲ ಕಥಾಸ್ವರೂಪದ ಹಿಂದೆ ಕೃತಕ ಗುಣ ಇಣುಕುತ್ತದೆ. ಶ್ರೀನಿವಾಸಯ್ಯಂಗಾರ್ಯರು ಮನಸ್ಸು ಬಿಚ್ಚಿ ಹೇಳಿಕೊಡದವರಾಗಿದ್ದರೂ ರಾಜನಿಗೆ ಸಂಗೀತವು ಒಲಿದು, ಅವರೇ ಬೆರಗು ಪಡುವಂತೆ ತ್ಯಾಗರಾಜ ಉತ್ಸವದಲ್ಲಿ ಹಾಡಿಬಿಟ್ಟ! ಅವರ ಹತ್ತಿರವೇ ಕಲಿಯುತ್ತಿದ್ದ ನೀಲಾಸಾನಿಯೂ ಬೆರಗಾದಳು. ಹೀಗೆ ಕತೆ ಮುಂದುವರಿಯುತ್ತೆ. ಅವನ ನಾಟಕದ ಪ್ರಥಮಗಳು ನಡೆದ ಮೇಲೆ ಆಂತರಿಕ ಒಗ್ಗಟ್ಟಿಲ್ಲದ ಕಾರಣ ಅವರ ಯೂನಿಯನ್ನು ಹಾಗೇ ಕರಗಿ ಹೋಗತ್ತೆ. ಆಗ ಅವನು ಮತ್ತೆ ಕಠಿಣ ಸಂಗೀತದಲ್ಲಿ ತೊಡಗುತ್ತಾನೆ. ಹಾಗೆ ಅಭ್ಯಾಸದಲ್ಲಿ ತೊಡಗಿದ್ದಾಗ ಒಂದು ಸನ್ನಿವೇಶ: "ಒಂದುದಿನ ತದೇಕಚಿತ್ತನಾಗಿ ತಂಬೂರಿ ಶೃತಿಯೊಡನೆ ತನ್ನ ಜೀವಶೃತಿಯನ್ನುಮೇಳಮಾಡಿ ಹಾಡುತ್ತ ಕುಳಿತಿದ್ದಾನೆ. ರಾಗ ಕಲ್ಯಾಣಿಯಿಂದ ತಾನಾಗಿ ಶ್ರೀರಂಜನಿಯ ಕಡೆಹರಿಯಿತು. ರಾಗ ರೂಪಹೊತ್ತುಬಂದು ಎದುರಿಗೆನಿಂತಂತೆಭಾಸವಾಯಿತು. ರಾಗ ರಾಗಿಣಿಗಳಿಗೆ ಅಭಿಮಾನ ದೇವತೆಗಳಿದ್ದಾರೆ. ಹಾಡುವ ಕಾಲದಲ್ಲಿ ಗಾಯಕನನ್ನು ಆವರು ಆಶ್ರಯಿಸುತ್ತಾರೆ ಎಂಬ ವಾದವನ್ನು ಕೇಳಿದ್ದ. ಶ್ರೀರಂಜನಿ ಎದುರಿಗೆ ಬಂದು ನಿಂತಂತಿತ್ತು. ದಿವ್ಯಸುಂದರಿ.

ರೂಪ ಯೌವ್ವನಗಳ ವಸಂತ ಲಕ್ಷ್ಮಿ. ಪ್ರಕೃತಿ, ಪುರುಷರು ಕೂಡಿದಂತೆ ರಾಗಾಭಿಮಾನ ದೇವತೆ, ರಸಋಷಿ ಕೂಡಿದ್ದಾರೆ. ನಾದದ ಹೊನಲು ಪರಿಶುದ್ಧ ಗಂಗಾ ಪ್ರವಾಹದಂತೆ ಹೊರಟಿದೆ....."(ಪುಟ 65) ಆ ರಾಗದೇವತೆನೀಲಾಳಂತೆಯೇ ಕಂಡಾಗ, ಅವಳಮನೆಗೆ ಓಡುತ್ತಾನೆ. "ಬಾಗಿಲು ಸೇರುವ ಹೊತ್ತಿಗೆ ಮಧುರವಾದ ಗಾಯನ ಕೇಳಿಬರುತ್ತಿತ್ತು. ನಿಂತು ಗಾಯನವನ್ನು ಆಲಿಸಿದ. ತಂಬೂರಿಯ ಶ್ರುತಿಯನ್ನು ಅಪಕ್ವವೆನಿಸುವ ಶ್ರುತಿ ಧೋರಣೆ. ತಂತೀವಾದ್ಯದ ಎಳಸನ್ನು, ನಯವನ್ನು, ಲಾಲಿತ್ಯವನ್ನು ಅಲ್ಲಗಳೆಯುವಂತಹ ಸುಕೋಮಲತೆ... ಮತ್ತೆ ಅದೇ ರಾಗ... ಶ್ರೀರಂಜನಿ. ಅದೇ ವರೇಖಿಗಳು, ಅದೇ ಮೂರ್ಛನ ಕಂಪನಗಳು, ಅದೇ ವಿಸ್ತಾರ, ಅದೇ ಜೀವಸ್ವರಾನು ಸಂಧಾನ" (ಪುಟ 66) ಹೀಗೆ ನೀಲಾಳಿಗೆ ಸನಿಹವಾಗುವ ರಾಜನು ನಂತರದ ಅನಿರೀಕ್ಷಿತ ಘಟನೆಗಳಿಂದಾಗಿ ಅವಳಿಂದ ದೂರ ಸಾಗುತ್ತಾನೆ. ಅನ್ವಾರಿ ಎಂಬ ಹಿಂದೂಸ್ತಾನಿ ಗಾಯಕಿಯನ್ನು ಕಂಪನಿಗೆ ಸೇರಿಸಿಕೊಳ್ಳುವ ಸನ್ನಿವೇಶದಲ್ಲಿ ಹಿಂದೂಸ್ತಾನಿಯ ಗಾಯನದ ಕೆಲವು ವಿವರ ಕೊಡುತ್ತಾರೆ. ಅವನ ನಾಟಕ ಕಂಪನಿಯು ಮದ್ರಾಸಿಗೆ ಹೋದಾಗ ಅಲ್ಲಿನ ಪ್ರಸಿದ್ಧ ವಿದ್ವಾಂಸರು ಇವನ ಗಾಯನವನ್ನು ಕೇಳಿ ದಂಗು ಬಡೆದದ್ದಾಗಿ ಚಿತ್ರಿಸುತ್ತಾರೆ. ಚಿತ್ರಣದಲ್ಲಿ ಅಂತಹ ಸ್ವಾರಸ್ಯವೇನೂ ಇಲ್ಲ. ಇಲ್ಲಿ ಗಮನವೆಲ್ಲವೂ ನಾಟಕ ಕಲೆಯ ಬಗೆಗಿದೆ. ಒಟ್ಟಾರೆಯಾಗಿ ನಾಟಕಕ್ಕೆ ಒತ್ತಾಸೆಯಾಗಿ ಸಂಗೀತದ ವಿವರಗಳು ಅಲ್ಲಲ್ಲಿ ಸಣ್ಣದಾಗಿ ಬರುತ್ತವೆ.

ಗ್ರಂಥಋಣ:

8. 'The European concert-goer pays more honour to skill than to imagination'Whether art or skill? – Dr.Ananda Coomaraswamy, Young India, June 1919.
9. ಪುಟ12–16, ನೆನಪುಗಳು, ಲೇಖಕರು: ಕೆ.ವಾಸುದೇವಾಚಾರ್ಯ. ಎರಡನೇ ಮುದ್ರಣ 1978, ಕಾವ್ಯಾಲಯ ಮೈಸೂರು.
10. ಪುಟ 526, ಕರ್ನಾಟಕ ಸಂಗೀತ ದೀಪಿಕೆ, ಡಾ.ವಿ.ಎಸ್.ಸಂಪತ್ಕುಮಾರಾಚಾರ್ಯ, ಪ್ರೊ.ವಿ.ರಾಮರತ್ನಂ. ಎರಡನೇ ಮುದ್ರಣ, 2012 ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು
11. ಪುಟ 153, ಪಂಚಮವೇದ, ಲೇಖಕರು ಮತ್ತು ಪ್ರಕಾಶಕರು:ವಿದ್ವಾನ್ ಎಸ್.ಕೆ.ಪದ್ಮನಾಭ ಆಚಾರ್ಯ, ಕಾಸರಗೋಡು.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುತ್ತದೆ)

✠✠✠

ಮನುಷ್ಯನಾದ ರಾಮದೇವರನು
ಮನುಷ್ಯಳಾದ ಶಬರದೇವಿ
ಕಾದದ್ದೊಂದು ಸೋಜಿಗವೆ

RNI Reg No. : KARKAN /2012/49251

CHINTHANA BAYALU **A Peer Reviewed Journal** **ISSN 2278-2192**
Kannada Quarterly, Volume 9, Issue 2, October - December 2020
Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Printed at
Aakrithi Prints
Light House Hill Road, Mangaluru - 575 001

Pages : 64

ವಾರ್ಷಿಕ ಚಂದಾ : ರೂಪಾಯಿ ಇನ್ನೂರು

(ಅಂಚೆ ವೆಚ್ಚ ಸೇರಿ)

ಮೂರು ವರ್ಷಗಳಿಗೆ : ರೂಪಾಯಿ ಆರುನೂರು

ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ

ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ

ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ

ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ನಾಟಕ ಬ್ಯಾಂಕ್
ಬಂಟ್ವಾಳ ಮೂಡ ಶಾಖೆಯಲ್ಲಿ
ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC : KARB0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ನಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com